ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

ನನ್ನ ಜನಗಳು

ಡಾ.ಸಿದ್ಧಲಿಂಗಯ್ಯ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

ನನ್ನ ಜನಗಳು

ಮತ್ತು ಇತರ ಕವಿತೆಗಳು

ಡಾ. ಸಿದ್ಧಲಿಂಗಯ್ಯ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

NANNA JANAGALU MATTU ITARA KAVITEGALU : collection of poems written by **Dr. Siddalingaiah**, Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xliv + ೧೫೨
ಬೆಲೆ : ರೂ. ೫೦/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆ್ಯಡ್ಸ್
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೬೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

(ಗೋವಿಂದ ಎಂ. ಕಾರಜೋಳ)

ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝುಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

ಎಲ್.ಎಸ್. ಶೇಷಗಿರಿ ರಾವ್
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು

ಪ್ರೊ. ಎಲ್.ಎಸ್. ಶೇಷಗಿರಿರಾವ್

ಸದಸ್ಯರು

ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

ಸದಸ್ಯ ಕಾರ್ಯದರ್ಶಿ

ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಉತ್ಪ್ರೇಕ್ಷಲಂಕಾರ ಚಕ್ರವರ್ತಿ !

ಎರಡು ದಶಕಗಳಿಗೂ ಹಿಂದೆ ಮೊದಲ ಬಾರಿಗೆ ನಾನು ಗೆಳೆಯ ಸಿದ್ಧಲಿಂಗಯ್ಯನವರ ಕವಿತೆಗಳನ್ನು ಓದಿದಾಗ ಬೆಚ್ಚಿಬಿದ್ದಿದ್ದೆ. ಕಾರಣ, ಕವಿಯ ವ್ಯಕ್ತಿತ್ವಕ್ಕೂ, ಕವಿತೆಗಳಿಗೂ ಇರುವ ವ್ಯತ್ಯಾಸ. ದೈನ್ಯತೆಯೇ ಸಾಕಾರವಾಗಿದ್ದ ಪುಟಾಣಿ ಕವಿ. ಹೆಚ್ಚೆಂದರೆ, ಇಪ್ಪತ್ತೈದು ಕೆ.ಜಿ. ಆಳು. ಆದರೆ ಕವಿತೆಗಳೋ ಬೆಂಕಿಯ ಉಂಡೆಗಳು. ಆದರೆ ಕವಿಯ ವ್ಯಕ್ತಿತ್ವದಲ್ಲಿದ್ದ ಬಾಹ್ಯದೈನ್ಯ ಬರೀ ಮುಖವಾಡವಷ್ಟೇ ಎಂದು ನನಗೆ ಕವಿಯ ಪರಿಚಯವಾದ ಒಂದೆರಡು ವಾರಗಳಲ್ಲಿಯೇ ತಿಳಿಯಿತು. ದೈನ್ಯದ ಅಥವಾ ಮೇಲ್ಪದರದ ವಿನಯದ ಹಿಂದೆ ಭಾರೀ ತುಂಟತನ. ಈ ಪುಟಾಣಿ ವ್ಯಕ್ತಿಯ ಹಿಂದೆ ಇಷ್ಟೇ ಗಾತ್ರದ ಐದಾರು ಜನ ಹಿಂಬಾಲಕರು. ಈ ಐದಾರು ಜನರ ಗುಂಪು ಪುಟಪುಟನೆ ಕಬ್ಬನ್ ಪಾರ್ಕಿನೊಳಗಿಂದ ತೂರಿ ಸರ್ಕಾರಿ ಕಾಲೇಜಿಗೆ ಹಾಜರಾಗುತ್ತಿದ್ದರು. ನಾನು ಕೂಡಾ ಆಗ ನಾಯಿ ಓಡಿಸುವ ಕೋಲಿನ ಹಾಗಿದ್ದೆ. ಆದ್ದರಿಂದ, ಆ ಗುಂಪಿನಲ್ಲಿ ಸಹಜವಾಗಿ ಬೆರೆತುಹೋಗುತ್ತಿದ್ದೆ.

ಮೊದಲ ದಿನ ಕವಿ ತನ್ನ ಕವಿತೆಗಳನ್ನು ತಂದು ಓದಿದಾಗ ಆಶ್ಚರ್ಯವಾದದ್ದು ಅವುಗಳ ಲಯದ ಪರಿಗತಿ ಕಂಡು. ಈ ವ್ಯಕ್ತಿಯೇ ಬರೆದಿರಬಹುದೆ ಇವು ಎಂಬ ಅನುಮಾನವೂ ಅಲ್ಲಿ ಜಾಗೃತವಾಯಿತು. ನನ್ನ ಬಾಲ್ಯದಲ್ಲಿ ಅನೇಕರು ಕುವೆಂಪು ಮತ್ತು ಬೇಂದ್ರೆಯವರ ಅಷ್ಟು ಪ್ರಸಿದ್ಧವಲ್ಲದ ಪದ್ಯಗಳನ್ನು ಅವರದು ಎಂದು ಓದುತ್ತಿದ್ದದ್ದು ಅನುಭವಕ್ಕೆ ಬಂದಿತ್ತು. ನಮ್ಮ ಪೇಟೆಯ ಒಬ್ಬಾತ ಕುವೆಂಪು 'ರಾಮಾಯಣ ದರ್ಶನಂ'ನ ಕೆಲವು ಭಾಗಗಳನ್ನೇ ತನ್ನ ಹಸ್ತಾಕ್ಷರದಲ್ಲಿ ಕಾಪಿ ಮಾಡಿ ತನ್ನದು ಎಂದು ರೈಲುಬಿಟ್ಟಿದ್ದ. ಮತ್ತು ಇವನ್ನು ಸಾಕ್ಷಾತ್ ಸೀತಾದೇವಿಯೇ ಹೇಳಿ ಬರೆಸಿದ್ದಳು ಎಂದೂ ಕೊಂಚ ಅಲೌಕಿಕ ತನ್ಮಯತೆಯಿಂದ ಹೇಳಿದ್ದ. ಪಕ್ಕದ ಬೀದಿಯ ಸಾಬರ ಹೆಂಗಸೊಬ್ಬಳು ಆತನ ಸೀತಾಮಾತೆ. ಆತ ಪಕ್ಕದ ಕೈ ತೋಟದಲ್ಲಿ ಸಂಜೆ ಅವಳಿಂದ ಕಾವ್ಯ ಪಡೆಯುತ್ತಾನೆ ಎಂದು ನನಗಿಂತ ದೊಡ್ಡವರಾದ ಪೋಲಿ ಹುಡುಗರು ಹೇಳುತ್ತಿದ್ದರು. ನಮ್ಮ ಕವಿ ಸಿದ್ಧಲಿಂಗಯ್ಯನವರ ಪದ್ಯಗಳನ್ನು ಓದಿದಾಗ ಈ ಪಾರ್ಟಿಯೂ ಬುರುಡೆ ಬಿಟ್ಟು ನನಗೆ ಟೋಪಿ ಹಾಕುತ್ತಿರಬಹುದೆ ಎಂಬ ಅನುಮಾನ ಬಂತು. ಅಷ್ಟುಹೊತ್ತಿಗೆ ಕುವೆಂಪು ಪದ್ಯಗಳನ್ನು ಸಾಕಷ್ಟು

ಓದಿದ್ದೆ. ಹೀಗಾಗಿ, ಕುವೆಂಪು ಲಯಗಳು ಅಲ್ಲಿ ಪ್ರಧಾನವಾಗಿ ಕಾಣುತ್ತಿದ್ದದ್ದು ಸ್ಪಷ್ಟವಿತ್ತು.

ಕುವೆಂಪು ಲಯವಿತ್ತು ಸರಿ. ಆದರೆ, ಇವು ಕುವೆಂಪುಗಿಂತ ತೀರಾ ಭಿನ್ನವಾಗಿಯೂ ಇತ್ತು. ನಾನು ಸಿದ್ಧಲಿಂಗಯ್ಯನವರ ಮೊದಲ ಪದ್ಯ ಓದಿದ್ದು 'ಸುಂಟರಗಾಳಿ' ಎಂದು ನೆನಪು. "ಮೂಳೆ ತುಂಬಿದ ಹಣೆಗೆ ಸೊಟ್ಟ ಸೊಟ್ಟಗೆ ಬಳಿದ ನಾಮ ವಿಭೂತಿಯಲ್ಲಿ ಧರ್ಮವಿಲ್ಲ" ಎಂಬ ಸಾಲುಗಳಲ್ಲಿನ ವ್ಯಂಗ್ಯ ಕುವೆಂಪುವಿಗೆ ಅಷ್ಟು ಸುಲಭವಾಗಿ ಸಾಧ್ಯವಲ್ಲ. ತಮ್ಮಲ್ಲಿ ಸಮೃದ್ಧವಾಗಿರುವ ಕಾಮಿಕ್ ಪ್ರತಿಭೆಯನ್ನು ಸಿದ್ಧಲಿಂಗಯ್ಯ ಬಳಸಿಕೊಂಡದ್ದು ಅನೇಕ ವರ್ಷಗಳ ತರುವಾಯ. ಅದರಲ್ಲೂ ಕವಿತೆಯಲ್ಲಿ ಕಾಮಿಕ್ ಪ್ರತಿಭೆ ಮೊದಲು ಕಾಣಲಿಲ್ಲ. ಕಂಡದ್ದು ಗದ್ಯದಲ್ಲಿ. ಆ ವಿಷಯಕ್ಕೆ ಆಮೇಲೆ ಬರುತ್ತೇನೆ.

ಕುವೆಂಪುವಿನ ದಟ್ಟ ಪ್ರಭಾವ ಈ ಕವಿಯ ಮೊದಲ ಪದ್ಯಗಳಲ್ಲಿ ಕಂಡದ್ದು ಸಹಜವೂ, ನೀರಿಕ್ಷಿತವೂ ಆಗಿತ್ತು. ಕನ್ನಡದಲ್ಲಿ ಕ್ರಾಂತಿ ಕವಿತೆ ಬರೆವಾತನಿಗೆ ಕುವೆಂಪು ವ್ಯೂಹದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಕುವೆಂಪು ಲಯದ ಚಕ್ರವ್ಯೂಹದಿಂದ ಆಚೆಗೆ ಬರಲಾಗದೆ ಅನೇಕ ಅಭಿಮನ್ಯುಗಳು ಹತರಾಗುತ್ತಾರೆ. ಒಂದು ರೀತಿಯ ಕ್ರಾಂತಿಯ ಕಲ್ಪನೆ ಮತ್ತು ಕಾವ್ಯ ಕೃತಿಯ ಕಲ್ಪನೆ ಕನ್ನಡ ಪರಂಪರೆಯಲ್ಲಿ ಒಟ್ಟೊಟ್ಟಿಗೇ ಹೋಗುತ್ತದೆ. ಕ್ರಾಂತಿ ಎಂದರೆ ಸಾಮಾನ್ಯ ಜನ ಸಿಡಿದೇಳುವ ಕ್ರಿಯೆ. ಅದೊಂದು ದಂಗೆ. ಜನ ಸಿಟ್ಟಿನಿಂದ ಒಮ್ಮೆಗೇ ಸ್ಫೋಟಿಸುವ ಜ್ವಾಲಮುಖೀ ಕ್ರಿಯೆ. ಕ್ರಾಂತಿಯ ಈ ಸರಳ ಕಲ್ಪನೆಗೆ ಅನುಗುಣವಾಗಿಯೇ ಕಾವ್ಯವೂ ಇರುತ್ತದೆ. ಹೀಗಾಗಿ ಕ್ರಾಂತಿ ಕಾವ್ಯ ಎಂದರೆ ಕನ್ನಡದಲ್ಲಿ ಹಾಡುಗಬ್ಬ ಅಥವಾ ಹಾಡಿನ ಲಯಗಳಿಗೆ ಹತ್ತಿರವಿರುವಂಥದು. ಕನ್ನಡದ ಲಯ ಶರೀರದಲ್ಲಿ ಕ್ರಾಂತಿ ಮಿಡಿಯುವುದೇ ಹಾಡಿನಲ್ಲಿ. ಹೀಗಾಗಿ, ಕವಿ ಸಿದ್ಧಲಿಂಗಯ್ಯನವರ ಪುಟ್ಟ ದೇಹದಲ್ಲಿ ಕುವೆಂಪು ಆವಾಹನೆಯಾದದ್ದು ಕನ್ನಡ ಪರಂಪರೆಯ ಮೂಲಾಧಾರಗಳ ದೃಷ್ಟಿಯಿಂದ ನಿರೀಕ್ಷಿತವೇ ಆಗಿತ್ತು.

ಆದರೆ, ಕುವೆಂಪುವಿಗಿಂತ ಭಿನ್ನವಾದ ಲಯಶರೀರವೂ ನಮ್ಮ ಕವಿಯಲ್ಲಿತ್ತು. ಸಂಸ್ಕೃತದ ಗಂಧವಿರದ ಶೈಲಿ ಕುವೆಂಪುವಿಗೆ ಶೈಲಿಯೇ ಅಲ್ಲ. ಇದಕ್ಕಾಗಿಯೇ ಕಾವ್ಯ ಪರಂಪರೆಯೊಂದರಲ್ಲಿ ಶೈಲಿ ಎಂದರೆ ಸ್ಮೃತಿ ಸಂಚಯ ಎನ್ನುವುದು. ಕುವೆಂಪು ಶೈಲಿಯ ಹಿಂದೆ ಒಂದು ಮಟ್ಟದಲ್ಲಿ ಹರಿಹರ ಕವಿ ತುಂಬ ದೊಡ್ಡದಾಗಿಯೇ ಇದ್ದಾನೆ. ಇನ್ನೊಂದು ಮಟ್ಟದಲ್ಲಿ ಪಂಪ – ರನ್ನರ ಭೀಮ ಶೈಲಿಗಳೂ ಹೆಣೆದುಕೊಂಡಿವೆ. ಹರಿಹರನ ಸರಾಗ ಪ್ರವಾಹ ಮತ್ತು ಪಂಪ, ರನ್ನರ

ಭೀಮಸದೃಶ ಗಾಂಭೀರ್ಯಗಳೆರಡೂ ಕುವೆಂಪು ಶೈಲಿಗೆ ಜನ್ಮದತ್ತವಾದ ಗುಣಗಳು. ಈ ಗುಣಗಳು ಸಿದ್ಧಲಿಂಗಯ್ಯನವರಿಗೆ ಸಹಜವಾಗಿ ಬಂದರೂ, ಈ ಭೀಮಸದೃಶ ಶೈಲಿಗೆ ಭಿನ್ನವಾದ ಇನ್ನೊಂದು ಲಘು ಶೈಲಿ ಅದರಲ್ಲಿ ಅಡಕವಾಗಿತ್ತು. ಮುಂದೆ ಪ್ರವರ್ಧಮಾನಕ್ಕೆ ಬಂದ ಕಾಮಿಕ್ ಪ್ರತಿಭೆ ಕವಿಯಲ್ಲಿ ಮೊದಲಿಗೆ ಆಡುನುಡಿಯ ಶೈಲಿಯಾಗಿ ಕಾಣಿಸಿಕೊಂಡಿತ್ತು.

ಕಾವ್ಯದಲ್ಲಿ ಶೈಲಿಗಿಂತ ಶೀಘ್ರವಾಗಿ ಇನ್ಯಾವುದೂ ಹಳಸುವುದಿಲ್ಲ. ಈ ದೃಷ್ಟಿಯಲ್ಲಿ ಸಿದ್ಧಲಿಂಗಯ್ಯನವರ ಶ್ರೀಮದ್ ಗಾಂಭೀರ್ಯದ ರನ್ನಮಯ ಶೈಲಿಗೆ ಕೊಂಚ ಹಾಸ್ಯಾಸ್ಪದ ಗುಣವೂ ಇತ್ತು. ಗತಿಸಿದ ಹಿರಿಯ ಗೆಳೆಯ ಆಲನಹಳ್ಳಿ ಕೃಷ್ಣ ಅದನ್ನು ಗುರುತಿಸಿ ಆಗಾಗ ನಮ್ಮನ್ನು ರೇಗಿಸುತ್ತಿದ್ದ : "ಆಹಾಹಾ ಗುಡಿಸಲುಗಳು ಗುಡುಗುತಿವೆ, ಬಂಗಲೆಗಳು ನಡುಗುತಿವೆ ಅಂತೆ. ಇವೆಲ್ಲ ಎಲ್ಲಲೇ? ಈಗ ಗುಡಿಸಲು ನಡಗ್ತಾ ಅವೆ, ಬಂಗಲೆಗಳು ಗುಡುಗ್ತಾ ಅವೆ, ಅಲ್ವೇನ್ರೋ." ಕೃಷ್ಣನ ವ್ಯಂಗ್ಯ, ಆಕ್ಷೇಪ ಸಾಮಾಜಿಕ ವಾಸ್ತವಕ್ಕಿಂತ, ಶೈಲಿಯ ಗುಣವನ್ನು ಕುರಿತದ್ದು ಎಂದು ಈಗ ಅನ್ನಿಸುತ್ತಿದೆ. ಏಕೆಂದರೆ, ಕವಿತೆಯಲ್ಲಿ ವಾಸ್ತವದ ಚಿತ್ರಣದ ಬಗ್ಗೆ ಅಂಥ ಉಗ್ರ ಆಕ್ಷೇಪವನ್ನು ಎತ್ತಲು ಅನೇಕ ಕಷ್ಟಗಳಿವೆ. ಕಾವ್ಯಶೈಲಿಯು ಆರ್ಭಟವಾಗಿ ಬಿಡುವ ಅಪಾಯದ ಬಗ್ಗೆ ತನ್ನದೇ ಆದ ಅಬ್ಬರದಲ್ಲಿ ಕೃಷ್ಣ ಹೇಳುತ್ತಿದ್ದ ಎಂದು ಕಾಣುತ್ತದೆ. ಆದರೆ, ಈ ಬಗೆಯ ವ್ಯಂಗ್ಯ ಸಿದ್ಧಲಿಂಗಯ್ಯನವರ 'ಗಳ್ಗಗಳು', 'ಒಂದು ಮೂಳೆಯ ಹಾಡು' ರೀತಿಯ ಪದ್ಯಗಳ ಬಗ್ಗೆ ಹುಟ್ಟುವುದು ಕಷ್ಟ. ಈ ಭಾಷೆ ಕವಿಯ ಶ್ರೀರಾಮಪುರದ ಸ್ಲಮ್ ವಾಸ್ತವ್ಯದಿಂದ, ಅದಕ್ಕೂ ಹಿಂದೆ ಹೋಗಿ ಮಾಗಡಿ ತಾಲ್ಲೂಕಿನ ಹಳ್ಳಿಗಳಿಂದ ಬಂದದ್ದು. ಅವೆರಡೂ ಬೆರೆತು ರೂಪಗೊಂಡದ್ದು. ಹೀಗೆ ಎರಡು ಭಿನ್ನ ಶೈಲಿಗಳು ಕವಿಯ ಮೊದಲ ಕೃತಿಯಲ್ಲೇ ಇವೆ.

ಈ ಶ್ರೀರಾಮಪುರದ ಸ್ಲಮ್ಮಿನಿಂದ ಮೂಡಿದ ಲಯಗಳ ಬಗ್ಗೆ ಎಡಪಂಥೀಯ ಅಧ್ಯಯನ ವಿಧಾನ ಒಂದು ಮೂಲಭೂತವಾದ ರಾಜಕೀಯ ಆಕ್ಷೇಪವೆತ್ತಲೂ ಸಾಧ್ಯ. ಯೂರೋಪಿನ ಫ್ರಾಂಕ್‌ಫರ್ಟ್ ಚಿಂತನಾ ಪ್ರಸ್ಥಾನದ ಲೇಖಕ ಅದಾರ್ನೋ ತಮ್ಮ ಟಿಪ್ಪಣಿಯೊಂದರಲ್ಲಿ ಈ ವಿಷಯ ಪ್ರಸ್ತಾಪಿಸುತ್ತಾನೆ. ಅದು ಪಶ್ಚಿಮದ ಸನ್ನಿವೇಶದಲ್ಲಿ ಇದ್ದ ಸಮಸ್ಯೆ. ಸ್ಲಮ್ಮಿನ ಭಾಷೆಯಲ್ಲಿ ದಮನದ ಅನುಭವವೇ ಹೆಚ್ಚು ಅಂತರಂಗೀಕರಣಕ್ಕೆ ಒಳಗಾಗಿರುತ್ತದೆ. ಹೀಗಾಗಿ, ಕ್ರಾಂತಿ ಚೈತನ್ಯ ಆ ಭಾಷೆಯಲ್ಲಿ ತುಂಬ ಕಡಿಮೆ ಇರುತ್ತದೆ ಎಂಬ ಸಮಸ್ಯೆ ಅದು. ಸಿದ್ಧಲಿಂಗಯ್ಯನವರ ಕವಿತಾ ಸಂಕಲನವೊಂದನ್ನು ಈ ಹಿಂದೆ ವಿಮರ್ಶಿಸುವಾಗ ನಾನು ಈ ಪ್ರಶ್ನೆಯನ್ನು ಪ್ರಸ್ತಾಪಿಸಿದ್ದೆ ಕೂಡ. ನಮ್ಮ ಕವಿಯಲ್ಲಿ ಗ್ರಾಮೀಣ ಮೂಲದ ಲಯ ಸ್ಮೃತಿಗಳೂ

ಇವೆ ಎಂಬುದು ಈ ಸಮಸ್ಯೆಗೆ ನೀಡುವ ಒಂದು ಬಗೆಯ ಉತ್ತರ. ಆದರೆ, ನಿಜವಾದ ಸಮಸ್ಯೆ ಇರುವುದು ಇನ್ನೂ ಮುಖ್ಯನೆಲೆಯಲ್ಲಿ ಏನೆಲ್ಲ ನೆನಪುಗಳಿದ್ದರೂ, ಸ್ಮೃತಿಮುಖೀ ಭಾಷೆ ಇದ್ದರೂ ಕವಿಗೆ ಇರುವ ಕ್ರಾಂತಿಯ ಕಲ್ಪನೆಯಿಂದಾಗಿ ಅವೆಲ್ಲ ಪರಿಕಲ್ಪನೆ ತತ್‌ಕ್ಷಣದ ಸಾಮಾಜಿಕ ಅನುಭವದ ಆಚೆಗಿನ ಎಲ್ಲ ಲೋಕಗಳನ್ನೂ ಸಂದೇಹದಿಂದ, ತಿರಸ್ಕಾರದಿಂದ ನೋಡುತ್ತದೆ. ಹೆದ್ದಾರಿಯಲ್ಲಿ ಬಿದ್ದಿರುವ ಪುಳ್ಳೆ ಪುಕ್ಕಗಳನ್ನು ಮಾತ್ರ ಆಯ್ದು ತರುವ ಸೋಮಾರಿ ಬಾಲಕನಂತೆ ಕಾವ್ಯಶೈಲಿ ವರ್ತಿಸುತ್ತದೆ. ಜನರ ಸಾಂಸ್ಕೃತಿಕ ಸ್ಮೃತಿ ಎಂಬುದೊಂದು ಕಗ್ಗಾಡು. ಅದರೊಳಗೆ ನುಗ್ಗಿ, ತನ್ನ ತಾನೆ ಮರೆವ ಧೀರರು ಮಾತ್ರ ಕಾವ್ಯದಲ್ಲಿ ಬೆಕ್ಕಸ ಬೆರಗಾಗುವ ಸಾಧನೆಗಳನ್ನು ಮಾಡುತ್ತಾರೆ. ಈ ದೃಷ್ಟಿಯಿಂದ ಬೇಂದ್ರೆ ಅಸಾಮಾನ್ಯ ಸಾಹಸಿಗ. ಕೋಲಾಟದ ಹಾಡುಗಳಿಂದ, ವೇದದ ಸೂತ್ರಗಳಿಂದ, ಜಾನಪದ ಸಂತರಿಂದ, ಪಂಪನ ಗದ್ಯದಿಂದ, ಲಕ್ಷ್ಮೀಶನ ಕಥನದಿಂದ, ಜಾನಪದ ಆಚರಣೆಗಳ ವಿಧ್ಯುಕ್ತ ಭಾಷೆಯಿಂದ ಬೇಂದ್ರೆ ಏನೆಲ್ಲ ಹೆಕ್ಕಿ ತಂದು ಕನ್ನಡ ಕಾವ್ಯವನ್ನು ಬಹುಮುಖಿಯಾಗಿಸಿದರು ! ಬೇಂದ್ರೆ ಕಾವ್ಯ ಬಹುರೂಪಿ ಲಯಗಳ ಭರ್ಜರಿ ಮೆರವಣಿಗೆ.

ಈ ಸಮಸ್ಯೆ ಸಿದ್ಧಲಿಂಗಯ್ಯನವರ ಕಾವ್ಯಕ್ಕೆ ಮಾತ್ರ ಸೀಮಿತವಲ್ಲ. ಒಂದು ರೀತಿಯ ಎಡಪಂಥೀಯ ಕಾವ್ಯಕ್ಕೆ ಮೂಲಭೂತವಾಗಿ ಕಾಡಿರುವ ಕೊರತೆ ಇದು. ಮಾರ್ಕ್ಸ್‌ವಾದ – ಲೆನಿನ್‌ವಾದ ಕ್ರಾಂತಿಯ ಪ್ರಕ್ರಿಯೆಗಳಲ್ಲಿ ಅನೇಕ ತಂತ್ರ, ಹುನ್ನಾರ, ಯುದ್ಧ ವಿನ್ಯಾಸಗಳನ್ನು ಹಾಕಿ ಮುಂದುವರೆಯುತ್ತದೆ. ಅದರ ಅಂತಿಮ ನೈತಿಕತೆಯ ಬಗ್ಗೆ ಏನೇ ತಕರಾರುಗಳಿದ್ದರೂ, ವಿವಿಧ ಕ್ರಾಂತಿಗಳ ಚರಿತ್ರೆಯ ಒಳವಿನ್ಯಾಸ ಆಕರ್ಷಕ ಹಾಗೂ ವೈವಿಧ್ಯಮಯ. ಆದರೆ ಕ್ರಾಂತಿಯ ಪ್ರಕ್ರಿಯೆಗಳಲ್ಲಿ ಕಾಣುವ ಈ ಬಹುಪದರೀಯತೆ ಕಾವ್ಯದ ಪ್ರಯೋಗಗಳಲ್ಲಿ ಮಾತ್ರ ಕಾಣುವುದಿಲ್ಲ. ಉತ್ಪ್ರೇಕ್ಷೆ ಎನ್ನುವುದು ಬಹುಪಾಲು ಕ್ರಾಂತಿ ಕವಿಗಳ ಏಕಮಾತ್ರ ಅಭಿವ್ಯಕ್ತಿ ತಂತ್ರ. ರಾಜಕೀಯ ತಂತ್ರಗಾರಿಕೆ ಸೌಂದರ್ಯಾತ್ಮಕ ತಂತ್ರಗಾರಿಕೆಯಾಗಿ ಭಾಷಾಂತರವಾಗುವುದೇ ಇಲ್ಲ.

ಉತ್ಪ್ರೇಕ್ಷಾಲಂಕಾರ ಎಡಪಂಥೀಯ ಕಾವ್ಯದ ಸಹಜ ಧರ್ಮ ಎನ್ನುವುದಾದರೆ, ಸಿದ್ಧಲಿಂಗಯ್ಯ ಆ ಧರ್ಮದ ಅಧಿದೇವತೆ. ತೆಲುಗಿನಲ್ಲಿ ಶ್ರೀ ಶ್ರೀ ಕೂಡಾ ಇದೇ ರೀತಿಯ ಉತ್ಪ್ರೇಕ್ಷಾಲಂಕಾರ ಚಕ್ರವರ್ತಿ ! 'ಮಹಾಪ್ರಸ್ಥಾನಂ'ನ ಸಂಸ್ಕೃತ ಭೂಯಿಷ್ಟತೆ ಎಂಥವರನ್ನೂ ದಂಗುಬಡಿಸುತ್ತದೆ. ಜತೆಗೆ ಸಮೃದ್ಧವಾದ ಬ್ರಾಹ್ಮಣೀಯ ಮತ್ತು ವೈದಿಕೀಯ ಪ್ರತಿಮಾವಳಿ ಬೇರೆ. ಸಿದ್ಧಲಿಂಗಯ್ಯ ಆ ಬಗೆಯ ಅಸಾಂಗತ್ಯಕ್ಕೆ ಹೋಗುವುದಿಲ್ಲವಾದರೂ, ಸದಾ ಉತ್ಪ್ರೇಕ್ಷಾಲಂಕಾರಕ್ಕೆ ಹಾತೊರೆಯುತ್ತಾರೆ.

ದೊಡ್ಡ ಗೌಡರ ಬಾಗಿಲೀಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲುಕಯ್ಯಿ
ಕಂಬ ಅವರ ಹಟ್ಟಿಗೆ
ಅವರ ತೋಟದ ತೆಂಗಿನಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು
(ಬೆಲ್ಚಿಯ ಹಾಡು)

ಈ ಬಗೆಯ ಸಾಲುಗಳಲ್ಲಿ ಸಿದ್ಧಲಿಂಗಯ್ಯನವರ ಯಶಸ್ಸೂ ಇದೆ, ಸೋಲೂ ಇದೆ. ಉತ್ಪ್ರೇಕ್ಷಾಲಂಕಾರ ತನ್ನ ತೀವ್ರತೆಯ ತುದಿಯಲ್ಲಿ ಅಸಾಮಾನ್ಯವಾದ ರೂಪಕ ಶಕ್ತಿಯನ್ನು ಸಾಧಿಸಬಹುದು. ಇಲ್ಲವೇ ಅದೊಂದು ಚಮತ್ಕಾರ ಅಥವಾ ಕವಿ ಸಮಯ ಆಗಿ ಪರಿವರ್ತನೆಯಾಗಬಹುದು. ಆಗ ಪ್ರತಿಮೆಗಳ ನಿರೀಕ್ಷಿತ ಹೊಂದಾಣಿಕೆ ಎದ್ದು ಕಾಣುತ್ತದೆ. ಸಿದ್ಧಲಿಂಗಯ್ಯನವರ ಮೂಲ ಪ್ರತಿಭೆಯಲ್ಲಿ ಇಂದಿಗೂ ಇರುವ ಮೂಲಗ್ರಹಿಕೆಯ ಗುಣಗಳಿವು. ಸಾಕಷ್ಟು ಬದಲಾವಣೆಯಾಗಿದ್ದರೂ ಉತ್ಪ್ರೇಕ್ಷೆ ಹಾಗೇ ಉಳಿದಿದೆ.

ನಾನು ಈ ಬರಹ ಪ್ರಾರಂಭಿಸಿದ್ದು ಕವಿಯ ಮೊದಲ ಸಂಕಲನವಾದ 'ಹೊಲೆ ಮಾದಿಗರ ಹಾಡು'ವಿನ ವಿಶ್ಲೇಷಣೆಯಿಂದ. ಅದನ್ನು ಆಧರಿಸಿ ಕವಿಯ ಮೂಲಗುಣ, ದೋಷ ಯಾವುವಿರಬೇಕೆಂಬ ವಿಚಾರದ ಪ್ರಯತ್ನಕ್ಕೆ ಹೋಗಿಬಿಟ್ಟೆ. ಈಗ ಮತ್ತೆ ಆ ಸಂಕಲನದ ವಿಶ್ಲೇಷಣೆಗೇ ಹೋಗುವುದು ಮೇಲು.

೨೦ನೇ ಶತಮಾನದ ಕನ್ನಡ ಕಾವ್ಯದಲ್ಲಿ ಸಿದ್ಧಲಿಂಗಯ್ಯನವರಿಗೆ ಸ್ಥಾನವಿರುವುದು ಈ ಶತಮಾನದಲ್ಲಿ ಅವರು ದಲಿತರ ಆದಿಕವಿ ಎಂಬ ಕಾರಣಕ್ಕೆ. ಮತ್ತು ಈ ಶತಮಾನದಲ್ಲಿ ದಲಿತರ ಆತ್ಮ – ಪ್ರತಿನಿಧೀಕರಣದ ಎಲ್ಲ ಸಮಸ್ಯೆಗಳೂ ಈ ಆದಿಕವಿಯಲ್ಲಿ ಎದ್ದು ಕಾಣುತ್ತವೆ. ೧೯೭೫ರಲ್ಲಿ ಆ ಪುಸ್ತಕ ಪ್ರಕಟವಾದಾಗ ಅದು ಹೀಗೆ ಒಂದು ಹೊಸ ಮಾರ್ಗದ ಪ್ರಥಮ ಕೃತಿಯಾದೀತು ಎಂಬ ಕಲ್ಪನೆಯೆ ಕವಿಗೂ ಸೇರಿದಂತೆ ಯಾರಿಗೂ ಇರಲಿಲ್ಲ. ಅರ್ಧ ಸಾಹಿತ್ಯಕ ಉತ್ಸಾಹದಲ್ಲಿ, ಅರ್ಧ ಸ್ನೇಹದ ಹುಡುಕಾಟದಲ್ಲಿ ಈ ಕೃತಿ ಬಂದೇಬಿಟ್ಟಿತು. ಮುಖಪುಟದಲ್ಲಿ ಗಟ್ಟಿಮುಟ್ಟಾದ ಆಸಾದಿಯೊಬ್ಬನ ಚಿತ್ರ ಇತ್ತು. ಆ ಪುಸ್ತಕದೊಳಗಿನ ಪದ್ಯಗಳ ಸಿಟ್ಟು, ಆಕ್ರೋಶ ಕಂಡವರು ಮುಖಪುಟದ ಮೇಲಿನ ಚಿತ್ರ ಕವಿಯದೇ ಇರಬೇಕು

ಎಂದು ಅಂದುಕೊಳ್ಳುತ್ತಿದ್ದದ್ದು ಸಾಮಾನ್ಯವಾಗಿತ್ತು. ಹಾಗೆಯೇ ಕವಿಯನ್ನು ನಿಜವಾಗಿ ನೋಡಿದಾಗ ನಿರಾಶೆಯ ನೋಟವೂ ಸಾಮಾನ್ಯವಾಗುತ್ತಿತ್ತು. ಆದರೆ, ಆ ನಿರಾಶೆಯಲ್ಲಿ ಎಲ್ಲ ಕವಿಗಳ ಮೂಲವ್ಯಕ್ತಿತ್ವದ ಚಿತ್ರಣವೂ ಇದೆ. ನಿಜವಾಗಿ ಹೀರೋ ಅಥವಾ ಸಂತ ಆಗಲು ಸಾಧ್ಯವಿದ್ದರೆ, ಕಾವ್ಯ ಯಾಕೆ ಬರೆಯಬೇಕು?

'ಹೊಲೆಮಾದಿಗರ ಹಾಡು'ವಿನಿಂದ ಶುರುವಾಗಿ ತೀರಾ ಈಚಿನ ತನಕ ಸಿದ್ಧಲಿಂಗಯ್ಯನವರ ಕಾವ್ಯವನ್ನು ಈ ಶತಮಾನದ ದಲಿತರ, ಕೆಳಜಾತಿಗಳ ಆತ್ಮ – ಪ್ರತಿನಿಧೀಕರಣದ ಮೂರು ಪ್ರಧಾನ ಆಶಯಗಳು ರೂಪಿಸಿದ್ದವು. ಹೊಸ ರೀತಿಯ ಪ್ರಜ್ಞಾವಂತ ದಲಿತ ತನ್ನ ಭೂತ, ವರ್ತಮಾನ, ಭವಿಷ್ಯವನ್ನು ಕಾಣುತ್ತಿದ್ದ ಕ್ರಮಗಳು ಅವು. ಈ ಕಾರಣಕ್ಕಾಗಿ, ಕವಿಯ ಕಾವ್ಯ ದಲಿತರ ಪ್ರಣಾಳಿಕೆಯಂತಾಗಿ ನಾಡಿನಾದ್ಯಂತ ದಲಿತ ಯುವಜನಾಂಗ ಅದನ್ನು ಗುಣುಗುಣಿಸುತ್ತಿದ್ದದ್ದು ಸಾಮಾನ್ಯವಾದ ದೃಶ್ಯವಾಗಿತ್ತು. ಈ ಆಶಯಗಳನ್ನು ಹೀಗೆ ಸಂಗ್ರಹಿಸಬಹುದು.

೧. ದಲಿತರಿಗೆ ಶೋಷಣೆ, ದಮನಗಳಿಂದ ಹೊರತಾದ ಬೇರೆ ಸಾಂಸ್ಕೃತಿಕ ಸ್ಮೃತಿಯೇ ಇಲ್ಲಾ ಎಂಬ ಚಾರಿತ್ರಿಕ ಗ್ರಹಿಕೆ. ಇದಕ್ಕೆ ಹೊಂದಿಕೊಂಡಂತೆ ಹಿಂದೂ ಧರ್ಮ ಒಂದು ಏಕಕಾರೀ ರಚನೆ ಎಂಬ ನಿಲುವು.

೨. ಆತ್ಮಾನುಕಂಪ ಮತ್ತು ಆಕ್ರೋಶಗಳ ಎರಡು ಅತಿಗಳಲ್ಲಿ ತುಯ್ಯಲಾಡುತ್ತಿದ್ದ ಮನೋ–ರಾಜಕೀಯಸ್ಥಿತಿ.

೩. ಚರಿತ್ರೆಯ ವಿಕಾಸಪಥದಲ್ಲಿ ಆಧುನೀಕರಣ ತಮ್ಮ ಬಿಡುಗಡೆಯ ಏಕಮಾತ್ರ ದಾರಿ ಎಂಬ ಆಶಾವಾದ. ಆದ್ದರಿಂದ, ಆಧುನೀಕರಣಕ್ಕಿಂತ ಹೆಚ್ಚಾಗಿ ಪರಂಪರೆಯ ಬಗ್ಗೆ ಧಗಧಗಿಸುವ ಸಿಟ್ಟು.

ಈ ಮೂರು ವೈಚಾರಿಕ ಆಕೃತಿಗಳು ಸಿದ್ಧಲಿಂಗಯ್ಯನವರ ಕಾವ್ಯಕ್ಕೆ ಬರೀ ಸೀಮಿತವಲ್ಲ. ಬದಲಾಗಿ ಅವು ಕರ್ನಾಟಕ ದಲಿತ ಚಳುವಳಿಯನ್ನು ವ್ಯಾಪಕವಾಗಿ ಪ್ರಭಾವಿಸಿದ್ದವು ಎಂಬ ಅಂಶವನ್ನು ನಾವಿಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು. ೭೦ ಮತ್ತು ೮೦ರ ದಶಕಗಳಲ್ಲಿ ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ದಲಿತ ಚಳುವಳಿಗಳು ಪರಸ್ಪರ ರೂಪಿಸಿಕೊಂಡಿದ್ದವು. ದಲಿತ ಹೋರಾಟದ ಎಲ್ಲ ಆಶಯಗಳೂ ಕವಿಯ ಕಾವ್ಯದಲ್ಲಿ ಪ್ರತಿಧ್ವನಿಸಿದವು. ಅಂಬೇಡ್ಕರ್ – ಪ್ರಣೀತ ದಲಿತ ಮುಕ್ತಿಯ ದಾರಿ ಈ ಕಾವ್ಯ ಮತ್ತು ಚಳುವಳಿಗಳನ್ನು ಆಳವಾಗಿಯೇ ಪ್ರಭಾವಿಸಿದ್ದವು ಎನ್ನುವ ಮಾತು ಕವಿಯಾಗಿ ಬೇರೆ ದಾರಿಗೆ ತಿರುಗಲು ಸಿದ್ಧಲಿಂಗಯ್ಯನವರಿಗೆ ಇದ್ದ ಅಸಾಧ್ಯ ಕಷ್ಟಗಳನ್ನು ಕುರಿತು ಹೇಳುತ್ತದೆ. 'ಹೊಲೆಮಾದಿಗರ ಹಾಡು' ಸಂಕಲನದಲ್ಲಿರುವ 'ಅಂಬೇಡ್ಕರ್' ಕವಿತೆ ಆ ಮಹಾನಾಯಕನ ಬಗ್ಗೆ

ವಿಮರ್ಶಾತ್ಮಕವಾದ ನಿಲುವನ್ನು ತಳೆಯುತ್ತದಾದರೂ ಅದು ಮಾರ್ಕ್ಸ್‌ವಾದೀ ದೃಷ್ಟಿಕೋನದಿಂದ ವಿಮರ್ಶಿಸಿರುವುದು ಎನ್ನುವುದು ಸಾಕಷ್ಟು ಸ್ಪಷ್ಟವಾಗಿದೆ. "ಮಳೆಯನೇಕೆ ತಾರಲಿಲ್ಲ ಮಿಂಚು ಮಾಯೆ ಅಷ್ಟೆಯೆ" ರೀತಿಯ ಸಾಲುಗಳನ್ನು ಈಗ ಒಟ್ಟಾರೆಯಾಗಿ ಅಂಬೇಡ್ಕರರ ಅಪೂರ್ಣತೆಯನ್ನು ಕುರಿತ ವ್ಯಾಖ್ಯಾನ ಎಂದು ಹೇಳಲು ಸಾಧ್ಯವಿದೆಯಾದರೂ ಆ ಕವಿತಾ ಸಂಕಲನದ ಸನ್ನಿವೇಶದಲ್ಲಿ ಅದು ಆಧುನಿಕ ಸೆಕ್ಯುಲರ್ ನೆಲೆಯಿಂದ ಮಾಡಿದ ಟೀಕೆ.

ಮುಂದೆ, 'ಸಾವಿರಾರು ನದಿಗಳು' ಸಂಕಲನದಲ್ಲಿ ಈ ಎಡಪಂಥೀಯ ಸೆಕ್ಯುಲರ್ ನೆಲೆ ಕವಿಯಲ್ಲಿ ಇನ್ನಷ್ಟು ದಟ್ಟವಾಗುತ್ತಾ ಬಂತು. ಲಯಗಾರಿಕೆ ಮತ್ತು ಛಂದೋಗತಿಯಲ್ಲಿ ಕವಿಗೆ ಇನ್ನಷ್ಟು ಪರಿಣತಿ, ಸ್ವಂತಿಕೆ ಎರಡನೆಯ ಸಂಕಲನದ ಹೊತ್ತಿಗೆ ಬಂತು. 'ಕಂಡೆ ನನ್ನವಳ ಒಂದು ದಿವಸ' ಒಂದು ರಾಜಕೀಯ ಕವಿತೆಯಾಗಿ ಪ್ರಭಾವಶಾಲಿ. ಆದರೆ, ಇಲ್ಲಿರುವ ನನ್ನವಳು ಉಲ್ಲೇಖ ಸುಳ್ಳು. ಈ ನನ್ನವಳು ಸಾಲುಗಳು ಇಲ್ಲದಿದ್ದರೂ ಕವಿತೆ ಒಂದು ಶಕ್ತಿಶಾಲೀ ರಾಜಕೀಯ ಪದ್ಯವಾಗಿ ನಿಲ್ಲುತ್ತದೆ. "ಕೊಲೆಯ ಹಿಂದಿನ ರಾತ್ರಿ ಸೂರ್ಯ ಚಂದ್ರರ ಹಿಡಿದು ಹಣದ ಪೆಟ್ಟಿಗೆಯಲ್ಲಿ ಕೂಡಿಟ್ಟರು" ರೀತಿಯ ಪ್ರತಿಮೆಗಳು ಈ ಕವಿತೆಯಲ್ಲಿ ಮುಖ್ಯ. 'ನನ್ನವಳು' ಅನುಭವದಿಂದ ಬಂದ ಹೆಂಗಸಲ್ಲ. ಆದ್ದರಿಂದಲೇ ಅದು ಅಧಿಕೃತವೂ ಅಲ್ಲ. ಮುಂದೆ ಕವಿ ಕೆಲವು ಪ್ರೇಮ ಕವಿತೆಗಳನ್ನು ಬರೆದದ್ದು ಉಂಟು. ಅಲ್ಲಿ ಕ್ರಾಂತಿಯ ಸುಳಿವಿಲ್ಲ. ಅಲ್ಲಿ ಏನಿದ್ದರೂ ಬೆಟ್ಟ, ಬೆಳದಿಂಗಳು, ಮಲ್ಲಿಗೆ ಇತ್ಯಾದಿ ರಮ್ಯ ಪ್ರತಿಮಾವಳಿಯ ಜಗತ್ತು. ಅಂದರೆ, ಕವಿ ಪ್ರೇಮಿಸುತ್ತಿದ್ದಾಗ ಅಲ್ಲಿ ಕ್ರಾಂತಿಗೆ ಜಾಗವಿಲ್ಲ. ಸಾರ್ವಜನಿಕ ಹೋರಾಟದ ಗದ್ದಲದಲ್ಲಿದ್ದಾಗ ಪ್ರೇಮ ಅಲ್ಲಿ ಸುಳಿಯಕೂಡದು. "ಮೆರವಣಿಗೆ"ಯಂಥ ಕವಿತೆಯಲ್ಲಿ ಕಡೇಪಕ್ಷ ಮೊದಲ ಸಾಲುಗಳಲ್ಲಿ ಅವೆರಡನ್ನು ಒಟ್ಟಿಗೆ ತರುವ ಅರೆ ಮನಸ್ಸಿನ ಪ್ರಯತ್ನವಿದೆ. ಉದ್ದಕ್ಕೂ ಕಡೆಯತನಕ ಒಂದು ಹುಡುಗಿಯ ಪ್ರಸ್ತಾಪವಂತೂ ಬರುತ್ತದೆ. ಆದರೆ, ಇವೆಲ್ಲ ಕ್ರಾಂತಿ ಪದ್ಯಗಳ ಹಾಗೆ ಏಕಮುಖೀ ಸಂವಾದ. ರಾಜಕೀಯ, ಪ್ರೇಮ ಇತ್ಯಾದಿಗಳು ಕವಿತೆಯಲ್ಲಿ ಬೇರೆಯಾಗಿಯೇ ಉಳಿದುಬಿಡುತ್ತವೆ. ಕವಿಯ ಮಹತ್ವವಿರುವುದು ಇಂಥ ಕವಿತೆಗಳಲ್ಲಿ ಅಲ್ಲ.

ಒಂದು ಜನಾಂಗವನ್ನು ಎರಡು ರೀತಿಗಳಲ್ಲಿ ಕಟ್ಟಲು ಸಾಧ್ಯ. ಆಧುನಿಕ ಸನ್ನಿವೇಶದಲ್ಲಿ ಎಲ್ಲ ಬಗೆಯ ಸಮಷ್ಟಿ ವ್ಯಕ್ತಿತ್ವಗಳೂ ಹೀಗೆ ನಿರ್ಮಿತಿಗಳೇ ಎನ್ನುವ ಮಾತನ್ನು ಗಮನದಲ್ಲಿಟ್ಟುಕೊಂಡು ಈ ಚರ್ಚೆಯನ್ನು ಮುಂದುವರೆಸಬೇಕಾಗಿದೆ. ಒಂದು, ರಾಜಕೀಯ ಸಂಕಲ್ಪದ ಮೂಲಕ. ಎರಡು, ಸಾಹಿತ್ಯದ ಪ್ರತಿಭಾ ಸಂಕಲ್ಪದ

ಮೂಲಕ. ಇವೆರಡೂ ಒಂದರೊಳಗೊಂದು ಹರಿಯುತ್ತವೆ ಎನ್ನುವುದೂ ಸತ್ಯ. ರಾಜಕೀಯ ಸಂಕಲ್ಪದ ಮೂಲಕ ನಿರ್ಮಾಣವಾದ ಜನಾಂಗ ತನಗೆ ಅಗತ್ಯವಿರುವ ಸಾಂಸ್ಕೃತಿಕ ರೂಪಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಹಾಗೂ ಸಾಹಿತ್ಯ ಸಂಕಲ್ಪ ಕೂಡಾ ತನಗೆ ಸಾಧ್ಯವಿರುವ ರಾಜಕೀಯ ಕ್ರಿಯೆಯ ಮಾದರಿಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಈ ತತ್ವದ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯನವರ ಕಾವ್ಯದ ರೂಪುರೇಖೆಗಳು ಇನ್ನಷ್ಟು ಉಜ್ವಲವಾಗುತ್ತವೆ.

ಈ ಕವಿಯ ಪ್ರತಿಭಾ ಸಂಕಲ್ಪದಲ್ಲಿ ಕನ್ನಡ ದಲಿತ ಜನಾಂಗ ಒಂದು ನಿರ್ದಿಷ್ಟ ರೀತಿಯಲ್ಲಿ ನಿರ್ಮಿತವಾಯಿತು. ಹಾಡು ಜನಾಂಗವನ್ನು ಕಟ್ಟಿತು. ಜನಾಂಗ ಹಾಡನ್ನು ಸೃಷ್ಟಿಸುವುದರ ಜತೆಯೇ ತಾನು ಸೃಷ್ಟಿಸಿರುವ ಹಾಡಿನಿಂದಲೂ ಅದು ಪ್ರಭಾವಿತಗೊಳ್ಳುತ್ತದೆ. ೧೯೭೫ರಿಂದಾಚೆಗೆ ದಲಿತರು ಹೊಸ ಪ್ರಜ್ಞಾವಂತ ಜನಾಂಗವಾಗಿ ಕರ್ನಾಟಕದಲ್ಲಿ ಸಿದ್ಧಲಿಂಗಯ್ಯನವರ ಕವಿತೆಗಳ ಎರಕದಲ್ಲಿ ರೂಪುಗೊಂಡರು. ಅದಕ್ಕಾಗಿಯೇ ದಲಿತರ ಮೆರವಣಿಗೆ ಬೀದರ್‌ನಿಂದ ಕೋಲಾರದ ತನಕ ಯಾವುದೇ ಮೂಲೆಯಲ್ಲಿ ನಡೆದರೂ ಅಲ್ಲಿ ಕವಿಯ ಹಾಡುಗಳು. ಅದಕ್ಕಾಗಿಯೇ ಇದು ಸಾರ್ವಜನಿಕ ಕಾವ್ಯದ ಅಂತಿಮ ಯಶಸ್ಸು. ಈ ಕವಿತೆಗಳನ್ನು ವ್ಯಕ್ತಿಯೊಬ್ಬ ತನ್ನ ಅತ್ಯಂತ ಖಾಸಗಿ ದುಃಖ, ರೋಮಾಂಚನದ, ದಿಗ್ಭ್ರಮೆಗಳ ಗಳಿಗೆಗಳಲ್ಲಿ ಓದಿಕೊಂಡಾಗ ಹೇಗೆ ಭಾವಿಸುತ್ತಾನೋ ಅಷ್ಟು ಖಚಿತವಾಗಿ ಹೇಳಲಾಗದು. ಇವು ತೀರಾ ಸಾರ್ವಜನಿಕವೆನ್ನಿಸಿಬಿಡುವ ಸಾಧ್ಯತೆಯೇ ಹೆಚ್ಚು. ಆದರೆ, ಆತ ತನ್ನ ಸಾಮಾಜಿಕ, ಸಾರ್ವಜನಿಕ ಗಳಿಗೆಗಳಲ್ಲಿಯಂತೂ ಈ ಕಾವ್ಯಕ್ಕೆ ಪ್ರತಿಸ್ಪಂದಿಸದೆ ಇರಲಾರ. ಸಾರ್ವಜನಿಕ ರಾಜಕೀಯ ಬದುಕಿನ ಉತ್ಸಾಹ, ರೋಷ, ಭೀತಿಗಳನ್ನು ಕವಿ ಪರಿಣಾಮಕಾರಿಯಾಗಿ ಹಿಡಿದಿಟ್ಟಿದ್ದಾರೆ. ಸಾರ್ವಜನಿಕ ಕಾವ್ಯಕ್ಕೆ ಒಂದು ಭಾಷಣದ ಗುಣವಿರದಿದ್ದರೆ ರುಚಿಸುವುದೇ ಇಲ್ಲ. ಅದಕ್ಕಾಗಿಯೇ ಕ್ರಾಂತಿಕವಿಗಳು ಉತ್ಪ್ರೇಕ್ಷೆ ಆಯ್ದುಕೊಳ್ಳುತ್ತಾರೆ. ಇಲ್ಲವೆ ಬ್ರೆಕ್ಟ್‌ನ ಹಾಗೆ ವ್ಯಂಗ್ಯವನ್ನು ವೈರುಧ್ಯಗಳನ್ನು ಕೋಪ, ಶೋಕ ಅಥವಾ ವ್ಯಂಗ್ಯ, ನಗು – ಹೀಗೆ ಯಾವುದೇ ಆದರೂ ಸಾರ್ವಜನಿಕ ಸಭೆ ಎಂಬಂಥ ಸ್ಥಿತಿಯಲ್ಲಿಯೇ ಕಾವ್ಯ ಅನುರಣಿಸುತ್ತದೆ. ಹೀಗೆ ಸಾರ್ವಜನಿಕ ಕಾವ್ಯ ತನ್ನ ಅತ್ಯುತ್ತಮ ಕ್ಷಣಗಳಲ್ಲಿ ಒಂದು ಆದಿಮ ಸಮಷ್ಟಿಯನ್ನು ಸೃಷ್ಟಿಸುತ್ತದೆ. ಒಂದು ರೀತಿಯ ಭಾವುಕ ಏಕತೆ ಕವಿ ಮತ್ತು ಸಮಷ್ಟಿಯನ್ನು ಜೋಡಿಸುತ್ತದೆ. ಈ ದೃಷ್ಟಿಯಿಂದ ಬೇಂದ್ರೆಯ ನಂತರ ಅತ್ಯಂತ ಹೆಚ್ಚು ಸಾರ್ವಜನಿಕ ಅಸ್ತಿತ್ವವುಳ್ಳ ಕಾವ್ಯ ಬರೆದ ಕವಿಯೆಂದರೆ ಸಿದ್ಧಲಿಂಗಯ್ಯನವರೇ ಇರಬೇಕು. ಆದರೆ, ಬೇಂದ್ರೆಯವರಿಗೂ ನಮ್ಮ ಕವಿಗೂ ಇರುವ ವ್ಯತ್ಯಾಸವೆಂದರೆ, ಬೇಂದ್ರೆ

ಸಾರ್ವಜನಿಕದಿಂದ ಭಿನ್ನವಾದ ಕ್ಷಣಗಳಲ್ಲೂ ಆಪ್ತವಾಗಿ ಉಳಿಯಬಲ್ಲರು. ಪ್ರಣಯದಲ್ಲಿ, ಆಧ್ಯಾತ್ಮಿಕ ಪರವಶತೆಯಲ್ಲಿ, ಸಾಮಾಜಿಕ ಧ್ಯಾನದಲ್ಲಿ, ಸಂಬಂಧಗಳಲ್ಲಿ, ಜೀವನದ ಮೂಲಭೂತ ಸತ್ಯಗಳ ಬಗೆಗಿನ ಚಿಂತನೆಯಲ್ಲಿ – ಹೀಗೆ ಎಲ್ಲ ಗಳಿಗೆಗಳಲ್ಲೂ ಕವಿ ಬೇಂದ್ರೆ ಸಖನಾಗಿ, ಗುರುವಾಗಿ ಇರುತ್ತಾರೆ. ಆದರೆ, ಈ ಕವಿ ಸಾರ್ವಜನಿಕದಾಚೆಗೆ ನಮ್ಮ ಜೊತೆ ಇರಲಾರರು. ಸಿದ್ಧಲಿಂಗಯ್ಯ ಈ ತನಕ ಮಹಾಸಾರ್ವಜನಿಕಕವಿ.

ಸಿದ್ಧಲಿಂಗಯ್ಯನವರ ಸಂವೇದನೆ ಈಚೆಗೆ ಬೇರೆ ದಿಕ್ಕುಗಳತ್ತ ಹೊರಳತೊಡಗಿದೆ. ಮೊದಲಿಗೆ, ತಮ್ಮ ಸಾಹಿತ್ಯ ಸಂಕಲ್ಪದ ಮೂಲಕ ಕವಿ ಕಟ್ಟಿದ್ದು ಆಕ್ರೋಶ ಮತ್ತು ಆಕಾಂಕ್ಷೆಗಳಲ್ಲಿ ತುಯ್ಯಲಾಡುವ ರಾಜಕೀಯ ಜನಾಂಗವನ್ನು. ಈಗ ಮತ್ತೆ ತಮ್ಮ ಪ್ರತಿಭಾ ಮೂಸೆಯಲ್ಲಿ ಕವಿ ಕಾಣುತ್ತಿರುವ ಹೊಸ ಜನಾಂಗವೂ ರಾಜಕೀಯದ್ದೆ. ಆದರೆ, ಅದು ಹೊಸ ಬಗೆಯ ಸಾಂಸ್ಕೃತಿಕ ರಾಜಕಾರಣದ್ದು. ಸರಳ ಆಕ್ರೋಶ ಆಕಾಂಕ್ಷೆಗಳ ಲಯಗಳಿಂದ ಹೆಚ್ಚು ಬಹುಮುಖಿಯಾದ ದಲಿತ ಸಮಷ್ಟಿಯ ಸೃಷ್ಟಿ ಕವಿಯ ಕಮ್ಮಟದಲ್ಲಿ ನಡೆಯತೊಡಗಿದೆ. ದಲಿತರ ದೇವಾನುದೇವಿಯರು ಕಾಣಿಸಿಕೊಳ್ಳತೊಡಗಿದ್ದಾರೆ. ಅದು ಕಾವ್ಯದಲ್ಲಿ ಅಷ್ಟು ಹೆಚ್ಚಾಗಿ ನಡೆದಿಲ್ಲ. ಪ್ರಸ್ತುತ ಪುಸ್ತಕದಲ್ಲಿ 'ಈ ದೇವರುಗಳು' ಎಂಬ ಒಂದು ಪದ್ಯ ಈ ಬಗೆಯದು.

ಸಂಸ್ಕೃತವ ತಿಳಿಯದ ಸ್ವರ್ಗದಲಿ ನೆಲೆಸದ
ಕಪ್ಪು ದೇವತೆಗಳು ಬರಿಗಾಲಿನವರು
ಬೆರಗೆ ಸಿರಿಯಾಗಿದ್ದ ನಮ್ಮ ಹಿರಿಯರ ಕನಸು
ಮೈಯ್ಯಾಗಿ ನಮ್ಮೊಡನೆ ಬಾಳುವವರು
(ಈ ದೇವರುಗಳು)

ಈ ಸಾಲುಗಳಲ್ಲಿನ ಅನುಭವ ಹೆಚ್ಚು ಆಕರ್ಷಕವಾಗಿ ಸೂಕ್ಷ್ಮವಾಗಿ ಪ್ರಖರವಾಗಿರುವುದು. ಸಿದ್ಧಲಿಂಗಯ್ಯನವರ "ಅವತಾರಗಳು" ಕೃತಿಯಲ್ಲಿ ಅಲ್ಲೂ ಪ್ರಗತಿಪರ ರಾಜಕೀಯ ದೃಷ್ಟಿಕೋನದಿಂದ ಅನುಭವವನ್ನು ನೋಡುವ ಪ್ರಯತ್ನವಿದೆಯಾದರೂ ದೇವ ದೇವಿಯರು ಅದನ್ನೆಲ್ಲಾ ತಮ್ಮ ತುಂಟತನದಿಂದ ತೂರಿ ಬಿಡುತ್ತಾರೆ. ದೇವ ದೇವಿಯರ ಜತೆಗೆ ಸಾಧ್ಯವಾಗಿರುವ ಈ ಆತ್ಮೀಯತೆಗೆ ಹೊಸ ರೀತಿಯ ಸಾಂಸ್ಕೃತಿಕ ರಾಜಕಾರಣದ ಮುಖವೂ ಇದೆ. ಆಗ, ಅವಮಾನಿತ ಜಾತಿಗಳ ಸಾಂಸ್ಕೃತಿಕ ಸ್ಮೃತಿಯಲ್ಲಿ, ಬರೀ ಶೋಷಣೆ, ನೋವು ಮಾತ್ರ ಇರದೆ ಬೇರೆ ರೀತಿಯ ಸಂತೋಷ ಮತ್ತು ಶಕ್ತಿಗಳೂ ಇವೆ ಎಂಬ ನಿಲುವು ಮೂಡತೊಡಗುತ್ತದೆ. ಮತ್ತು ಈ ನಿಲುವು ಸಾಂಪ್ರದಾಯಿಕ ಅಂಬೇಡ್ಕರ್ ವಾದಕ್ಕಿಂತ

ಭಿನ್ನ ಎಂಬ ಕಹಿ ಸತ್ಯವನ್ನು ಗಮನಿಸಲೇಬೇಕಾಗುತ್ತದೆ. ದಲಿತರ ಸಾಂಸ್ಕೃತಿಕ ಸ್ವಾಭಿಮಾನದ ದಾರಿಯಲ್ಲಿ ಬೇರೆ ದಾರಿಗಳೂ ಇರುವ ಸಾಧ್ಯತೆ ಇದರಿಂದಾಗಿ ಸ್ಪಷ್ಟವಾಗಿ ಕಾಣತೊಡಗುತ್ತದೆ. ಆದರೆ, ಇದರರ್ಥ ಕವಿ ರಾಜಕೀಯವಾಗಿ ತಮ್ಮ ಪ್ರಗತಿಶೀಲ ಸಿಟ್ಟನ್ನು ಕಳೆದುಕೊಂಡಿದ್ದಾರೆ ಎಂದೇನೂ ಆಗಬೇಕಿಲ್ಲ. ನಾನು ಈ ಮೊದಲಿಗೆ ಸೂಚಿಸಲಾಗಿದ್ದ ದಲಿತ ವ್ಯಕ್ತಿತ್ವದ ಹಿಂದಿರುವ ಮೂರು ವೈಚಾರಿಕ ಆಕೃತಿಗಳ ಬಗ್ಗೆ ಕವಿಯ ಶ್ರದ್ಧೆ ಸಡಿಲವಾಗಿ ಹೊಸಬಗೆಯ ತಾತ್ತ್ವಿಕ ಸಾಧ್ಯತೆಗಳತ್ತ ಕವಿ ಪ್ರಯಾಣ ಮಾಡುತ್ತಿದ್ದಾರೆ. ಈ ಹೊಸ ಬಗೆಯ ಸಮಷ್ಟಿ ವ್ಯಕ್ತಿತ್ವಕ್ಕೆ ತಕ್ಷಣದ ರಾಜಕೀಯ ಮನ್ನಣೆ ದೊರೆಯುವುದು ಕಷ್ಟ. ಏಕೆಂದರೆ, ತನ್ನ ಮೊದಲ ಘಟ್ಟದಲ್ಲಿಯೇ ಕವಿಯೇ ನಿರ್ಮಿಸಿಕೊಂಡಿದ್ದ ಆಕೃತಿಗಳೇ ಇದಕ್ಕೆ ವಿರೋಧವಾಗಿವೆ. ಇದೂ ಕೂಡಾ ಇನ್ನೊಂದು ಬಗೆಯ ಸಾರ್ವಜನಿಕ ಮಾದರಿಯೇ ಆದರೂ, ಇದಕ್ಕೆ ವ್ಯಾಪಕ ಜನಪ್ರಿಯತೆ ದೊರಕಬೇಕಾದರೆ ಒಟ್ಟು ದಲಿತ ವಿಮೋಚನೆಯ ಬಗೆಗೆ ಈಗ ಪ್ರಚಲಿತವಿರುವ ಕಲ್ಪನೆಗಳೇ ಬದಲಾಗಬೇಕು. ಅದಕ್ಕೆ ಹೊಸ ಶ್ರದ್ಧೆಯ ಅಗತ್ಯವಿದೆ.

ಕುತೂಹಲದ ಸಂಗತಿಯೆಂದರೆ, ಕವಿ ಸಿದ್ಧಲಿಂಗಯ್ಯನವರ ಮೊದಲ ಅಂಬೇಡ್ಕರ್– ಮಾರ್ಕ್ಸ್‌ವಾದೀ ಘಟ್ಟದ ಕವಿತೆಗಳಲ್ಲಿ ಕಾಣುವ ಭಾವನೆಗಳ ಖಾಚಿತ್ಯ ಎರಡನೆಯ ಘಟ್ಟದಲ್ಲಿಲ್ಲ. ಹಾಗೆ ನೋಡಿದರೆ, ಎರಡನೆಯ ದೇವ ದೇವಿಯರ ಘಟ್ಟದ ಕವಿತೆಗಳು ಅಷ್ಟು ಸ್ಪಷ್ಟವಾಗಿ ನಿಲುವು ತಳೆಯಲು ಹಿಂಜರಿಯುತ್ತವೆ. ಸಾರ್ವಜನಿಕ ಕವಿಗೆ ಪಥ್ಯ ಎನ್ನುವುದು ಆಂತರ್ಯಕ್ಕಿಂತ ಹೆಚ್ಚಾಗಿ ಜನರ ಜತೆಗೆ ಮುಖಾಮುಖಿಯಾಗಿ ರೂಪುಗೊಳ್ಳುತ್ತದೆ ಎಂಬ ಮಾತಿಗೆ ಇದು ಸಾಕ್ಷಿ. ಮೊದಲ ಘಟ್ಟದ ಕವಿತೆಯ ಆತ್ಮವಿಶ್ವಾಸಕ್ಕೆ ಕಾರಣ ತನ್ನ ಕಮ್ಮಟದ ಲಯಕ್ಕೆ ತಕ್ಕ ಹಾಗೆ ಓದುಗರೂ ರೂಪುಗೊಂಡಿರುತ್ತಾರೆ ಎಂಬ ನಂಬಿಕೆ. ಆದರೆ, ಒಡಮೂಡುತ್ತಿರುವ ಈ ಹೊಸನಿಲುವು ಜನಮನ್ನಣೆ ಪಡೆಯಲಾರದು ಎಂಬ ಸಂಶಯ ಕವಿತೆಯನ್ನು ನಿಯಂತ್ರಿಸಿದೆ. ಇಲ್ಲಿ, ತನ್ನ ಕವಿತೆಯ ಒಡಲೊಳಗೆ ಕೂತಿರುವ ಸಮಷ್ಟಿಯನ್ನು ಧಿಕ್ಕರಿಸಿಯೇ ಕಾವ್ಯ ಬರೆಯುತ್ತೇನೆ ಎಂದಾಗ ಸಾರ್ವಜನಿಕ ಕಾವ್ಯ ಅಸಾಧ್ಯವಾಗುತ್ತದೆ. ಒಂದು ಸಮಷ್ಟಿಯ ಜತೆಗೇ ಕಾವ್ಯದ ಕಲ್ಪನೆ ಬದ್ಧವಾಗಿರುವಾಗ ಹುಟ್ಟುವ ಮೂಲಭೂತವಾದ ಆತಂಕ ಇದು. ಇಲ್ಲಿ ಕಾವ್ಯ ರಚನೆಯ ತಾಂತ್ರಿಕ ಸಮಸ್ಯೆಗಳಿಗೆ ಮೀರಿ ನಿಂತ ಆಳವಾದ ಪ್ರಶ್ನೆಗಳಿವೆ. ಸಿದ್ಧಲಿಂಗಯ್ಯನವರ ಕಾವ್ಯದ ಮೊದಲಿಗೆ ಸಾಧ್ಯವಾದದ್ದು ಪರಂಪರೆಯ ಬಗೆಗಿನ ಅಪಾರ ರೋಷದಿಂದಾಗಿ, ಸಂಪ್ರದಾಯದ ಬಗೆಗಿನ ಸರಳವಾದ ಸಿಟ್ಟಿಗೆ ಹಾಡು ಕಟ್ಟುವ ಗುಣ ಸಹಜವಾಗಿಯೇ ಬಂದುಬಿಟ್ಟಿದೆ.

ಕೆಲವೊಮ್ಮೆ ಕಾವ್ಯ ಪರಂಪರೆಯೊಳಗಿನ ಕೆಲವು ಕೇಂದ್ರ ಪ್ರತೀಕಗಳು ಐತಿಹಾಸಿಕ ಪಲ್ಲಟಗಳನ್ನು ತುಂಬ ಸೂಕ್ಷ್ಮವಾಗಿ ವಿವರಿಸುತ್ತವೆ. ಸಂಪ್ರದಾಯದ ಬಗ್ಗೆ ಸರಳ ಆದರೆ ತುಂಬ ತೀವ್ರವಾದ ಸಿಟ್ಟು ಇರುವಾತನಿಗೆ ಇರುವ ಸಮಸ್ಯೆಗಳನ್ನು ಸಿದ್ಧಲಿಂಗಯ್ಯನವರ ಒಂದು ಪ್ರಮುಖ ಕವಿತೆಯಾದ “ಸಾವಿರಾರು ನದಿಗಳು”ವಿನಲ್ಲಿ ಬರುವ ನೀರಿನ ಪ್ರತಿಮೆಯಿಟ್ಟುಕೊಂಡು ಚರ್ಚಿಸಬಹುದು. ಈ ಕವಿತೆಯಲ್ಲಿನ ನೀರು ಸಾಮಾನ್ಯವಾದದ್ದಲ್ಲ. ಅದು ಬೇಂದ್ರೆ ಮತ್ತು ಅಡಿಗರ ಕಾವ್ಯಪಾತ್ರದ ಮೂಲಕ ಹರಿದು ಬಂದದ್ದು. ಬೇಂದ್ರೆಯವರ “ಗಂಗಾವತರಣ”, ಗೋಪಾಲಕೃಷ್ಣ ಅಡಿಗರ “ಭೂತ” ಮತ್ತು ಸಿದ್ಧಲಿಂಗಯ್ಯನವರ “ಸಾವಿರಾರು ನದಿಗಳು” ಕವಿತೆಗಳು ಪರಂಪರೆಯನ್ನು ಭಿನ್ನ ಭಿನ್ನ ನೆಲೆಯಲ್ಲಿ ವ್ಯಾಖ್ಯಾನ ಮಾಡುವ ಪ್ರಯತ್ನಗಳು. ಬೇಂದ್ರೆಯಲ್ಲಿ ಗಂಗೆ ಸಂಪ್ರದಾಯದ ಶುದ್ಧ ಸತ್ಯದ ಪ್ರತೀಕ. ಗಂಗೆ ಇರುವ ಹೆಸರಿನ ಜತೆಗೆಯೇ ಆವಾಹಿತವಾಗುವ ಅನೇಕ ಅರ್ಥಗಳು, ಪ್ರತಿಮೆಗಳು ಬೇಂದ್ರೆಯವರಲ್ಲಿ ಸಹಜವಾಗಿ ಬರುತ್ತವೆ. ಪರಂಪರೆಗೆ ಶುದ್ಧೀಕರಣದ ಶಕ್ತಿ ಇದೆ ಎಂಬ ಗಾಢನಂಬಿಕೆ ಕವನದಲ್ಲಿನ ಲಯದ ಉತ್ಸಾಹಕ್ಕೂ ಕಾರಣವಾಗಿದೆ. ಆದರೆ, ಅಡಿಗರ ‘ಭೂತ’ ಕವಿತೆಯಲ್ಲಿ ಅಂಥ ಸರಳ ಶ್ರದ್ಧೆ ಕಾಣುವುದಿಲ್ಲ. ಭೂತದ ಜೊತೆಗೆ ಅಥವಾ ಪರಂಪರೆಯ ಜೊತೆಗೆ ಅಡಿಗರಿಗೆ ಅನೇಕ ಬಿಕ್ಕಟ್ಟುಗಳಿವೆ; ಆತಂಕವಿದೆ. ಅದಕ್ಕಾಗಿಯೇ ಕವನದಲ್ಲಿ ಭೂತ ಎಂಬುದಕ್ಕೆ ಬಹುಸ್ತರೀಯ ಅರ್ಥಗಳು ನಿರ್ಮಾಣವಾಗಿವೆ. ಆದರೆ, ಪರಂಪರೆಯ ನೀರು ಎಷ್ಟೇ ಕೊಳೆತಿದ್ದರೂ ಹೊಸ ಚೈತನ್ಯ ಅದರೊಳಗಿನಿಂದಲೇ ಹುಟ್ಟಬಹುದು ಎಂಬ ನಂಬಿಕೆಯೇ ಅಡಿಗರನ್ನು ಸಂಪ್ರದಾಯವಾದಿಯನ್ನಾಗಿ ಮಾಡಿದೆ. ಆದರೆ, ಸಿದ್ಧಲಿಂಗಯ್ಯನವರ ನದಿಗೆ ನೆನಪಿನ ಹಂಗಿಲ್ಲ. ನೀರಿಗೆ ನೆನಪಿನ ಹಂಗೇ ಇಲ್ಲ. ಅದು ಭವಿಷ್ಯದ ನದಿ. ಜನರ ಕ್ರಾಂತಿ ಚೈತನ್ಯ ಸಾವಿರಾರು ನದಿಗಳಾಗಿ ಭೋರ್ಗರೆದು ಮೊರೆಯುತ್ತದೆ ಎಂಬ ಶ್ರದ್ಧೆ ಇಲ್ಲೂ ಕೂಡಾ ಕವಿತೆಯ ಲಯಕ್ಕೆ ಉತ್ಸಾಹ ನೀಡಿದೆ. ಸಂಪ್ರದಾಯದ ಜತೆಗೆ ಸಂಕೀರ್ಣ ಸಂಬಂಧ ಇರುವಾತ ಅಲ್ಲಿಂದಲೇ ತನ್ನ ಪ್ರತಿಮೆಗಳನ್ನು ಪಡೆಯುತ್ತಾನೆ ಎಂಬುದಕ್ಕೆ ಅಡಿಗರ ‘ಭೂತ’ ಕವಿತೆಯೊಳಗಿನ ಪ್ರತಿಮಾವಳಿ ಸಾಕ್ಷಿ. ಫ್ರಾಯ್ಡಿಯನ್ ಮೂಲದ ಆಧುನಿಕ ಪ್ರತಿಮಾವಳಿ ಕೂಡಾ ಸಂಪ್ರದಾಯದ ಲೋಕದೊಳಗೆ ಕರಗಿಹೋಗಿ ಒಂದಾಗುತ್ತದೆ.

ಆದರೆ, ಸಿದ್ಧಲಿಂಗಯ್ಯನವರಿಗೆ ಪರಂಪರೆಯ ಜತೆಗೆ ಸಂವಹನದ ಕಲ್ಪನೆಯೇ ಆಗ ಇರಲಿಲ್ಲ. ಹೀಗಾಗಿ, ‘ಸಾವಿರಾರು ನದಿಗಳು’ವಿನ ಪ್ರತಿಮಾಲೋಕ ಪೂರ್ಣವಾಗಿ ಸೆಕ್ಯುಲರ್ ಆದದ್ದು. ಸೆಕ್ಯುಲರ್ ಆದದ್ದು ಅತ್ಯುತ್ತಮ ಪ್ರತಿಮೆ ಆಗುವುದಿಲ್ಲ ಎಂಬ

ನಿಯಮ ಎಲ್ಲಿಯೂ ಇಲ್ಲ ಎಂಬ ಮಾತು ನಿಜವಿದ್ದರೂ, ಯಾವುದರ ಜತೆ ಜಗಳವಿದೆಯೋ ಅದರ ಬಗೆಗೆ ಆಳವಾದ ನಂಟೂ ಇರಬೇಕಾಗುತ್ತದೆ ಎಂಬುದಷ್ಟನ್ನೇ ನಾನಿಲ್ಲಿ ಸೂಚಿಸುತ್ತಿದ್ದೇನೆ.

ಆದರೆ, ಸಿದ್ಧಲಿಂಗಯ್ಯನವರ ಪ್ರತಿಮಾ ಜಗತ್ತಿನಲ್ಲಿ ಸಹಜವಾಗಿಯಾದರೂ ಬಂಧು ಪಿತೃಪಿತಾಮಹರ ಲೋಕವಿತ್ತು. ಕುತೂಹಲದ ಸಂಗತಿಯೆಂದರೆ, ಅದು 'ಅಲ್ಲೆ ಕುಂತವರೆ' ಖಂಡ ಕಾವ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಖಂಡ ಕಾವ್ಯ ಬಹುಶಃ ಕನ್ನಡದ ಅತ್ಯುತ್ತಮ ರಾಜಕೀಯ ಕವಿತೆ. ಮತ್ತು ತೌಲನಿಕವಾಗಿ ಕುವೆಂಪು 'ಕಲ್ಕಿ' ಜತೆಗಿಟ್ಟು ನೋಡುವಂತೆ ತನ್ನನ್ನು ತಾನೆ ಆಹ್ವಾನಿಸಿಕೊಳ್ಳುತ್ತದೆ. 'ಕಲ್ಕಿ'ಯಲ್ಲಿ ಕನಸಿನ ತಂತ್ರದ ಮೂಲಕ ಸಂಘರ್ಷದ ಮೂಲ ಸತ್ಯಗಳನ್ನು, ಅದರ ಹಿಂಸಾರಭಸಮತಿಯನ್ನು ಶೋಧಿಸುವ ಪ್ರಯತ್ನವಿದ್ದರೆ, 'ಅಲ್ಲೆ ಕುಂತವರೆ' ಕವಿತೆಯಲ್ಲಿ ದುಃಸ್ವಪ್ನಕ್ಕಿಂತ ಹೆಚ್ಚು ವಿಚಿತ್ರವಾದ ವಾಸ್ತವಲೋಕ ನಿರ್ಮಾಣವಾಗುತ್ತದೆ. 'ಕಲ್ಕಿ' ಕವಿತೆಯಲ್ಲಿ ಉದ್ದಕ್ಕೂ ಶಿಥಿಲತೆ ಎಲ್ಲೂ ಕಾಣದೆ ಕವಿತೆ ಬೆಳೆದರೆ, 'ಅಲ್ಲೆ ಕುಂತವರೆ' ಕೃತಿಯಲ್ಲಿ, ಅಲ್ಲಲ್ಲಿ ಮೊದಲ ಭಾಗದಿಂದಲೇ ಶಿಥಿಲ ಭಾಗಗಳು ಕುಟುಕುತ್ತವೆ. ಆದರೆ, ಈ ಖಂಡಕಾವ್ಯ ನಿಧಾನಕ್ಕೆ ರಾಜಕೀಯ ಹಿಂಸೆಯ ರೂಪವನ್ನು ತಲಸ್ಪರ್ಶಿಯಾಗಿ ಶೋಧಿಸಹತ್ತುತ್ತದೆ. ಕಲ್ಕಿಯಲ್ಲಿ ಕ್ರಾಂತಿಯ ಹಿಂಸಾಪ್ರವಾಹದ ಬಗ್ಗೆ ಗಮನವಿದ್ದರೆ 'ಅಲ್ಲೆ ಕುಂತವರೆ'ಯಲ್ಲಿ ಪ್ರಭುತ್ವದ ಹಿಂಸೆಯ ಬಗ್ಗೆ ಗಮನ. ಕವಿತೆಯಲ್ಲಿ ಟಾರ್ಚರ್ ವಸ್ತುವಾದಾಗ ವಾಸ್ತವ–ಅವಾಸ್ತವಗಳ ನಡುವಣ ವ್ಯತ್ಯಾಸ ಅಳಿದುಹೋಗುತ್ತದೆ. ಹೊರಗೆ ಮಳೆ ಝುರೋ ಎಂದು ಸುರಿಯುತ್ತಿರುತ್ತದೆ. ಮಕ್ಕಳು ಆನೆಕಲ್ಲ ಆಯುವ ಆಟ ಆಡುತ್ತ ಕುಣಿಯುತ್ತಿದ್ದಾರೆ. ಈ ಕವಿತೆಯ ನಿರೂಪಕ ಸತ್ತು ಭೂತವಾಗುತ್ತಾನೆ. ಸೆಕ್ಯುಲರ್ ರಾಜಕೀಯ ಪ್ರತಿಭೆಗೆ ಸುಲಭವಾಗಿ ಸಾಧ್ಯವಾಗದ ಕಾವ್ಯ ತಂತ್ರವನ್ನು ಈ ಖಂಡಕಾವ್ಯ ಬಳಸಿಕೊಳ್ಳುತ್ತದೆ. ರಾಜಕೀಯ ಹಿಂಸೆ ವಸ್ತುವಾದಾಗ ಅದನ್ನು ಸಮರ್ಥವಾಗಿ ಹಿಡಿಯಲು ಜಾನಪದೀಯ ಕವಿತಾ ತಂತ್ರ ಬಳಕೆಯಾಗುತ್ತದೆ. ತುರ್ತುಪರಿಸ್ಥಿತಿಯಲ್ಲಿ ಬಂದ ಈ ಕವಿತೆ ಆಗಿನ ಭೀತಿಯ, ಅವ್ಯಕ್ತ ಹಿಂಸೆಯ ವಾತಾವರಣವನ್ನು ವೃತ್ತಪತ್ರಿಕಾ ವರದಿಗಳ ಆಧಾರದ ಮೇಲೆಯೇ ಹಿಡಿಯುತ್ತದೆ. ಸಂಜಯ್ ಗಾಂಧಿಯ ಮರ ನೆಡುವ ಕಾರ್ಯಕ್ರಮವನ್ನು ಪ್ರತಿಮೆಯೊಂದರ ಮೂಲಕವೇ ಕವಿ ಚಿತ್ರಿಸುತ್ತಾರೆ. ಕವಿತೆ ವಾರ್ತೆಯನ್ನು ಪ್ರತಿಮೆಯಾಗಿಸುತ್ತದೆ ಎನ್ನುವುದಕ್ಕೆ ಈ ಸಾಲುಗಳು ಸಾಕ್ಷಿ. ಮತ್ತೆ ವಾಸ್ತವಕ್ಕೆ ಈ ಕವಿತೆ ಮರಳುವುದೇ ಇಲ್ಲ.

ದಲಿತ ಸಾಹಿತ್ಯದ ಒಂದು ಬಗೆಯ ಧಾರೆಯ ಅತ್ಯುತ್ತಮ ಸಾಧನೆಯನ್ನು

'ಅಲ್ಲೆ ಕುಂತವರೆ' ಖಂಡಕಾವ್ಯದಲ್ಲಿ ಕಾಣುತ್ತೇವೆ. ಅದು ಪರಂಪರೆಯನ್ನು ಹಿಂಸೆಯ ಪರಮರೂಪ ಎಂದು ಕಾಣುವ ಧಾರೆಯ ಶಕ್ತಿಶಾಲೀ ಪ್ರತಿನಿಧೀಕರಣ. ದಲಿತ ಸಾಹಿತ್ಯದ ಇನ್ನೊಂದು ಧಾರೆಯನ್ನು ದೇವನೂರ ಮಹಾದೇವರ 'ಒಡಲಾಳ' ಮತ್ತು 'ಕುಸುಮಬಾಲೆ'ಯಲ್ಲಿ ಕಾಣುತ್ತೇವೆ. ಹಿಂಸೆಯನ್ನು ಗೌಣವಾಗಿ ಕಾಣದೆ, ಆದರೆ ಪ್ರತಿಭಟಿಸಿ ಬೆಳೆವ ಮಾನವ ಚೈತನ್ಯದ ಬಗೆಗಿನ ಪ್ರಧಾನ ಒತ್ತು ಅಲ್ಲಿದೆ. ಮೊದಲ ಧಾರೆಯಲ್ಲಿ ಶೋಕ, ಕ್ರೋಧ, ಕರುಣೆಗಳು ಹರಿದರೆ ಎರಡನೆಯದರಲ್ಲಿ ಮೇಲುನೋಟಕ್ಕೆ ಪತ್ತೆಯಾಗದ ಶೃಂಗಾರ, ವೀರಗಳು ಹರಿಯುತ್ತವೆ. 'ಕುಸುಮಬಾಲೆ' ಒಂದು ಪ್ರೇಮಕಥೆಯಾದರೂ, ದಟ್ಟಹಿಂಸೆಯ ವಾತಾವರಣದಲ್ಲಿ ಆ ಪ್ರೇಮ ಬೆಳೆಯುತ್ತದೆ. ಹಿಂಸೆಯ ಅನುಭವವನ್ನು, ಹಿಂಸೆಯ ವಸ್ತುವನ್ನು ಪ್ರೇಮ, ವೀರ, ಶೃಂಗಾರ, ಹಾಸ್ಯಗಳು ಕರಗಿಸಿಬಿಡುತ್ತವೆ. ಜಾತಿಪದ್ಧತಿಯ ಕಾಠಿಣ್ಯ ಎಷ್ಟು ಹಳೆಯದ್ದೋ ಅದನ್ನು ಧಿಕ್ಕರಿಸಿ ಮಾನವ ಪ್ರೀತಿಯನ್ನು ಪ್ರತಿಷ್ಠಾಪಿಸುವ ಛಲವೂ ಅಷ್ಟೇ ಹಳೆಯದು. ಅದು ದಲಿತರ ಪಿತೃಪಿತಾಮಹರ ಲೋಕದಲ್ಲೇ ಇದೆ. ಕುಸುಮ ಬಾಲೆಯಲ್ಲಿ ಅದು ದಲಿತಕುಲದ ನೆನಪಾಗಿ, ಛಲವಾಗಿ, ಕೃತಿಯ ರೂಪವಾಗಿ ಕಾಣಿಸಿಕೊಳ್ಳುತ್ತದೆ. ಆ ಹಿರೀಕರ ಲೋಕದ ಇನ್ನೊಂದು ಪ್ರತಿರೂಪವನ್ನು 'ಅಲ್ಲೆ ಕುಂತವರೆ'ಯಲ್ಲಿ ಕಾಣುತ್ತೇವೆ. ಅದೂ ಕೂಡಾ ನಂಬಿಕೆಗಳ ಲೋಕವೇ. ಆದರೆ, ಅದು ಪ್ರಜ್ಞಾಪೂರ್ವಕ ಶ್ರದ್ಧೆಯಿಂದ ಬಂದದ್ದಲ್ಲ ಎನ್ನುವುದು ಇಲ್ಲಿ ಬಹುಮುಖ್ಯ.

ಈ ನಂಬಿಕೆಗಳ ಲೋಕ ಪೂರ್ಣಪ್ರಮಾಣದ ಅಭಿವ್ಯಕ್ತಿಗಾಗಿ ಸಿದ್ಧಲಿಂಗಯ್ಯನವರಲ್ಲಿ ತಾಳ್ಮೆಯಿಂದ ಕಾಯುತ್ತಿದೆ. ಹೀಗಾಗಿ, ಪ್ರಸ್ತುತ ಕೃತಿ ಕವಿಯ ಸೃಜನಶೀಲ ಜೀವನದ ಮೊದಲರ್ಧ ಮಾತ್ರವಾಗಲಿ ಎಂದು ಹಾರೈಸುತ್ತೇನೆ.

ಡಿ. ಆರ್. ನಾಗರಾಜ್

('ಆಯ್ದ ಕವಿತೆಗಳು' ಸಂಕಲನಕ್ಕೆ ಬರೆದದ್ದು)

ನೊಂದವರ ನಾದ...

ಜನತೆಯ ನಡುವೆಯೂ ಆತ್ಮೀಯರ ಒಳಗೂ ಸಿದ್ಧಲಿಂಗಯ್ಯನವರನ್ನು ಎಲ್ಲರೂ ಆತ್ಮೀಯವಾಗಿ ಅಭಿಮಾನದಿಂದ ಕವಿ ಎಂದು ಕರೆಯುವುದು ವಾಡಿಕೆ. ಸಿದ್ಧಲಿಂಗಯ್ಯನವರ ವ್ಯಕ್ತಿತ್ವವೇ ಕಾವ್ಯದ ಮಾನವೀಯ ತುಡಿತಕ್ಕೆ ತಾಳಿಕೆಯಾಗುವಂಥದು. ನೊಂದವರ ಆಕ್ರಂದನವನ್ನು ಹಾಡಾಗಿಸಿ ಕಾವ್ಯದ ನಾಡಿಬಡಿತಕ್ಕೆ ಹೊಸ ಬಗೆಯ ನಾದವನ್ನೂ ಜೀವವನ್ನೂ ತಂದವರು. ಅವರ ಕಾವ್ಯದ ಆಶಯ, ತುಡಿತ ಮತ್ತು ಕನಸುಗಳು ಇಡೀ ಕನ್ನಡ ಕಾವ್ಯ ಲೋಕದಲ್ಲಿಯೇ ಅಪರೂಪದ್ದು. ದಲಿತ ಸಮುದಾಯದ ಆತ್ಮಕಥನವೇ ರೂಪಕ, ಸಂಕೇತ, ಪ್ರತಿಮೆಗಳಾಗಿ ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಚಾಚಿಕೊಂಡಿದೆ. ಸಿದ್ಧಲಿಂಗಯ್ಯನವರ ಕಾವ್ಯಕ್ಕೆ ಅನಾದಿಕಾಲದ ಪುರಾತನದ ದನಿಯಿದೆ. ಈ ದನಿಗೆ ಸಮಷ್ಟಿಯಾದ ಸಾಂಸ್ಕೃತಿಕ ಶಕ್ತಿಯಿದೆ. ಹೀಗಾಗಿಯೆ ಸಿದ್ಧಲಿಂಗಯ್ಯನವರು ತಮ್ಮ ಕವಿತೆಗಳ ಹೊಸ ಮೈಯಲ್ಲಿ ನ್ಯಾಯದ ಆಕ್ರಂದನವನ್ನು ಹಾಡಾಗಿಸುತ್ತಿದ್ದರೂ ಅದರಾಳದಲ್ಲಿ ಪುರಾತನದ ಸಮಷ್ಟಿ ಸ್ಮೃತಿ ಬಿಂಬವನ್ನೂ ತೋರುತ್ತಿದ್ದಾರೆ.

ಇಂತಹ ಸಮಷ್ಟಿ ಸ್ಮೃತಿ ಸಂವೇದನೆಯ ಕಾರಣವಾಗಿಯೆ ಸಿದ್ಧಲಿಂಗಯ್ಯನವರು ಜನತೆಯ ಕವಿಯಾಗಿರುವುದು. ಅವರ ಕಾವ್ಯದ ಭಾಷೆ ಒರಟಾಗಿದೆ ಎಂದೇ ಈತನಕ ಅನೇಕರು ಭಾವಿಸಿದ್ದಾರೆ. ವಾಸ್ತವವಾಗಿ, ಅವರ ಕಾವ್ಯದ ಹೊರರೂಪ ನಯವಾಗಿಲ್ಲದಿದ್ದರೂ ಅದರ ಒಳಮೈ ಅತ್ಯಂತ ಕೋಮಲವಾದದ್ದು. ಜೀವದಷ್ಟೇ ಸೂಕ್ಷ್ಮವಾದದ್ದು, ಸಂಕೀರ್ಣವಾದದ್ದು. ಯಾವಾಗಲೂ ನೊಂದವರ ದನಿ ಗಡುಸಾಗಿಯೇ ಇರುತ್ತದೆ ನಿಜ. ಆದರೆ ಆ ಗಡುಸು ನುಡಿಯಲ್ಲಿ ಅದರ ಅರ್ಥ ಸ್ಪಂದನೆಯಲ್ಲಿ ಗಾಢವಾದ ವಿಷಾದವೂ ಮೌನವೂ ತುಂಬಿರುತ್ತದೆ. ಸಿದ್ಧಲಿಂಗಯ್ಯನವರ ಕಾವ್ಯದ ಹೊರ ಮೈಯನ್ನು ಮಾತ್ರವೆ ಮುಟ್ಟಿದರೆ ಅದು ನಿಜವಾದ ಸಂವೇದನೆಯ ಅನುಸಂಧಾನವಾಗಲಾರದು. ಬಹುಪಾಲು 'ದಲಿತ' ಸಮುದಾಯದ ಲೇಖಕರೆಲ್ಲರ ಬರಹಗಳನ್ನು ಹೊರಗಿನಿಂದಲೇ ಓದಿ ಹೊರ ಮೈಯನ್ನಷ್ಟೇ ಮುಟ್ಟಿ ತೀರ್ಮಾನಿಸುವ ದುರಭ್ಯಾಸವಿದೆ. ಸಿದ್ಧಲಿಂಗಯ್ಯನವರ ಕಾವ್ಯವನ್ನು ಹೊರಗಿನಿಂದಲೇ ಓದಿರುವುದು ಹೆಚ್ಚು. ಅವರ

ಕಾವ್ಯದ ಒಳದನಿ ಸಮಷ್ಟಿಶೀಲವಾಗಿರುವಂತೆಯೇ ಎಲ್ಲರನ್ನೂ ಒಳಗೊಳ್ಳುವಂಥದು. ಅಂದರೆ ; ಅವರ ಕಾವ್ಯದ ಹೊರರೂಪದಲ್ಲಿ ದಟ್ಟವಾಗಿ ದಲಿತ ಸಮುದಾಯದ ಆಕೃತಿಗಳೇ, ಆಶಯಗಳೇ, ಆವರಣವೇ ಪ್ರಧಾನವಾಗಿ ಕಾಣಿಸಿದರೂ ಅದೇ ಕಾವ್ಯದ ಅಂತರಾಳವು ಏಕಕಾಲಕ್ಕೆ ದಲಿತ ಸಮುದಾಯದ ತಲೆ ಮೇಲೆ ನಿಂತ ಉಳಿದೆಲ್ಲವೂ ಮಹಾದೇವರಲ್ಲಿ ಮತ್ತಷ್ಟು ಹಂಬಲದಲ್ಲಿ ಬಿಂಬಿತವಾಗಿದೆ. ಬಹುಪಾಲು ದಲಿತ ಲೇಖಕರೆಲ್ಲರ ಜಾಯಮಾನವಿದು.

ಆದರೆ, ಸಿದ್ಧಲಿಂಗಯ್ಯನವರ ಕಾವ್ಯ ಕೇವಲ ಸಿಟ್ಟು, ದ್ವೇಷ, ಹಿಂಸೆಯ ಪ್ರತೀಕವೆಂದು ಸಾರಿದ್ದು ಇವತ್ತಿಗೂ ಅಲ್ಲಲ್ಲಿ ಮೂಲೆಯಲ್ಲಿ ಪ್ರತಿಧ್ವನಿಸುತ್ತಲೆ ಇರುತ್ತದೆ. ಅಂತಹ ಧ್ವನಿಯು ಅವರ ಕಾವ್ಯದ ಹೊರಗೆ ನಿಂತವರ ಪ್ರಲಾಪವೇ ಹೊರತು ಮತ್ತೇನಲ್ಲ. 'ಇಕ್ರುಲ್ಲಾ ವದಿಲ್ಲಾ' ಎಂಬ ನುಡಿಗಟ್ಟು ಕಾವ್ಯದ ದನಿಯೇ ಹೊರತು ದ್ವೇಷದ ಹಗೆಯಲ್ಲ. ಅನಾದಿಕಾಲದ ಬಾಧೆಯ ಒಂದು ಉಚ್ವಾಸವೇ ಹೊರತು ಅಸೂಯೆ ಅಲ್ಲ. ಅದೊಂದು ರೂಪಕ. ಹಾಗೆಯೇ ಹತಾಶೆಯ ಕೊನೆ ತುದಿಯಲ್ಲಿ ನಿಂತವನ ಆಕ್ರಂದನದ ಕೂಗು. ಸಿದ್ಧಲಿಂಗಯ್ಯನವರ ಎಲ್ಲ ಪದ್ಯಗಳಲ್ಲೂ ಬಂದುಹೋಗುವ ಇಂತಹ ಒರಟು ರೂಪಕ ದನಿಗಳು ಸಮಷ್ಟಿಯ ಅಭಿವ್ಯಕ್ತಿಯ ಮೊದಲ ಸ್ಥಿತಿಯಲ್ಲಿ ಅನಾವರಣಗೊಳ್ಳುವ ನೈಸರ್ಗಿಕ ರೀತಿಯೇ ಹೊರತು ಅಸಹಜ ಆಲಾಪವೊ, ಆರೋಪವೊ ಅಲ್ಲ. ದಲಿತ ಲೋಕದ ಅನುಭವಕ್ಕೆ ಅನುಭಾವಿ ಪರಂಪರೆ ಬೇರೊಂದು ಬಗೆಯ ಸಮೃದ್ಧಿಯನ್ನೂ, ಅರ್ಥವನ್ನೂ ತಂದಿದ್ದರೆ ; ಆಧುನಿಕ ಯುಗದ ಬಿಡುಗಡೆಯ ಅನಾದಿ ಕಾಲದ ಕನಸು ಇನ್ನೊಂದು ರೀತಿಯ ಸಂವರ್ಧನೆಯನ್ನು ರೂಪಿಸಿದೆ. ಸಿದ್ಧಲಿಂಗಯ್ಯನವರ ರೂಪಕ, ಸಂಕೇತಗಳು ಇಲ್ಲಿ ಸ್ವಾತಂತ್ರ್ಯವನ್ನು ಪಡೆದುಕೊಂಡು ತಟ್ಟನೆ ನಾಭಿಯಿಂದ ಹೊರಜಗತ್ತಿನ ರೂಢಿಗತ ನಡೆನುಡಿಯ ಮುಂದೆ ಜಿಗಿದು ಬಂದು ಪ್ರಶ್ನಿಸುವುದರಿಂದ ಅವರ ಕಾವ್ಯದ ಸ್ವರೂಪವೇ ಭಿನ್ನವಾಗಿ ಅದನ್ನು ಒಳಗೊಳ್ಳುವ ಕ್ರಮವೂ ಬದಲಾಗಿಬಿಡುತ್ತದೆ.

ದಲಿತ ಲೋಕದ ರೂಪಕ, ಸಂಕೇತ, ಪ್ರತಿಮೆ, ನುಡಿಗಟ್ಟು, ವಾಕ್ಯರೂಪ, ಮಾತಿನ ವಿನ್ಯಾಸ, ಅರ್ಥದ ಅರ್ಥಾಂತರಗಳು ಮತ್ತು ಮೌನದ ಅಲೆಗಳು, ಶಬ್ದದ ತರಂಗಗಳು ಜಾತಿ ಪ್ರಣೀತ ಸಾಮಾಜಿಕ ವ್ಯವಸ್ಥೆಯಲ್ಲಿ ನಿಜವಾದ ಲೌಕಿಕದ ಸ್ವಾತಂತ್ರ್ಯವನ್ನು ಪಡೆದೇ ಇರಲಿಲ್ಲ. ಭಾಷಿಕ ಸ್ವಾತಂತ್ರ್ಯವೇ ಆಯಾ ಸಮುದಾಯದ ಅಸ್ತಿತ್ವ ಹಾಗೂ ಪ್ರತಿರೋಧ. ತನ್ನ ವಾಸದ ನಿರ್ದಿಷ್ಟ ನೆಲೆಗೆ ಮಾತ್ರವೆ ಭಾಷಿಕ ಸ್ವಾತಂತ್ರ್ಯವನ್ನು ಪಡೆದಿದ್ದ ದಲಿತ ಲೋಕವು ತನ್ನ ತೋಂಡಿ ಮತ್ತು ಅನುಭಾವಿ ಪರಂಪರೆಗಳಲ್ಲಿ ಅಂತಹ ಸ್ವಾತಂತ್ರ್ಯವನ್ನು ವಿಸ್ತರಿಸಿಕೊಂಡಿದೆ. ಆದರೆ ಇಂತಹ

ಸ್ವಾತಂತ್ರ್ಯವು ಆಧ್ಯಾತ್ಮದ ವಿಕಾಸಕ್ಕೆ ಹೆಚ್ಚು ಒತ್ತನ್ನು ಕೊಡುವಂಥದೇ ಹೊರತು ಲೌಕಿಕದ ರಣನೀತಿಯನ್ನು ಪೂರ್ಣವಾಗಿ ಎದುರಿಸಲಾರದು. ಆದ್ದರಿಂದಲೇ ಮಂಟೇಸ್ವಾಮಿ, ಮಲೆ ಮಾದೇಶ್ವರ, ಎಲ್ಲಮ್ಮ ಹಾಗೂ ಸಿರಿ ಕಾವ್ಯಗಳು ವ್ಯವಸ್ಥೆಯ ವಿರುದ್ಧ ದಂಗೆ ಏಳಲಾರವು. ಆ ಕಾವ್ಯಗಳ ಭಾಷಿಕ ಆಶಯ ಮತ್ತು ವಿನ್ಯಾಸವೇ ಅಂತಹ ದಂಗೆಗೆ ಹೊಂದಿಕೊಳ್ಳಲಾರವು. ಅಂದರೆ ; ಒಂದು ಭಾಷೆಯ ಹಾಗೂ ಅದರ ಸಮುದಾಯದ ಸೃಜನಶೀಲ ಸಂಬಂಧವನ್ನು ವ್ಯವಸ್ಥೆಯು ತನ್ನ ಅನುಕೂಲಕ್ಕನುವಾಗುವ ಹಾಗೆ ದುರುಪಯೋಗಪಡಿಸಿಕೊಳ್ಳುತ್ತಿರುತ್ತದೆ. ಇದರಿಂದಾಗಿಯೆ ಬಹುಸಂಖ್ಯಾತ ತಳ ಸಮುದಾಯಗಳು ತಮ್ಮ ಪೂರ್ವ ಪರಂಪರೆಯಲ್ಲಿ ಲೌಕಿಕ ಪರಿಭಾಷೆಯಲ್ಲಿ ಹೆಚ್ಚು ಧ್ವನಿ ಶಕ್ತಿಯಿಂದ ಪ್ರತಿರೋಧವನ್ನು ಒಡ್ಡಲು ಆಗಲಿಲ್ಲ. ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಮಾತ್ರವೆ ಅತ್ಯಂತಿಕವಾಗಿ ಪರಿಭಾಷಿಸುವ ತಳಸಮುದಾಯಗಳು ತನ್ನ ನಿಜಜೀವನದ ಅಗತ್ಯಕ್ಕೆ ಸಂಬಂಧಿಸಿದಂತೆ ಪ್ರಮುಖವಾದ ಕಾಲ – ಅವಕಾಶಗಳನ್ನು ಪಡೆಯಲು ಮುಂದಾಗಲಿಲ್ಲ. ಇದರ ಪರಿಣಾಮವೇ ಮೌಖಿಕ ಪರಂಪರೆ ರಮ್ಯವಿಶ್ವಾಸದ ವಿಲಾಸದಲ್ಲಿ ಮೈ ಮರೆಯುವಂಥಾದದ್ದು.

ಆದರೆ ; ಅಧುನಿಕ ಭಾರತದ ದಲಿತಾನುಭವಕ್ಕೆ ಭಿನ್ನವಾದ ಸಾಮಾಜಿಕ ಹಾಗೂ ರಾಜಕೀಯ ವಾತಾವರಣವು ಏರ್ಪಟ್ಟ ಮೇಲೆ, ವಸಾಹತುಶಾಹಿ ಜಗತ್ತಿನ ಅನುಭವ ಸೇರಿಕೊಂಡ ನಂತರ ದಲಿತ ಸಂವೇದನೆಗೆ ವಿಶೇಷವಾದ ವೈಚಾರಿಕವಾದ ಭಾಷಿಕ ವಿನ್ಯಾಸ ಸಾಧ್ಯವಾದದ್ದು ಚಾರಿತ್ರಿಕವಾದುದು. ಲೌಕಿಕದ ಭಾಷಿಕ ಸ್ವಾತಂತ್ರ್ಯ ಆಕಸ್ಮಿಕವೊ ಎಂಬಂತೆ ದಲಿತರಿಗೆ ಸಾಧ್ಯವಾದದ್ದೇ ಒಂದು ದೊಡ್ಡ ದಿಗ್ವಿಜಯ. ಹಾಗಾಗಿಯೆ ದಲಿತ ಲೇಖಕರ ಭಾಷಿಕ ಮೊನಚಿಗೆ ಸದಾ ದಂಗೆಯ ದಾಹ. ಯಾವತ್ತೂ ಪ್ರಶ್ನಿಸುವ ಹಟ ಕೂಡ. ಆದರೆ ಈ ದಂಗೆ, ಈ ಹಟ, ಈ ಹಕ್ಕೊತ್ತಾಯ, ಈ ಆಕ್ರಂದನ, ಈ ಪ್ರತಿರೋಧದ ಒಳಗೆ ಮಾತ್ರ ತಾಯ ಪ್ರೀತಿಯನ್ನೂ ಕನಸನ್ನೂ ಒಟ್ಟಿಗೇ ಬೆಸೆದುಕೊಂಡು ಅನಾವರಣಗೊಂಡಿರುತ್ತವೆ. ಈ ವಹಾತಿಗೆ ಸಿದ್ಧಲಿಂಗಯ್ಯನವರ ಯಾವುದೇ ಕವಿತೆಯನ್ನಾದರೂ ಪರೀಕ್ಷಿಸಬಹುದು. ಅಂದರೆ ; ಏಕಕಾಲಕ್ಕೆ ಒಂದು ರಾಜಕೀಯ space ಅನ್ನೂ ಸಾಮಾಜಿಕ ರಚನೆಯನ್ನೂ ದಂಗೆಯ ಜೀವನ್ಮರಣದ ಸವಾಲನ್ನೂ ಸೃಷ್ಟಿಸಿಕೊಂಡೇ ತನ್ನವರಿಗಾಗಿ ಎದುರಾಳಿಗಳ ಮುಂದೆ ಎದೆ ಕೊಡುವಂಥದು. ಹೀಗಾಗಿ ಇದು 'ಕಾವ್ಯ'ದ ಜವಾಬ್ದಾರಿಯ ಆಚೆನದು. ಸಿದ್ಧಲಿಂಗಯ್ಯನವರ ಕಾವ್ಯ ಈ ಅರ್ಥದಲ್ಲಿ ಸಮಷ್ಟಿಯ ದಂಗೆ. ಆಧುನಿಕ ಭಾರತ ಸೃಷ್ಟಿಸಿದ ಭಾಷಿಕ ಸ್ವಾತಂತ್ರ್ಯದ ಕಿಡಿ. ಆದರೆ ಈ ಕಿಡಿ

ಸುಡುವಂಥದಲ್ಲ, ನೋಡುಗರಿಗೆ ಅದು ಸುಡುವಂತೆ ಕಾಣುವುದು ದಿಟ. ಒಳಗೆ ಮಾತ್ರ ಮಾನವೀಯತೆಯ ಹಸಿವಿನಿಂದ ಮೌನವಾಗಿ ಉರಿಯುವ ಈ ಬೆಳಗು ಮನುಷ್ಯನಾದವನ ಅತ್ಯಂತಿಕ ಪ್ರಭೆ. ಸಿದ್ಧಲಿಂಗಯ್ಯನವರ ಈ ಪ್ರಭೆಯು ಇಡೀ ಕನ್ನಡ ಕಾವ್ಯವನ್ನೇ ತನ್ನ ಸಮುದಾಯದ ಮೂಲಕ ವಿಸ್ತರಿಸಿದೆ.

ವೈಚಾರಿಕ ಜಾಗೃತಿಗೆ ; ಅದರ ಮೂಲಕ ತೆರೆದುಕೊಳ್ಳುವ ರಾಜಕೀಯ ಮತ್ತು ಆರ್ಥಿಕ ಪಲ್ಲಟಗಳಿಗೆ ಮುಖಾಮುಖಿಯಾಗುವ ಕಾವ್ಯ ಸಮಕಾಲೀನ ಸಂಕಟವನ್ನು ಒಂದು ಕೈ ಹೆಚ್ಚಾಗಿಯೆ ಧ್ವನಿಸುವುದು ಸ್ವಾಭಾವಿಕ. ಆ ಬಗೆಯ ಸಂಕಟ, ಅಪಮಾನ, ಅನ್ಯಾಯದ ಪರಮ ಪರಾಕ್ರಮದ ವಿಕಾರವನ್ನೆಲ್ಲ ಗದ್ಯದ ಎಚ್ಚರದಲ್ಲಿ ನಿರೂಪಿಸುವುದು ಇನ್ನೂ ದ್ವಿಗುಣವಾದ ಜವಾಬ್ದಾರಿ. ಇದನ್ನು ಬಾಬಾಸಾಹೇಬ ಅಂಬೇಡ್ಕರ್ ಅವರು ತಮ್ಮ ವೈಚಾರಿಕ ಗದ್ಯದಲ್ಲಿ ಅಗಾಧವಾಗಿ ನಿರ್ಮಿಸಿದ್ದಾರೆ. ಸಿದ್ಧಲಿಂಗಯ್ಯನವರ ಕಾವ್ಯಕ್ಕೆ ವೈಚಾರಿಕ ಗಡಿರೇಖೆಗಳು ಇವೆಯಾದರೂ ಅವನ್ನು ದಾಟುವ ಗುಣವಿದೆ. ಇದು ಕಾವ್ಯದ ಸ್ವಭಾವ. ಕವಿಯಾದ ಯಾರಾದರೂ ಪಾಲಿಸಬೇಕಾದ ಧರ್ಮ. ಆದ್ದರಿಂದಲೇ ಸಿದ್ಧಲಿಂಗಯ್ಯನವರಿಗೆ 'ಅಂಬೇಡ್ಕರ್' ಎಂಬ ಮಹಾನದಿ ಕೂಡ ಸಾಕಾಗುವುದಿಲ್ಲ. ಕೇವಲ 'ಮಿಂಚು ಮಾಯೆ ಅಷ್ಟೆಯೆ' ಎಂಬ ಧ್ವನಿಯ ಅಪೂರ್ಣತೆಯೇ ಅನೇಕ ಸಂಗತಿಗಳನ್ನು ಬಿತ್ತುತ್ತದೆ. ವೈಚಾರಿಕ ಹಟವಿದ್ದೂ ಸಿದ್ಧಲಿಂಗಯ್ಯನವರು ಹೀಗೆ ಅನಂತತೆಯ ಕಡೆಗೆ ದಿಟ್ಟಿಸುವುದು ಸಮುದಾಯದ ಆಶಯವೂ ಆಗಿದೆ.

ಆದರೆ ಸಿದ್ಧಲಿಂಗಯ್ಯನವರ ಒಟ್ಟು ಕಾವ್ಯದ ತಾತ್ವಿಕ ಬುನಾದಿ ಮಾತ್ರ ಮಾರ್ಕ್ಸ್‌ವಾದಿ ಸತ್ವದಿಂದ ಅಂಬೇಡ್ಕರ್ ಮತ್ತು ಗಾಂಧಿಯ ಗಾಢವಾದ ಪ್ರಭಾವದಿಂದ ಬೇರುಗೊಂಡಿರುವುದು ಕುತೂಹಲಕರವಾಗಿದೆ. 'ಅಲ್ಲೆ ಕುಂತವರೆ' ಎಂಬ ಅವರ ವಿಶಿಷ್ಟ ಕವಿತೆಯ ಆಳದಲ್ಲಿ ತೋಂಡಿ ಪರಂಪರೆಯ ಪೂರ್ವಿಕರ ಸೊಲ್ಲಿದ್ದರೆ ; ಆ ಧ್ವನಿಯ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿನ್ಯಾಸದಲ್ಲಿ ಮೇಲಿನ ಈ ಮೂರು ಜನರ ತಾತ್ವಿಕಾಂಶಗಳು ಬಿರುಕುಗೊಂಡಿವೆ. ಇಲ್ಲಿನ ಸಮಸ್ಯೆ ಏನೆಂದರೆ; ಕಾವ್ಯದ ಸಹಜ ಧ್ವನಿಶಕ್ತಿಯು ಕವಿಯ ಬದ್ಧತೆಯ ಜೊತೆಗೆ ಸರಿಯಾದ ರೀತಿಯಲ್ಲಿ ಅನುಸಂಧಾನಗೊಳ್ಳುತ್ತಿಲ್ಲ. ದಲಿತ ಸಮುದಾಯದ ಸಮಷ್ಟಿ ಸಂವೇದನೆಯ ಸಾಂಸ್ಕೃತಿಕ ವಿನ್ಯಾಸಕ್ಕೂ ಕವಿಯ ವ್ಯಷ್ಟಿ ಪ್ರಧಾನವಾದ ತಾತ್ವಿಕ ಬದ್ಧತೆಗೂ ಸೂಕ್ತವಾದ ಅನುಸಂಧಾನವೇ ಉಂಟಾಗಿಲ್ಲ. ಹೀಗಾಗಿಯೇ ದಲಿತ ಲೋಕದ ಸಾಂಸ್ಕೃತಿಕ ಪ್ರತಿರೋಧ ಶಕ್ತಿಯು ಗೌಣಗೊಂಡು ಅದರ ವಾಸ್ತವ ಜಗತ್ತಿನ 'ಜರೂರು' ಮಾತ್ರವೆ ಮುಖ್ಯವಾಗಿಬಿಡುವ ವಿಪರ್ಯಾಸವಿದೆ.

ಹೀಗಾದಾಗಲೆಲ್ಲ ಇಡೀ ಸಮುದಾಯದ ಒಟ್ಟು ಅನುಭವವೆಲ್ಲವೂ ಅದರ ಆಶಯವೆಲ್ಲವೂ ಕವಿಯ ವ್ಯಷ್ಟಿನಿಷ್ಠತಾತ್ವಿಕ ಬದ್ಧತೆಯ ನಿಯಂತ್ರಣಕ್ಕೆ ಒಳಪಟ್ಟು ಲೌಕಿಕದ ಭಾಷಿಕ ಸ್ವಾತಂತ್ರ್ಯವೇ ವಿಜೃಂಭಿಸಿಬಿಡುತ್ತದೆ. ಅಂದರೆ ಸಮುದಾಯಕ್ಕಿರಬಹುದಾದ ಅತ್ಯಂತಿಕವಾದ ಮೌನದ ಆಗಾಧ ಶಕ್ತಿಯನ್ನು ಕವಿ ಇಂತಲ್ಲಿ ಬಿಂಬಿಸಲು ಸಾಧ್ಯವಾಗುವುದಿಲ್ಲ. ಸಿದ್ಧಲಿಂಗಯ್ಯನವರ ಒಟ್ಟು ಕಾವ್ಯಕ್ಕೆ ಇಂಥದೊಂದು ಮಿತಿಯಿದೆ. ಆದರೂ ಕವಿಯ ಈ ಮಿತಿಯೂ ಕೂಡ ದಲಿತ ಕಾವ್ಯ ಪರಂಪರೆಗೆ ಸಕಾರಾತ್ಮಕವಾದುದೇ. ಕನ್ನಡದ ಸಂದರ್ಭದಲ್ಲಿ ಆಧುನಿಕ ಕಾವ್ಯವು ಉಳ್ಳವರ ನುಡಿಗಟ್ಟಿನಲ್ಲಿ ಸಿಕ್ಕಿಕೊಂಡಿದ್ದಾಗ ಅದನ್ನು ದಲಿತರ ಕೇರಿಗಳಿಗೆ ಕರೆದುಕೊಂಡು ಹೋಗಿದ್ದು ದೊಡ್ಡ ಸಾಹಸವೇ ಸರಿ. ಈ ಸಾಹಸದಲ್ಲಿ ದಲಿತರ ಆತ್ಮವೇ ಸೇರಿಕೊಂಡಿದೆ ಎಂಬುದನ್ನು ಯಾರೂ ಮರೆಯುವಂತಿಲ್ಲ.

ಸಿದ್ಧಲಿಂಗಯ್ಯನವರ ಭಾಷಿಕ ವಿನ್ಯಾಸಕ್ಕೆ ವಾಚ್ಯತೆಯ ಲಕ್ಷಣವಿದ್ದರೂ ಅದನ್ನು ಭಿನ್ನವಾಗಿ ಪರಿಭಾವಿಸಬೇಕು. ಬೆತ್ತಲಾದ ಬಯಲಿನಂತಹ ದಲಿತ ಸಮಾಜವೂ ಹೊರ ರೂಪದಲ್ಲಿ ವಾಚ್ಯವೇ. ದಲಿತರ ನೇರ ನುಡಿ, ನಿಷ್ಠುರ ಮಾತು, ಗಟ್ಟಿಯಾದ ಒರಟು ದನಿ ಯಾರಿಗಾದರೂ ಸ್ವಲ್ಪ ಇರುಸುಮುರುಸೇ. ಸಿದ್ಧಲಿಂಗಯ್ಯನವರು ಒಂದು ವೇಳೆ ಆರಂಭದ ಆ ಹಂತದಲ್ಲಿ ಅತ್ಯಂತ ಲಯಬದ್ಧವಾಗಿ ಹಿತಮಿತ ಸುಂದರ ಸುರಾಗದ ದನಿಯಲ್ಲಿ ಭವ್ಯದಿವ್ಯ ಪರಿಭಾಷೆಯಲ್ಲಿ ತನ್ನವರ ಬಗ್ಗೆ ಕಾವ್ಯ ಕಟ್ಟಿದ್ದರೆ ಅದಕ್ಕೆ ಯಾವ ಮಾನ್ಯತೆಯೂ ಇರುತ್ತಿರಲಿಲ್ಲ. ದಾಸರ ಮತ್ತು ತತ್ವಪದಕಾರರ ಹಾಗೆಯೆ ಜನಪದ ಮಹಾಕಾವ್ಯಗಳ ಸೃಷ್ಟಿಕರ್ತರಿಗಿಂತ ಸಿದ್ಧಲಿಂಗಯ್ಯನವರು ಭಿನ್ನವಾಗಲೇಬೇಕಾದ ಅನಿವಾರ್ಯತೆ ಇತ್ತು. ಆದ್ದರಿಂದಲೇ ಅವರು ಲೌಕಿಕದ ಭಾಷಿಕ ಸ್ವಾತಂತ್ರ್ಯವನ್ನು ವಿಶೇಷವಾಗಿ ಅಧಿಕವಾಗಿ ತಮ್ಮ ಕಾವ್ಯಕ್ಕೆ ತಂದುಕೊಂಡದ್ದು. ಹೀಗೆ ಆಯ್ಕೆ ಮಾಡಿಕೊಳ್ಳುವ ಸ್ಥಿತಿಯಲ್ಲಿ ಪರಂಪರೆಯ ಜೊತೆ ಸಿದ್ಧಲಿಂಗಯ್ಯನವರು ತಾಳ್ಮೆ ವಹಿಸಿ ಆಲೋಚಿಸಲು ಅವಕಾಶವಿರಲಿಲ್ಲ. ಇಡೀ ಸಮುದಾಯವನ್ನು ಪ್ರತಿನಿಧಿಸಿ ಕಾವ್ಯ ಸೃಷ್ಟಿಸುವ ಮೊದಲಿಗರಿಗೆ ಇದು ಅನಿವಾರ್ಯ. ಅವರ ನಂತರ ಬಂದವರು ವಿಭಿನ್ನ ಭಾಷಿಕ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದು ಸುಲಭ. ಹೀಗಾಗಿಯೆ ಕೆ. ಬಿ. ಸಿದ್ಧಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಅರವಿಂದ ಮಾಲಗತ್ತಿ, ಎಲ್. ಹನುಮಂತಯ್ಯ ಮುಂತಾದ ಕವಿಗಳಿಗೆ ದಾರಿ ಸುಗಮವಾದದ್ದು. ತಮ್ಮವರ ಇಡೀ ಬದುಕೇ ಸಾಮಾಜಿಕ ಶಾಪಗಳಲ್ಲಿ ಉರಿದುಹೋಗುವಾಗ ಬೆಡಗಿನ ವಚನಗಳ ಶೈಲಿಯಲ್ಲೋ ಶ್ಲೋಕಗಳ ವಿನ್ಯಾಸದಲ್ಲೊ ನವ್ಯಕಾವ್ಯದ ಜಾಣ್ಮೆಯಲ್ಲೊ ಅಥವಾ ನವೋದಯ ಕಾವ್ಯದ ರಮ್ಯ ವಿಲಾಸದಲ್ಲೊ ಸಿದ್ಧಲಿಂಗಯ್ಯನವರು ವಿಹರಿಸಿ

ಸೂಚ್ಯವಾಗಿ ತಾಂತ್ರಿಕವಾಗಿ ಛಂದಸ್ಸಿನಲ್ಲಿ ಅಡಗಿಕೊಳ್ಳುವಂತಿರಲಿಲ್ಲ.

ತನ್ನವರ ಅನುಭವದ ಸಾರವನ್ನು ಸರಳವಾಗಿಯೆ ಆದರೆ ಅದ್ಭುತವಾಗಿಯೆ ಮನ ಕರಗುವಂತೆ ಸಿದ್ಧಲಿಂಗಯ್ಯನವರು ಕೆಲವೇ ರೂಪಕಗಳಲ್ಲಿ ಸಮುದಾಯದ ಒಟ್ಟು ಬದುಕನ್ನು ಬಿಂಬಿಸಿದ್ದಾರೆ. 'ಅಪ್ಪನ ಬೆವರಿನ ರಕ್ತವು ಸೋರಿ ಕೆಂಪಾದವು ಹೂವು' ಎಂಬ ಈ ಒಂದೇ ಒಂದು ಸಾಲು ಸಾಕು ; ಸಿದ್ಧಲಿಂಗಯ್ಯನವರ ಕಾವ್ಯದ ಗಾಢತೆಯನ್ನು ಸೂಚಿಸಲು. ಈ ಸಾಲು ಬಹಳ ಸರಳವಾದದ್ದೇ. ಆದರೆ ಆ ಸಾಲಿನ ಅನುಭವಕ್ಕೆ ಶತಮಾನಗಳ ಹೊರೆ ಇದೆ. ಅನಾದಿ ಕಾಲದ ಅಪಮಾನವಿದೆ. ಶೋಷಣೆಯ ದೊಡ್ಡ ಇತಿಹಾಸವಿದೆ. ಇದರಿಂದಾಗಿಯೆ ಕವಿಯ ಸರಳತೆ, ನೇರ ನುಡಿ ಸೂಚ್ಯಾರ್ಥದಲ್ಲಿ ಘನವಾದುದು.

'ನಡುಹಗಲಿನಲ್ಲಿ ಕಲ್ಲು ಹೊತ್ತಿರುವ
ಸುಡುವ ನೆತ್ತಿಗೆ ಸಿಂಬೆಯಾಗಲೆಂದು
ಗುರುತು ಸಿಕ್ಕದ ಮಕ್ಕಳು ಗುನುಗಿ
ಹೆತ್ತವರಿಗೆ ನೆಪ್ಪಾಗಲೆಂದು
ಅಪರಾತ್ರಿಯಲಿ ಕತ್ತು ಹಿಸುಕುವ ಕೈಗಳು
ಬೆಚ್ಚಿ ಕೆಳಗಿಳಿಯಲೆಂದು
ನನ್ನ ಕವಿತೆ ಹಂಬಲಿಸುತ್ತದೆ.'
(ಕನವರಿಕೆ)

ಇಷ್ಟೊಂದು ಆರ್ದ್ರವಾಗಿ ತನ್ನವರ ಹೊಕ್ಕುಳಬಳ್ಳಿಯಿಂದ ಇಂತಹ ಸಾಲುಗಳನ್ನು ಹೆಣೆಯುತ್ತಿರುವ ಕವಿಯ ಅಂತಃಕರಣ ಮತ್ತು ತಾಯ್ತನ ಅಸಾಧಾರಣವಾದುದು. ಪಂಪ ಮಹಾಕವಿ ಬರೆಯಲಾಗದ ಇಂತಹ ಸಾಲುಗಳನ್ನು, ತಿರಸ್ಕಾರಕ್ಕೆ ಒಳಪಟ್ಟ ಸಮಾಜದಿಂದ ಬಂದ ಸಿದ್ಧಲಿಂಗಯ್ಯನವರು ಬರೆಯಲೇಬೇಕಿತ್ತು. ಆ ಮೂಲಕ ಕನ್ನಡ ಕಾವ್ಯದಲ್ಲಿ ಬಹಳ ಕಾಲದಿಂದ ದಾಖಲಾಗದೆ ಉಳಿದಿದ್ದ ಸಂವೇದನೆಯನ್ನು ದಾಖಲಿಸುವುದು ಅನಿವಾರ್ಯವಾಗಿತ್ತು. ಹೀಗಾಗಿಯೆ ಸಿದ್ಧಲಿಂಗಯ್ಯನವರ ಕಾವ್ಯಕ್ಕೆ ದಲಿತ ಸಮುದಾಯಗಳ ಚಹರೆ ದಟ್ಟವಾಗಿ ವ್ಯಾಪಿಸಿರುವುದು. ಅಲ್ಲದೇ ಇಡೀ ಅವರ ಕಾವ್ಯವೇ ಸಮುದಾಯದ ಆತ್ಮಕಥನ. ಕನ್ನಡದಲ್ಲಿ ಅತಿರಥ ಮಹಾರಥ ಕವಿವರ್ಯರು ಇದ್ದಾರೆ. ಅವರಿಗೆ ನಮ್ಮಂಥವರ ನಮನ ಇದ್ದೇ ಇದೆ. ಅವರ ಘನತೆಯ ತೂಕವೇ ಬೇರೆ. ಆದರೆ ಅಂಥವರಾರ ಕಾವ್ಯಕ್ಕೂ ದಲಿತ ಸಮುದಾಯಗಳ ಆತ್ಮಕಥನವಾಗುವ ಶಕ್ತಿ ಇಲ್ಲ. ಮಲೆ ಮಾದೇಶ್ವರ, ಮಂಟೇಸ್ವಾಮಿಯಂತಹ ಜನತೆಯ ಕಾವ್ಯಗಳು ಆಯಾ ಸಾಂಸ್ಕೃತಿಕ ಗುಂಪಿನ

ಆತ್ಮಕಥನಗಳೇ ಹೌದು. ಅಂತೆಯೇ ಸಿದ್ಧಲಿಂಗಯ್ಯನವರ ಈ ಕಾವ್ಯ ಆಧುನಿಕ ಜಗತ್ತಿನ ಸಾಮಾಜಿಕ ಹಾಗೂ ರಾಜಕೀಯ ಆತ್ಮಕಥನ. ಈ ಬಗೆಯ ಆತ್ಮಕಥನಕ್ಕೆ ಅತ್ಯಂತಿಕವಾದ ಪ್ರತಿರೋಧ ಬಲವಿದೆ. ಮುಟ್ಟಿರಲಾಗದ್ದನ್ನು ಮುಟ್ಟಿಸುವ, ಕೇಳಿಕೊಳ್ಳಲಾಗದ್ದನ್ನು ಕೇಳಿಸುವ, ಹೇಳಲಾಗದ್ದನ್ನು ಹೇಳಿಸುವ ಇಂತಹ ಆತ್ಮಕಥನವನ್ನು ಕಾವ್ಯದ ಬೇರೆ ಮನೋಧರ್ಮದಿಂದ ಅರಿಯಬೇಕಾಗುತ್ತದೆ.

ಸಿದ್ಧಲಿಂಗಯ್ಯನವರ ಕಾವ್ಯ ಹೀಗಾಗಿಯೇ ಗದ್ಯದ ರೂಪದಿಂದಲೂ ಕಾಣಿಸಿಕೊಳ್ಳುವುದು. ತೀವ್ರವಾದ ಅಪಮಾನ, ಹಿಂಸೆ, ಅನ್ಯಾಯ, ದಬ್ಬಾಳಿಕೆಯನ್ನು ಅತ್ಯಂತ ಸೂಕ್ಷ್ಮವಾಗಿ ಹೇಳುವುದಕ್ಕೆ ಹಲವಾರು ದಾರಿಗಳಿವೆ. ಸಿದ್ಧಲಿಂಗಯ್ಯನವರಿಗೆ ಮೊದಲು ದಾರಿಯೇ ಇರಲಿಲ್ಲ. ಮೌಖಿಕ ಪರಂಪರೆಯ ದಾರಿ ಇತ್ತಾದರೂ ಅದನ್ನು ಹಿಂಬಾಲಿಸಿ ಹೊರಟಿದ್ದರೆ ಅವರಿಗೆ ಅವರದೇ ಆದ ಮಾರ್ಗ ಸಿಗುತ್ತಿರಲಿಲ್ಲ. 'ಒಂದು ದನದ ಪದ'ದಂತಹ ಜನಪದ ಮಾದರಿಯ ಹಲವು ಕವಿತೆಗಳು ದೇಶೀಯ ರೂಪವನ್ನೇ ಹೊದ್ದುಕೊಂಡು ಅದರ ಒಳದನಿಯನ್ನು ಆಧುನಿಕ ಯುಗದ ವೈಚಾರಿಕ ಎಚ್ಚರದಲ್ಲಿ ನುಡಿಸುವುದು ವಿಶಿಷ್ಟವಾಗಿದೆ. ಆದರೆ 'ಅಲ್ಲೆ ಕುಂತವರೆ' ಎಂಬ ಖಂಡಕಾವ್ಯವು ಅಪಾರವಾದ ಸಾಧ್ಯತೆಗಳ ಮೂಲಕ ಆರಂಭವಾಗಿ ಅಂತಿಮ ಸ್ಥಿತಿಯಲ್ಲಿ ಗಾಳಿಯಲ್ಲಿ ಆವಿಯಾದ ರೂಪಕಗಳಂತೆ ಜಾರಿಹೋಗುತ್ತದೆ. ಆಧುನಿಕ ಜಗತ್ತಿನ ಕಗ್ಗತ್ತಲ ನರಮೇಧದ ಒಳಗಿಂದ ಕುದಿಯುತ್ತ ಬಿಡುಗಡೆಗಾಗಿ ಪರಿಪರಿಯಾಗಿ ಹುಡುಕಾಡುವ 'ಅಲ್ಲೇ ಕುಂತವರೆ' ನಾಯಕ ಕವಿತೆಯ ನಿರ್ಣಾಯಕ ಸಂದರ್ಭದಲ್ಲಿ ಕಣ್ಮರೆಯಾಗುತ್ತಾನೆ. ಹೀಗಾಗಿಯೆ ಇದು ಸಾಧಿಸಬಹುದಾಗಿದ್ದ ಎತ್ತರವನ್ನು ಏರುವುದಿಲ್ಲ. ಭಾಗಶಃ ಈ ಖಂಡಕಾವ್ಯದಲ್ಲಿ ಸಿದ್ಧಲಿಂಗಯ್ಯನವರು ಸಾಂಸ್ಕೃತಿಕ ವಿನ್ಯಾಸದ ಮೂಲಕ ಸಾಮಾಜಿಕ ವಾಸ್ತವವನ್ನು ಪುನರ‍್ರಚಿಸಲು ತೊಡಗಿ ; ಅಂತಿಮವಾಗಿ ಇಂತಹ ಎರಡೂ ಭಾಷಿಕ ಲಯಗಳನ್ನು ವೈಚಾರಿಕತೆಯಲ್ಲಿ ಬೆಸೆಯಲು ವಿಫಲವಾಗಿರಬೇಕು. ಆದರೆ ಈ ಕಾವ್ಯದ ನಾಯಕನ ಮೇಲೆ ನವ್ಯ ಕಾವ್ಯದ ನಾಯಕರ ಪ್ರಭಾವವಿದ್ದಂತಿದೆ. ಹಾಗಾಗಿಯೆ ಅತ್ತ ಕಡೆ ಇಡೀ ತನ್ನ ಸಮುದಾಯ, ಅದರ ಪುರಾಣನಿಷ್ಠ ಜಗತ್ತು ಅದರ ಆಚರಣೆಯ ಮಹಾ ಸಂಭ್ರಮದಲ್ಲಿ ತೊಡಗಿಯೂ ಮುಳುಗದಂತಹ ಸ್ಥಿತಿಯಲ್ಲಿ ತನ್ನ ಪ್ರೇಯಸಿಯ ಜೊತೆ ಮೌನದಲ್ಲಿ ಕನಸಿನಲ್ಲಿ ಅಸಹಾಯಕತೆಯನ್ನು ನಿರೂಪಿಸಿಕೊಂಡಂತಿದೆ. ಎಲ್ಲೋ ಶೇಕ್ಸ್‌ಪಿಯರನ ಹ್ಯಾಮ್ಲೆಟ್ ಕೂಡ ಇಂಥದೇ ಸಂಕಟದಲ್ಲಿ ವದ್ದಾಡಿದಂತೆ ಅಥವಾ ಹ್ಯಾಮ್ಲೆಟ್‌ನ ಥರದಲ್ಲೇ ಹಿಂಸೆಯನ್ನು ಭಾವಿಸುವಂತೆ ಈ ಕವಿತೆಯ ನಾಯಕ ನಮ್ಮ ಮುಂದೆ ಸುಳಿಯುತ್ತಾನೆ. ಆದರೆ ಈ ನಾಯಕ ಏಕಕಾಲಕ್ಕೆ ತನ್ನ ಪ್ರೇಮ, ತನ್ನ ಬಿಡುಗಡೆ,

ತನ್ನವರ ವಿಮುಕ್ತಿ ಹಾಗೆಯೇ ತನ್ನ ಸುತ್ತಲಿನ ಎಲ್ಲವೂ ಸುಂದರವಾದ ಹೂದೋಟದಂತೆ ಹಸನಾಗಿ ಬಿಡಲಿ ಎಂದು ಭಾವಿಸುತ್ತಾನೆ. ಹಾಗಾಗಿಯೆ ಈ ಕಾವ್ಯವು ಇಲ್ಲಿನ ರಾಜಕೀಯ, ಇಲ್ಲಿನ ವಿಕೃತ ಸಮಾಜ, ಇಲ್ಲಿನ ಅವಿಶ್ವಾಸವನ್ನೆಲ್ಲ ಗಾಢವಾಗಿ ನಿರ್ಮಿಸುತ್ತದೆ. ಸಮಸ್ಯೆ ಎಂದರೆ ; ಕವಿ ಸಿದ್ಧಲಿಂಗಯ್ಯನವರ ವ್ಯಕ್ತಿತ್ವಕ್ಕೂ 'ಅಲ್ಲೇ ಕುಂತವರೆ' ಕವಿತೆಯ ನಾಯಕನ ಸ್ಥಿತಿಗೂ ವ್ಯತ್ಯಾಸವಿಲ್ಲದಿರುವುದು. ಕವಿಯ ವ್ಯಕ್ತಿತ್ವವನ್ನೂ ಕಾವ್ಯ ಮೀರಬೇಕೆಂಬುದು ಆದರ್ಶ. ಇಡೀ ತನ್ನ ಸಮುದಾಯದ ಮುಗ್ಧ ಜಗತ್ತನ್ನೇ ಕರೆದುಕೊಂಡು ಹೊರಟು ಕೊನೆಗೆ ಅದರ ಅಂತರಾಳದ ದನಿ ಏನೆಂಬುದನ್ನೇ ತಾನಾದರೂ ಹೇಳದೆ ; ಸ್ವತಃ ಆ ಮುಗ್ಧ ಜನಪದವೇ ಏನನ್ನು ತೋಡಿಕೊಳ್ಳುತ್ತದೆ ಎಂಬುದಕ್ಕಾದರೂ ಅವಕಾಶ ಮಾಡಿಕೊಡದೆ ತಪ್ಪಿಸಿಕೊಳ್ಳುತ್ತಾರೆ. ಅತ್ಯಂತ ಗಾಢವಾಗಿ ಹರಿಯುತ್ತಿದ್ದ ಅಂತಃಕರಣದ ರಾಗವೊಂದು ತಟಕ್ಕನೆ ತುಂಡಾದಂತೆ ಕವಿತೆ ಮುರಿದುಹೋಗುತ್ತದೆ.

ಪ್ರೇಮಾನುರಾಗದ ಕವಿತೆಗಳ ವೇಳೆಯಲ್ಲಿ ಸಿದ್ದಲಿಂಗಯ್ಯನವರು ಬೇಂದ್ರೆಯ ಪ್ರೇಮಕವಿತೆಗಳಿಗಿಂತಲೂ ಭಾವುಕರೇ. ಆದರೆ ದಲಿತ ಲೋಕದ ಭಾವುಕತೆಯು ಕೊಂಚ ಆಲಾಪನೆಯನ್ನು ವಿಸ್ತರಿಸಿಕೊಂಡು ಹಾಡುತ್ತದೆ. ಈ ಆಲಾಪದಲ್ಲಿ ತನ್ನ ಜನತೆಯನ್ನೂ ಸೇರಿಸಿಕೊಳ್ಳುತ್ತದೆ. ವ್ಯಕ್ತಿನಿಷ್ಠ ಪ್ರೇಮದ ಭಾವನೆಯನ್ನು ತನ್ನವರ ನೋವಿನ ದನಿಯಲ್ಲೇ ಬೆರೆಸಿಕೊಂಡು ಅದನ್ನೂ ಸಮಷ್ಟಿಯಾಗಿಸುವ ಗುಣವನ್ನು ಸಿದ್ಧಲಿಂಗಯ್ಯನವರ ಕವಿತೆಗಳು ಹೊಂದಿವೆ. 'ಸುಟ್ಟಾವು ಬೆಳ್ಳಿಕಿರಣ', 'ರಾಣಿಯ ಪ್ರೇಮ', 'ದೋಣಿಯ ಹಾಡು', 'ನಿನ್ನ ಕಣ್ಣಿನ ಮಾತು', 'ಕೋರಿಕೆ', 'ಕಪ್ಪು ಕಾಡಿನ ಹಾಡು' ಥರದ ಹಾಡುಗಳು ಬೇಂದ್ರೆಯವರ 'ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು' ಎಂಬ ಒಲವಿನ ಆಶ್ರಯದಲ್ಲಿ ನಿರುಮ್ಮಳವಾಗಿ ಇದ್ದು ಬಿಡುವಂತಹವಲ್ಲ. ಪ್ರೇಮದ ಕಗ್ಗೊಲೆ, ಒಲವಿನ ಹಗೆ, ಪ್ರೀತಿಯ ಕ್ಷಾಮಗಳನ್ನು ಸಮುದಾಯದ ಸಾಕ್ಷಿ ಪ್ರಜ್ಞೆಯಲ್ಲಿ ಆಲಾಪಿಸುವ ಸಿದ್ಧಲಿಂಗಯ್ಯನವರ ಕವಿತೆಗಳು ಸರಳ ಪದಗಳಂತೆ ಕಂಡರೂ ಅವಕ್ಕಿರುವ ಸಂವೇದನೆಯ ದುರಂತಪ್ರಜ್ಞೆ, ಬೇಂದ್ರೆಯ ಪ್ರೇಮ ಕವಿತೆಗಳಿಗಿಲ್ಲ. ಭಗ್ನಗೊಂಡ ಸಮಾಜದಿಂದ ತಪ್ಪಿಸಿಕೊಂಡು ಬಂದು ಪ್ರೇಮದ ಉಸಿರಾಟಕ್ಕೆ ಹಾತೊರೆದು ಒಂದಿಷ್ಟು ಕ್ಷಣ ಆ ಉಸಿರಲ್ಲಿ ಮಿಂದು ಎದ್ದು ನಿಲ್ಲುವ ವೇಳೆಗೆ ಪ್ರೇಮವೇ ಸಿದ್ಧಲಿಂಗಯ್ಯನವರ ಈ ನಾಯಕನಿಗೆ ಶಾಪವಾಗಿಬಿಟ್ಟಿರುತ್ತದೆ. ಹಾಗಾಗಿ ಒಲವಿನ ಬಯಲಿನಲ್ಲಿ

'ನೂರಾರು ಹಾವುಗಳು ಊರೆಲ್ಲ ನೋವುಗಳು
ಸಂಪಿಗೆಯ ಮರದಲ್ಲಿ ಸಾವಿನಾಟ

ಕೊಂಬೆ ಕೊಂಬೆಯ ಕೆಳಗೆ ಮಸೆದ ಕತ್ತಿಯ ಸಾಲು
ಹೆಣಗಳುಯ್ಯಾಲೆಯಲಿ ಮರದ ಕುಣಿತ'
(ಸಂಪಿಗೆಯ ಮರದಲ್ಲಿ)

ಎಂಬ ಬರ್ಬರ ವಾಸ್ತವ ಕವಿಯ ಮುಂದೆ ಅಡರಿಕೊಳ್ಳುತ್ತದೆ. ಮುಂದುವರಿದು; ಮನವ ಹೆಪ್ಪುಗಟ್ಟಿಸುವ ಭಾವಗಳು ತುಂಬಿಕೊಂಡು;

'ಇಲ್ಲವಾಗಿರುವ ಮಲ್ಲಿಗೆ ಕಂಪೇ
ಕತ್ತಲು ಕಳೆವ ಮಿಂಚಿನ ಹುಳುವೆ
ಒಂದುಗೂಡಿಸಿದ ಸೀಳು ದಾರಿಗಳೆ
ಕಳೆದ ಹಾಡುಗಳೆ ಕಾಡದಿರಿ
ಜಲವಿಲ್ಲದ ಈ ಭೂಮಿಯ ಮೇಲೆ
ಸಾವು ಹಸಿವುಗಳೆ ಅಲೆಯದಿರಿ
ಪ್ರಾಣದ ಹರಣದ ಗಳಿಗೆಯ ಒಳಗೆ
ನೀಲಿ ತಾವರೆಯೆ ಅರಳದಿರಿ
ಎಲ್ಲೆಲ್ಲೂ ತುಂಬಿದ ನೋವಿನ ಒಳಗೆ
ಗುಲಾಬಿ ವನಗಳೆ ಸುಳಿಯದಿರಿ' (ಕೋರಿಕೆ)

ಎನ್ನುವ ಗಾಢ ವಿಷಾದ ಆವರಿಸುತ್ತದೆ. ಇಂತಹ ದುರಂತಪ್ರಜ್ಞೆಯ ನಂತರಕ್ಕೆ ಸಿದ್ಧಲಿಂಗಯ್ಯನವರ ಕಾವ್ಯದ ನಾಯಕ ಮತ್ತೆ

'ಪ್ರೀತಿಯ ಗಂಗೆ ಹರಿಯುತಲಿರಲಿ
ಅಂತರಂಗದ ಕಣಿವೆಯಲಿ
ಮೈತ್ರಿಯ ಮಲ್ಲಿಗೆ ಪರಿಮಳ ಬೀರಲಿ
ಎದೆಯಾಳದ ಹೂದೋಟದಲಿ' (ಕಪ್ಪು ದೇವತೆಯ ಕಣ್ಣಾಗವಲು)

ಎಂದು ಪ್ರಾರ್ಥಿಸುವುದು ವಿಶಿಷ್ಟವಾಗಿದೆ. ಸಿದ್ಧಲಿಂಗಯ್ಯನವರ ಕಾವ್ಯದ ನಾಯಕನ ಒಲವು ಅತ್ಯಂತ ಕೋಮಲವಾದದ್ದು. ಜಾತಿಯ ಹಿಂಸೆಯಿಂದ ನಲುಗುವ ಆತನ ಪ್ರೇಮಕ್ಕೆ ಪೂರ್ವಿಕರ ಅನುಭವ ಕೂಡ ಬೆರೆತಿದೆ. ಆದ್ದರಿಂದಲೇ :

'ಮನೆಯ ಸೂರಿನ ಮೇಲೆ ಕುಂತಿರುವ ಹಿರಿಯರು
ಪ್ರೇಮದುರಿಯಲಿ ಬೆಂದು ಬಳಲಿದವರು
ತುಂಬು ಎದೆ, ಕೆಂಪು ತುಟಿ, ಕಣ್ಣ ಬೆಳಕಿನ ತುಂಬ
ಬಾಳಿನರ್ಥವ ಕಂಡು ಮಿಂಚಿದವರು'
(ಪುರುಷಾರ್ಥ)

ಎಂಬ ಸಾಲುಗಳು ಮೈದಳೆಯುತ್ತವೆ. ಅಂದರೆ ; ದಲಿತ ಸಂವೇದನೆಯ ಒಲವಿನ ದಾಹ ವಿಭಿನ್ನವಾದುದು. ಕೇವಲ ಹೆಣ್ಣುಗಂಡಿನ ಅತ್ಯಂತಿಕ ಮಿಲನವೇ ಅದರ ಉದ್ದೇಶವಲ್ಲ. ಬಾಳಿನರ್ಥದ ಕಡಲಿನಲ್ಲಿ ಮಾನವೀಯತೆಯ ದಡಕ್ಕಾಗಿ ಹಾಡುವಂಥದ್ದು. ಸಿದ್ಧಲಿಂಗಯ್ಯನವರ ಒಲವಿನ ಸಾಲುಗಳು ಉದ್ದಕ್ಕೂ ಮಾನವೀಯತೆಯ ಆಲಾಪ ಬೆರೆತು ಜೊತೆಗೆ ತನ್ನ ಸಮುದಾಯದ ದಟ್ಟವಾದ ಬರ್ಬರ ವಾಸ್ತವವನ್ನು ತೆರೆದಿಡುತ್ತದೆ. ಹೀಗಾಗಿಯೆ ಪ್ರೇಮ ಕಾವ್ಯದ ಸಿದ್ಧವಾದ ಅರ್ಥ ವ್ಯಾಖ್ಯಾನಗಳು ಇಂತಹ ಕಾವ್ಯಕ್ಕೆ ಹೊಂದುವುದಿಲ್ಲ.

ಕ್ರಾಂತಿಯ ಬಗೆಗಿನ ಕವಿಯ ಅದಮ್ಯ ಉತ್ಸಾಹ ಮಾತ್ರ ಸುಲಭವಾಗಿ ವ್ಯಾಖ್ಯಾನಗಳಿಗೆ ಸಿಕ್ಕಿಬಿಡುತ್ತದೆ. ಕ್ರಾಂತಿಗೆ ಪೂರಕವಾದ ಅವರ ರೂಪಕಗಳೆಲ್ಲ ಠೇಂಕಾರದಿಂದ ಗುಡುಗುತ್ತವೆ. ನಿರ್ದೇಶಕನ ಆದೇಶದಂತೆ ವರ್ತಿಸುತ್ತವೆ. 'ಕೆಂಬಾವುಟ' 'ಕ್ರಾಂತಿಕನ್ಯೆ' 'ಗುಡುಗು' 'ಸಿಡಿಲು' 'ಕೆಂಪುತೋಟ' 'ಕ್ರಾಂತಿಕಣ್ಣು' 'ಕ್ರಾಂತಿಕಣಿವೆ' 'ಬೆಂಕಿಬೆಳೆ' 'ಕುಡುಗೋಲು' 'ಸುತ್ತಿಗೆ'ಯಂತಹ ರೂಪಕ ಪ್ರತಿಮೆ ಸಂಕೇತಗಳು ಮಾರ್ಕ್ಸ್‌ವಾದಿ ಅಂಗಳದಿಂದ ಆಚೆ ಬಂದು ದಲಿತರ ಕೇರಿಯ ಒಳದನಿಗೆ ಪ್ರತಿಧ್ವನಿಯಾಗಲಾರವು. ಸಿದ್ಧಲಿಂಗಯ್ಯನವರ ಕವಿತೆಗಳಲ್ಲಿ ಇಂತಹ ರೂಪಕಗಳಿಗೆ ಪ್ರಧಾನ ಸ್ಥಾನವಿದೆ. ಕ್ರಾಂತಿಯ ಆಶಯವನ್ನೆಲ್ಲ ಕಾವ್ಯದಲ್ಲಿ ತುಂಬಿದಾಗ; ಅದು ಜನತೆಯ ಮೌನದ ಅಂತರಾರ್ಥವನ್ನು ಕೇಳಿಸದಂತೆ ಮಾಡಿಬಿಡುತ್ತದೆ. ಲೌಕಿಕದ ಭಾಷಿಕ ಸ್ವಾತಂತ್ರ್ಯದ ಠೇಂಕಾರ ಅತಿ ಆದಾಗ ಕವಿಯ ಬತ್ತಳಿಕೆಯಲ್ಲಿ ಕ್ರಾಂತಿಜನ್ಯ ರೂಪಕಗಳು ಮೌನವನ್ನು ನುಂಗಿಬಿಡುತ್ತವೆ. ದಲಿತ ಸಮುದಾಯದ ಅಗಾಧ ಮೌನ ಜಗತ್ತನ್ನು ಆಶ್ರಯಿಸಿದರೆ ; ಸಿದ್ಧಲಿಂಗಯ್ಯನವರು ಮೂಕ ಜಗತ್ತಿನ ಅನಿವಾರ್ಯ ಧ್ವನಿಯುಬ್ಬರವನ್ನು ಅಂತರ್ಗತಿಸಿಕೊಳ್ಳಬೇಕಾದುದಿತ್ತು. ಹೀಗಾಗಿಯೆ, ಸಿದ್ಧಲಿಂಗಯ್ಯನವರ ಆರಂಭದ 'ನಗ್ಬೇಕು', 'ಭವಿಷ್ಯದ್ಗೀತೆ', 'ಹಣೆಬರವು ಎಂಬ ನಾಟಕವು', 'ಹಬ್ಬ', 'ಗಳ್ಳಗಳು', 'ಅಡುಗೂಲಜ್ಜಿಯ ಕಥೆ', 'ಕ್ರಾಂತಿಪದ', 'ಸತ್ತೋಗೋರಾ', 'ನನ್ನ ಜನಗಳು', 'ಮಹಾವ್ಯಕ್ತಿ ವಬ್ಬ', 'ನಾವು', 'ಸಾವಿರಾರು ನದಿಗಳು', 'ಬಿದ್ದಾವು ಮನೆಗಳು', 'ದಲಿತರು ಬರುವರು' ಮುಂತಾದ ಕವಿತೆಗಳು ಮೂಕ ಜಗತ್ತನ್ನು ಅಬ್ಬರಿಸಿ ಪ್ರತಿನಿಧಿಸುತ್ತವೆ. ಈ ಅಬ್ಬರ, ಈ ಪರಿಯ ದೊಡ್ಡ ಪ್ರತಿರೋಧ ಸಾಂಸ್ಕೃತಿಕ ಜವಾಬ್ದಾರಿಯಿಂದ ಬಂದುದೇ ಹೊರತು ಸಾಹಿತ್ಯಕ ಜರೂರಿನಿಂದಲ್ಲ. ಮಹಾದೇವ ಅವರು ರೂಪಿಸಿದ ಮೌನ ಕೂಡ ಅಂಥದೇ. ಸಿದ್ಧಲಿಂಗಯ್ಯ ಅಬ್ಬರದಿಂದ ಹರಿವ ಹಳ್ಳಿಗಾಡಿನ ಹೊಳೆಯಂತೆ ತಮ್ಮ ಕಾವ್ಯವನ್ನು ವಿಸ್ತರಿಸಿದ್ದರೆ ಮಹಾದೇವ ಅವರು ಬೆಟ್ಟ ಗುಡ್ಡಗಳ ಕಣಿವೆಯ ಮರೆಯಲ್ಲೇ ಹುಟ್ಟಿ

ಎಲ್ಲೋ ಮುಳುಗಿ ಮತ್ತೆಲ್ಲೋ ಜಿನುಗಿ ಶಾಂತವಾಗಿ ಮೌನವಾಗಿ ಹರಿವ ಭೂಮಿಯ ಒಳಗಿನ ನದಿಯಂತೆ ಗದ್ಯವನ್ನು ರೂಪಿಸಿದ್ದಾರೆ. ಇವರಿಬ್ಬರ ಈ ಜಲ ದಲಿತಲೋಕದ ಕಡಲಿನ ಪರಿಣಾಮ. ಈ ಕಡಲನ್ನು ಕೇವಲ 'ದಲಿತ' ಎಂಬ ಹಣೆಪಟ್ಟಿಯಿಂದ ಓದುವುದು ಈಗ ಕಡಿಮೆ ಆಗುತ್ತಿರುವುದು ವಿಶೇಷ. ಜಾತಿ ಸೂತಕದಿಂದ 'ದಲಿತ' ಬರಹವನ್ನು ಯಾರು ಪ್ರವೇಶಿಸಬೇಕಾದ್ದಿಲ್ಲ. ಸಿದ್ಧಲಿಂಗಯ್ಯನವರ ಈ ಕವಿತೆಗಳ ಕೇಂದ್ರ ಅನುಭವ ದಲಿತಲೋಕವೇ ಆಗಿದ್ದರೂ ಅವರು ರೂಪಿಸುತ್ತಿರುವ ಸಂವೇದನೆಗೆ ಯಾವುದೇ ಜಾತಿ, ಲಿಂಗ, ಧರ್ಮ, ಬಣ್ಣ ಮತ್ತು ಪ್ರಾದೇಶಿಕ ಗುಣಗಳಿಲ್ಲ. ಸೃಜನಶೀಲ ಸಂವೇದನೆ ಈ ಬಗೆಯ ಮಿತಿಗಳ ಆಚೆಗಿನದು. ಓದುವುದನ್ನು ಕೂಡ ಸೃಜನಶೀಲ ಕ್ರಿಯೆ ಎಂದು ನಾವು ಒಪ್ಪುವುದಾದರೆ 'ಜಾತಿಸೂತಕದ' ಪ್ರವೇಶದ ಅಗತ್ಯವಿರುವುದಿಲ್ಲ.

ನವ್ಯ ಕಾವ್ಯದ ಸುಗ್ಗಿ ಕಾಲದಲ್ಲಿ ಬರೆಯಲು ಆರಂಭಿಸಿದ ಸಿದ್ಧಲಿಂಗಯ್ಯನವರು ಅದರ ಸೆಳೆತಕ್ಕೆ ಒಳಪಡದೆ ಆ ಬಗೆಯ ಕಾವ್ಯ ಶೈಲಿಗೆ ಉತ್ತರಿಸಿದ್ದಾರೆ. ಆ ಮೂಲಕ ನವ್ಯ ಕಾವ್ಯದ ಮೇರು ಕವಿ ಅಡಿಗರನ್ನು ದಾಟಿ ಮುಂದೆ ಹೋಗಿದ್ದಾರೆ. ಇದು ಕನ್ನಡ ಭಾಷೆಯ ಆಯ್ಕೆಯೂ ಆಗಿತ್ತು. ನವ್ಯ ಕಾವ್ಯವು ಭಾಷೆಯನ್ನು ಅತ್ಯಂತ ಸೂಕ್ಷ್ಮವಾಗಿ ಆಳಕ್ಕಿಳಿದು ವ್ಯಕ್ತಿ ವಿಶಿಷ್ಟವಾಗಿ ಶೋಧಿಸಿದ್ದರ ಬಗ್ಗೆ ನಮಗೆಲ್ಲ ಗೌರವವಿದೆ. ಆದರೆ ಆ ಕಾವ್ಯದ ತಲ್ಲಣದಲ್ಲಿ 'ಭೂಮಿಗೀತ'ದಂತಹ ಕಾವ್ಯದ ನಾಯಕರ ಅಂತರಾಳದಲ್ಲಿ ತನ್ನ ಸುತ್ತ ಇರುವ ವಾಸ್ತವವನ್ನೆಲ್ಲ ಬಿಟ್ಟು ಇರದುದರ ಎಡೆಗೆ ತುಡಿಯುವುದೇ ಜೀವನ ಎನಿಸಿದ್ದರಿಂದ ; ಸಿದ್ಧಲಿಂಗಯ್ಯನವರು ಭಿನ್ನ ದಾರಿಗೆ ಬಂದು ತಮ್ಮ ಕೇರಿಗಳ ಒಳಗೆ ಮುಳುಗಿ ಇದ್ದುದರೆಲ್ಲದರ ಒಳಗಿನ ವಿರೂಪವನ್ನು ಬಿಚ್ಚಿ ಬಯಲುಗೊಳಿಸಿದ್ದರಿಂದ ಅವರ ಕಾವ್ಯಕ್ಕೆ ಸಮಷ್ಟಿಯ ಶಕ್ತಿ ಬಂತು. ಅಡಿಗರ 'ಭೂಮಿಗೀತ' ಕವಿತೆಯ ಜೊತೆಗೆ ಸಿದ್ಧಲಿಂಗಯ್ಯನವರ 'ಕಂಡೆ ನನ್ನವಳ ಒಂದು ದಿವಸ' ಕವಿತೆಯನ್ನು ಹೋಲಿಸಿ ನೋಡಿದರೆ, ಈ ಇಬ್ಬರೂ ಮುಖ್ಯ ಕವಿಗಳ ಸಂವೇದನೆಯ ಬಾಹುಳ್ಯ ಮತ್ತು ಅಂತರ ತಿಳಿಯುತ್ತದೆ.

ಸಿದ್ಧಲಿಂಗಯ್ಯನವರ ಕಾವ್ಯಕ್ಕೆ ಸಾಹಿತ್ಯ ವಿಮರ್ಶೆಯ 'ಮಾನದಂಡ'ಗಳಲ್ಲಿ ವಿಶೇಷ ಸ್ಥಾನ ಸಿಗದೇ ಹೋಗಬಹುದು. ಆದರೆ ಒಟ್ಟು ಅವರ ಕಾವ್ಯವನ್ನು ಸಾಂಸ್ಕೃತಿಕ ಪಠ್ಯವಾಗಿ ಪರಿಭಾವಿಸಿದರೆ ಬಹುರೂಪಿ ಸಾಮಾಜಿಕ ಅರ್ಥಗಳು ತೆರದುಕೊಳ್ಳುತ್ತವೆ. ಮಂಟೇಸ್ವಾಮಿ, ಮಲೆ ಮಾದೇಶ್ವರ ಕಾವ್ಯಗಳು ಸಾಧಿಸಲು ಆಗದಿದ್ದ ಲೌಕಿಕದ ದಂಗೆಯನ್ನು ಸಿದ್ಧಲಿಂಗಯ್ಯನವರ ಕಾವ್ಯ ಸೃಷ್ಟಿಸಿದೆ. ಅವರ ಕಾವ್ಯದ ದಂಗೆ ಇವತ್ತು ದಲಿತ ಕಾವ್ಯದಲ್ಲಿ ಲೀನವಾಗಿದೆ. ಹೊಸ ಪೀಳಿಗೆಯ

ದಲಿತ ಕವಿಗಳು ಈ ಹೊತ್ತಿನಲ್ಲಿ ಸೃಷ್ಟಿಸಿಕೊಳ್ಳುತ್ತಿರುವ ಆಧುನಿಕೋತ್ತರ ರೂಪಕ, ಸಂಕೇತ, ಪ್ರತಿಮೆಗಳಿಗೆ ಸಿದ್ಧಲಿಂಗಯ್ಯವರ ರೂಪಕ, ಪ್ರತಿಮೆಗಳನ್ನು ಮರೆತರೆ ನಷ್ಟವಿಲ್ಲ. ಅದು ಉಪಯುಕ್ತವೇ. ಸಿದ್ಧಲಿಂಗಯ್ಯನವರು ಆರಂಭದಲ್ಲಿ ಬರೆದಂತೆ ಈಗ ಪದ್ಯಗಳನ್ನು ಬರೆದರೆ ಯಾರಾದರೂ ನಕ್ಕುಬಿಡಬಹುದು. ಸ್ವತಃ ಕವಿಯೇ ಅಂತಹ ಸ್ಥಿತಿಯನ್ನು ಒಪ್ಪಿಕೊಳ್ಳಲಾಗದು. ಈ ಹೊತ್ತಿನಲ್ಲಿ ಸಿದ್ಧಲಿಂಗಯ್ಯನವರು ಏಕಲವ್ಯನ ಪ್ರತಿಭೆಯ ಮಾದರಿಯಲ್ಲಿಯೇ ಸ್ವೋಪಜ್ಞವಾಗಿ ತಮ್ಮ ಮುಂದಿನ ಕಾವ್ಯದ ದಿಕ್ಕನ್ನು ನಿರ್ಧರಿಸಿಕೊಳ್ಳಬೇಕಾಗಿದೆ. ಅವರು ಕಳೆದ ದಶಕದಿಂದ ಬರೆದುಕೊಂಡು ಬರುತ್ತಿರುವ ಕವಿತೆಗಳನ್ನು ಗಮನಿಸಿದ ಯಾರಿಗಾದರೂ ನಿರಾಶೆಯಾಗದೆ ಇರದು. ತನ್ನ ದನಿಯನ್ನು ತಾನೇ ನುಂಗಿ ಕೊಂಡಂತೆ ಈಗ ಬರೆಯುತ್ತಿರುವ ಸಿದ್ಧಲಿಂಗಯ್ಯನವರ ಕಾವ್ಯದ ಶಕ್ತಿ ದಣಿದಿದೆ. ಆದರೆ ಈ ದಣಿವನ್ನು ದಲಿತ ಲೋಕಕ್ಕೆ ಕಡಲಿನ ಧ್ಯಾನದಲ್ಲಿ ನೀಗಿಸಿಕೊಂಡು ಆ ಕಡಲಿನ ಸಾಂಸ್ಕೃತಿಕ ಭಾಷಾ ವಿನ್ಯಾಸದ ಸ್ವಾತಂತ್ರ್ಯವನ್ನು ಆಧುನಿಕ ಜಗತ್ತಿನ ರೂಪ ವಿರೂಪದ ಜೊತೆ ಮಥಿಸಿ ಬರೆದರೆ ಮೌಖಿಕ ಪರಂಪರೆಯ ಪೂರ್ವಿಕರಂತೆ ಮಹಾಕಾವ್ಯವನ್ನು ಸೃಷ್ಟಿಸಲು ಸಾಧ್ಯವಾಗದೆ ಇರುತ್ತದೆಯೆ? ಅಂತಹ ಶಕ್ತಿ ಕವಿಯ ಕಾಲಕ್ಕೂ ಅವರ ಸಮುದಾಯಕ್ಕೂ ಇದೆ. ಆ ದಾರಿಯಲ್ಲಿ ಸಿದ್ಧಲಿಂಗಯ್ಯನವರಿಗೆ ಯಶಸ್ಸು ಸಾಧ್ಯ. ಅವರ ಕಾವ್ಯಕ್ಕೆ 'ಮುನ್ನುಡಿ' ಬರೆಯುವಷ್ಟು ದೊಡ್ಡವನಲ್ಲ ನಾನು. ವೈಚಾರಿಕ ಮಾಂತ್ರಿಕನಾಗಿದ್ದ ನಮ್ಮ ಡಿ. ಆರ್. ನಾಗರಾಜ್ ಈಗಾಗಲೇ 'ಮುನ್ನುಡಿ' ಬರೆದಿದ್ದು ಇದ್ದಾಗಲೂ, ಸಿದ್ಧಲಿಂಗಯ್ಯನವರು ನನ್ನಿಂದ ಮತ್ತೊಂದು ಮುನ್ನುಡಿ ಬರೆಸಿದ್ದಾರೆ. ಇದು ನಮ್ಮ ಕಾಲದ ಬಹಳ ದೊಡ್ಡ ಕನ್ನಡದ ಕವಿಯಾಗಿ ಸಿದ್ಧಲಿಂಗಯ್ಯನವರು ನನಗೆ ಕೊಟ್ಟ ಪ್ರೀತಿಯ ಪ್ರಶಸ್ತಿ ಎಂದು ತಿಳಿಯುತ್ತೇನೆ. ಓದುಗರು ಈ ಕಾವ್ಯವನ್ನು ಮಾನವೀಯ ಅರ್ಥಗಳಿಗೆ ವಿಸ್ತರಿಸಲೆಂದು ಆಶಿಸುವೆ.

೧೪.೮.೨೦೦೪ **ಡಾ. ಮೊಗಳ್ಳಿ ಗಣೇಶ್**
ವಿದ್ಯಾರಣ್ಯ ಕನ್ನಡ ವಿಶ್ವವಿದ್ಯಾಲಯ

ನನ್ನ ಮಾತು

'ನನ್ನ ಜನಗಳು ಮತ್ತು ಇತರೆ ಕವಿತೆಗಳು' ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. 'ನನ್ನ ಜನಗಳು' ಎಂಬ ಮಾತು ನಿರ್ದಿಷ್ಟ ಗುಂಪನ್ನು ಸೂಚಿಸದೆ ಸಮಾಜದ ಎಲ್ಲ ಶೋಷಿತರನ್ನು ಒಳಗೊಳ್ಳುತ್ತದೆ. ಎಲ್ಲ ಜಾತಿಮತಗಳಲ್ಲಿರುವ ದಮನಿತರು ಮತ್ತು ಅಪಮಾನಕ್ಕೊಳಗಾದವರೇ ನನ್ನ ಜನಗಳು. ಈ ಜನತೆಯೊಂದಿಗೆ ಗುರುತಿಸಿಕೊಳ್ಳಲು ಮಾಡಿದ ಪ್ರಯತ್ನವೇ ನನ್ನ ಕವಿತೆಗಳು. ದಲಿತರು, ರೈತರು, ಕಾರ್ಮಿಕರು, ಕೂಲಿಕಾರರು ತಮ್ಮ ಮೆರವಣಿಗೆ, ಹೋರಾಟಗಳಲ್ಲಿ ನನ್ನ ಕವಿತೆಗಳನ್ನು ಹಾಡಿದ್ದಾರೆ, ಕೇಳಿದ್ದಾರೆ. ಆ ಸಂದರ್ಭಗಳೇ ನನ್ನ ಕಾವ್ಯದ ಸಾರ್ಥಕ ಕ್ಷಣಗಳು.

ನಾನು ಬಿ. ಎ. ಆನರ್ಸ್ ವಿದ್ಯಾರ್ಥಿಯಾಗಿದ್ದಾಗ ಶೂದ್ರ ಶ್ರೀನಿವಾಸರು ನನ್ನ ಕವಿತೆಗಳನ್ನು 'ಶೂದ್ರ' ಪತ್ರಿಕೆಯಲ್ಲಿ ಪ್ರಕಟಿಸಿ, ಪ್ರೋತ್ಸಾಹಿಸಿದರು. ಇದರಿಂದ ಆತ್ಮವಿಶ್ವಾಸವು ಹೆಚ್ಚಿ ನಾನು ಹೆಚ್ಚು ಹೆಚ್ಚು ಕವಿತೆ ಬರೆಯಲು ತೊಡಗಿದೆ. ನನ್ನ ಕವಿತೆಗಳು ಆಗ್ಗೆ ಹೊಸ ಧೋರಣೆಯನ್ನು ಹೊಂದಿದ್ದರಿಂದ ಅವುಗಳನ್ನು ಪ್ರಕಟಿಸುವ ಧೈರ್ಯ ಯಾರಿಗೂ ಇರಲಿಲ್ಲ. ಶೂದ್ರ ಶ್ರೀನಿವಾಸರು ನನ್ನ ಕವಿತೆಗಳನ್ನು ಧೈರ್ಯದಿಂದ ಮಾತ್ರವಲ್ಲ, ಬಹಳ ಪ್ರೀತಿಯಿಂದ ಪ್ರಕಟಿಸಿದರು. ಇದರಿಂದ ಸಾಹಿತ್ಯವಲಯಕ್ಕೆ ನನ್ನ ಪರಿಚಯವಾಯಿತು. ಶೂದ್ರ ಶ್ರೀನಿವಾಸರ ಈ ಉಪಕಾರಕ್ಕೆ ನಾನು ಎಂದೆಂದೂ ಋಣಿಯಾಗಿದ್ದೇನೆ. ಈ ಕೃತಿಯನ್ನು ಅರ್ಪಿಸಲು ಒಪ್ಪಿಗೆ ನೀಡಿದ ಅವರಿಗೆ ಧನ್ಯವಾದಗಳು.

ಡಾ. ಡಿ. ಆರ್. ನಾಗರಾಜ್‌ರವರು ನನ್ನ ಆಯ್ದ ಕವಿತೆಗಳಿಗೆ ಬರೆದ ಮುನ್ನುಡಿಯನ್ನು ಈ ಕೃತಿಗೂ ಬಳಸಿಕೊಳ್ಳಲಾಗಿದೆ. ನನ್ನ ಕವಿತೆಗಳನ್ನು ಮೆಚ್ಚಿ ಅವುಗಳ ಮಹತ್ವವನ್ನು ನಾಡ ಜನತೆಗೆ ಮನವರಿಕೆ ಮಾಡಿಕೊಟ್ಟವರು ಡಿ .ಆರ್. ನಾಗರಾಜ್. ಡಿ. ಆರ್. ನಮ್ಮ ನಡುವೆ ಇಲ್ಲದಿರುವುದು ನಮ್ಮ ಸಾಹಿತ್ಯ, ಸಾಂಸ್ಕೃತಿಕ ರಂಗಕ್ಕೆ ಬಡತನ ತಂದಿದೆ. ಮೊಗಳ್ಳಿ ಗಣೇಶ ನಮ್ಮ ನಡುವಿನ ಪ್ರಖರ ಚಿಂತಕ, ಪ್ರಸಿದ್ಧ ಕಥೆಗಾರ. ಮೊಗಳ್ಳಿ ಗಣೇಶರು ಈ ಸಂಕಲನಕ್ಕೆ ಮತ್ತೊಂದು ಹೊಸ ಮುನ್ನುಡಿ ಬರೆದಿದ್ದಾರೆ. ನಾನು ಅವರಿಗೆ ಆಭಾರಿ.

ನನ್ನ ಬೆಳವಣಿಗೆಗೆ ಕಾರಣರಾದ ಪೂಜ್ಯ ಗುರುಗಳಾದ ಪ್ರೊ. ಕಿ.ರಂ. ನಾಗರಾಜ್ ಅವರು ಇತ್ತೀಚೆಗೆ ನಮ್ಮನ್ನಗಲಿದರು. ಅವರು ನನಗೆ ನೀಡಿದ ನೆರವು ಎಂದೆಂದೂ ನನ್ನ ಮನಸ್ಸಿನಲ್ಲಿರುತ್ತದೆ. ಈ ಕೃತಿಯನ್ನು ಪ್ರಕಟಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನುಬಳಿಗಾರ್ ಅವರಿಗೆ ಹಾಗೂ ಆಯ್ಕೆ ಮಾಡಿದ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೆ ನನ್ನ ಕೃತಜ್ಞತೆಗಳು. ಕರಡಚ್ಚು ತಿದ್ದುವುದರಲ್ಲಿ ಆಸ್ಥೆ ವಹಿಸಿದ ಪತ್ರಕರ್ತರಾದ ಶ್ರೀ ದೊಡ್ಡಹುಲ್ಲೂರು ರುಕ್ಕೋಜಿ ಮತ್ತು ಅವರ ಶ್ರೀಮತಿಯವರಾದ ಪ್ರೊ. ಬಿ.ಎಸ್. ಮಧುಮತಿ ಅವರಿಗೆ ನನ್ನ ಧನ್ಯವಾದಗಳು.

ಬೆಂಗಳೂರು **ಸಿದ್ಧಲಿಂಗಯ್ಯ**

೧೫-೧೧-೨೦೦೮

ಪರಿವಿಡಿ

ಶುಭ ಸಂದೇಶ iii
ಚೆನ್ನುಡಿ iv
ಎರಡು ನುಡಿ v
ಅಧ್ಯಕ್ಷರ ಮಾತು vi
ಪ್ರಕಾಶಕರ ಮಾತು vii
ಆಯ್ಕೆ ಸಮಿತಿ ix
ಉತ್ಪ್ರೇಕ್ಷಲಂಕಾರ ಚಕ್ರವರ್ತಿ ! xi
ನೊಂದವರ ನಾದ... xxiv
ನನ್ನ ಮಾತು xxxvi

ಹೊಲೆಮಾದಿಗರ ಹಾಡು – ೧೯೭೫

೧. ನನ್ನ ಜನಗಳು ೩
೨. ಒಂದು ಮೂಳೆಯ ಹಾಡು ೪
೩. ಒಂದು ಪದ ೫
೪. ಸತ್ತೋಗೋರಾ ೬
೫. ಕ್ರಾಂತಿಪದ ೭
೬. ಗಳ್ಡಗಳು ೮
೭. ಅಡುಗೂಲಜ್ಜಿಯ ಕಥೆ ೯
೮. ಮಹಾವ್ಯಕ್ತಿ ವಬ್ಬ ೧೧
೯. ಹಬ್ಬ ೧೩
೧೦. ಸುಂಟರಗಾಳಿ ೧೪
೧೧. ಕನ್ನಡವ್ವನಿಗೆ ೧೫
೧೨. ಹಣೆಬರವು ಎಂಬ ನಾಟಕವು ೧೭
೧೩. ನನ್ನವಳಿಗೆ ೧೯
೧೪. ಭವಿಷದ್ಗೀತೆ ೨೧
೧೫. ನಗ್ಬೇಕು ೨೨
೧೬. ಬೀಳು ೨೩
೧೭. ಮಸಣದ ಚೆಲುವೆಗೆ ೨೪
೧೮. ನಾವು ೨೬
೧೯. ಅಂಬೇಡ್ಕರ್ ೨೭
೨೦. ಒಂದು ದನದ ಪದ ೨೯
೨೧. ಹಾವುಗಳೇ ಕಚ್ಚಿ ೩೦

ಸಾವಿರಾರು ನದಿಗಳು – ೧೯೭೯

೨೨. ಸಾವಿರಾರು ನದಿಗಳು ೩೩
೨೩. ಬೆಳ್ಚಿಯ ಹಾಡು ೩೫
೨೪. ಕೆಂಪು ಸೂರ್ಯ ೩೬
೨೫. ದಲಿತರು ಬರುವರು ೩೭
೨೬. ಬಿದ್ದಾವು ಮನೆಗಳು ೩೯
೨೭. ಕತ್ತೆ ಮತ್ತು ಧರ್ಮ ೪೦
೨೮. ಈ ದೇಶದ ಸೆರೆಮನೆ ೪೩
೨೯. ಕಂಡೆ ನನ್ನವಳ ಒಂದು ದಿವಸ ೪೫
೩೦. ಹೋರಾಟವೆ ದಾರಿ ೪೭
೩೧. ನಿನ್ನ ಮಗನ ಕೊಂದರು ೪೮
೩೨. ಚೋಮನ ಮಕ್ಕಳ ಹಾಡು ೪೯
೩೩. ಮಾತಾಡಬೇಕು ೫೧
೩೪. ಮೆರವಣಿಗೆ ೫೨
೩೫. ಬಂದಿರುವರು ಹುಲಿಗಳಾಗಿ ೫೪
೩೬. ಅಲ್ಲೆ ಕುಂತವರೆ ೫೫

ಕಪ್ಪು ಕಾಡಿನ ಹಾಡು – ೧೯೮೩

೩೭. ನನ್ನ ಕವನ ೬೯
೩೮. ಬೆಂಗಳೂರಿನ ಹಾಡು ೭೧

೩೯.	ಸುಟ್ಟಾವು ಬೆಳ್ಳಿಕಿರಣ	೭೩
೪೦.	ರಾಣಿಯ ಪ್ರೇಮ	೭೫
೪೧.	ದೋಣಿಯ ಹಾಡು	೭೭
೪೨.	ನಿನ್ನ ಕಣ್ಣಿನ ಮಾತು	೮೦
೪೩.	ಕೋರಿಕೆ	೮೨
೪೪.	ಕಪ್ಪು ಕಾಡಿನ ಹಾಡು	೮೪
೪೫.	ಭೂತನ ಕತೆ	೮೭
೪೬.	ನಲವತ್ತೇಳರ ಸ್ವಾತಂತ್ರ್ಯ	೯೦
೪೭.	ತಬರನ ಹಾಡು	೯೨
೪೮.	ಮಾಟ ಆಗಿತ್ತು	೯೪
೪೯.	ಬಿಡುಗಡೆ	೯೫
೫೦.	ದಾರಿ ಯಾವುದೋ	೯೬
೫೧.	ಸಂಪಿಗೆಯ ಮರದಲ್ಲಿ	೬೭
೫೨.	ಕೊಳೆಗೇರಿಯ ಹಾಡು	೧೦೦
೫೩.	ಗುಡಿಗೆ ಹೋಗುವವರ ಹಾಡು	೧೦೨
೫೪.	ಅಜ್ಜಿಯ ಹಾಡು	೧೦೩
೫೫.	ಹೆಂಡಕ್ಕೆ ಸಾವಿಲ್ಲವೊ	೧೦೪
೫೬.	ನೆನಪು	೧೦೫

ಹೊಸ ಕವಿತೆಗಳು

೫೬.	ಪ್ರಕೃತಿ	೧೦೯
೫೭.	ಗ್ರಾಮದೇವತೆ	೧೧೧
೫೮.	ದಶಾವತಾರ	೧೧೨
೫೯.	ಗಾಂಧಿ	೧೨೩
೬೦.	ಕಣ್ಣಾವಲು	೧೧೪
೬೧.	ಕನವರಿಕೆ	೧೧೫
೬೨.	ಪಂಚ ನದಿಗಳ ಹಾಡು	೧೧೭
೬೩.	ಹಕ್ಕಿಗಳು	೧೧೮
೬೪.	ಶಬ್ದ	೧೧೯
೬೫.	ವಿಜಯೋತ್ಸವ	೧೨೦

೬೬.	ಪುರುಷಾರ್ಥ	೧೨೨
೬೭.	ಮಂಕಾದ ಜನ	೧೨೩
೬೮.	ಅಗ್ನಿಶಾಮಕರು	೧೨೪
೬೯.	ಯುಗಾದಿ – ೧	೧೨೫
೭೦.	ಯುಗಾದಿ – ೨	೧೨೬
೭೧.	ಯುಗಾದಿ – ೩	೧೨೭
೭೨.	ಯುಗಾದಿ – ೪	೧೨೮
೭೩.	ಯುಗಾದಿ – ೫	೧೨೯
೭೪.	ಕಾರ್ಲ್‌ಮಾರ್ಕ್ಸ್	೧೩೦
೭೫.	ಬೆಂಜಮಿನ್ ಮೊಲಾಯಿಸ್	೧೩೧
೭೬.	ರಾಮಚಂದ್ರಶರ್ಮ	೧೩೩
೭೭.	ಶೂದ್ರ	೧೩೪
೭೮.	ಆಸೆ	೧೩೫
೭೯.	ಈ ದೇವರುಗಳು	೧೩೬
೮೦.	ಪ್ರೀತಿ ಮತ್ತು ಜ್ಯೋತಿಷ್ಯ	೧೩೭
೮೧.	ಭೂಮಿ ಗುಂಡಗಿದೆ	೧೩೮
೮೨.	ಮಾತಿಗೆ ಮಾತು ಕೊಟ್ಟವನ	೧೩೯
೮೩.	ಚಳಿಯ ಹಾಡು	೧೪೦
೮೪.	ಬೆಳದಿಂಗಳು	೧೪೨
೮೫.	ಕಿ. ರಂ. ನಾಗರಾಜ	೧೪೩
೮೬.	ಡಿ. ಆರ್. ನೆನಪು	೧೪೪
೮೭.	ಹುಳಿಮಾವು	೧೪೫
೮೮.	ಗ್ರಾಮದೇವತೆಗಳು	೧೪೭
೮೯.	ರಾಮಕೃಷ್ಣ ಹೆಗಡೆಯವರಿಗೆ	೧೪೮
೯೦.	ಅರ್ಕಾವತಿ	೧೪೯
೯೧.	ಸಂತೆ	೧೫೧

ನನ್ನ ಜನಗಳು

ಮತ್ತು ಇತರ ಕವಿತೆಗಳು

ಹೊಲೆಮಾದಿಗರ ಹಾಡು
೧೯೭೫

Blank

ನನ್ನ ಜನಗಳು

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
        ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
        ಭಕ್ತರಪ್ಪ ಭಕ್ತರೋ ನನ್ನ ಜನಗಳು

ಹೊಲವನುತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು
        ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು
ಬರಿಗೈಲೇ ಬಂದೋರು ಉಸ್ಸೆಂದು ಕುತೋರು
        ಹೊಟ್ಟೆ ಬಟ್ಟೆ ಕಟ್ಟಿದೋರು ನನ್ನ ಜನಗಳು

ಮಾಳಿಗೆಗಳ ಎತ್ತಿದೋರು ಬಂಗಲೆಗಳ ಕಟ್ಟಿದೋರು
        ತಳಾದೀಗೆ ಸಿಕ್ಕಿದೋರು ನನ್ನ ಜನಗಳು
ಬೀದಿಯಲ್ಲಿ ಬಿದ್ದೋರು ಸದ್ದಿಲ್ಲದೆ ಇದ್ದೋರು
        ಒಳಗೊಳಗೇ ಅತ್ತೋರು ನನ್ನ ಜನಗಳು

ಬಡ್ಡಿಯನ್ನು ತೆತ್ತೋರು ಭಾಷಣಗಳ ಬೆಂಕಿಯಲ್ಲಿ
        ಬೆಂದು ಬೂದಿಯಾದೋರು ನನ್ನ ಜನಗಳು
ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡಜನಕೆ
        ಬೂಟುಮೆಟ್ಟು ಹೊಲೆದೋರು ನನ್ನ ಜನಗಳು

ಚಿನ್ನವನ್ನು ತೆಗೆದೋರು ಅನ್ನವನ್ನು ಕಾಣದೋರು
        ಬಟ್ಟೆಯನ್ನು ನೇಯೋರು ಬರಿಮೈಲೇ ಹೋಗೋರು
ಹೇಳಿದಂತೆ ಕೇಳುತಾರೆ ನನ್ನ ಜನಗಳು
        ಗಾಳಿಯಲ್ಲೆ ಬಾಳುತಾರೆ ನನ್ನ ಜನಗಳು.

ಒಂದು ಮೂಳೆಯ ಹಾಡು

ಕ್ವರುಗ್ತಿನಿ ಕ್ವನೆಗೊಂದ್ಸಲ ಕೂಗ್ತಿನಿ
ಬಡ್ಡೀ ದುಡ್ನೋನ್ ಬಂಗ್ಲೆ ಕೈಳ್ಗೆ
ತಳಾದೀಗ್ ಸಿಕ್ಕರೋ ಮೂಳೆ
ನೆಲಸಾಸ್ಕಂಡು ಬಾಣಾನೊದ್ಕೊಂಡು
ಈ ಮಿಂಡ್ರುಗುಟ್ದೋರ್ ಚಂದಾಗ್ ಬದ್ಕಾಕ್
ದುಡ್ಡು ಮೂಳೆ ಆಗಿ ಕ್ವಳಿತಿದ್ದಿನಿ
ಎಷ್ಟ್ ದಿನಾ ಈ ಪುಟ್ಕೋಸಿಗಳಾಟ ?
ಸಿಡಿತಿನಿ ಬಾಂಬ್ ಸಿಡ್ದಂಗೆ
ಇವ್ರ ಸಿಂಗಾರ, ಸೋಪ, ಗಾಜು ಲೈಟು ಎಲ್ಲಾ
ಪುಡಿ ಪುಡಿ ಆಗಂಗೆ
ನನ್ ಮ್ಯಾಲ್ ನಿಂತ್ಕಂಡ್ ತುಳೀತಿರೋ ಈ ಬಂಗ್ಲೆ
ಕೈಳೀಕ್ ಬೀಳಂಗೆ
ಸೌದೆ ಸಿಗದಂಗ್ ಸಿಗಿತಿನಿ, ಸಾವ್ಕಾರಿ ಮಯ್ಯ
ಕಳ್ಳು ಪಚ್ಚಿ ಬಗಿತಿನಿ, ಕುಟ್ತಿನಿ
ಗಂಟ್ಮೂಳೆ ಕೊಬ್ಬ
ಕುಡಿತನಿ ಗಟಗಟನ, ಹ್ಯಂಡ ಕುಡ್ದಂಗೆ
ಸಾವ್ಕಾರಿ ರಕ್ತನ
ನಾ ಮೂಳೆ, ನಾ ಇಂಗೇ ಇರಲ್ಲ
ಕೂಗ್ತಿನಿ, ಸಿಡಿತಿನಿ, ಮನುಷ ಆಯ್ತಿನಿ.

ಒಂದು ಪದ

ಇಕ್ರಲಾ ವದೀರ್ಲಾ
ಈ ನನ್ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದ್ ತರಾ ಗುಡಿ ಕಟ್ಸವ್ರೆ
ಎಲ್ಲಾರು ದೇವ್ರ ಮಕ್ಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ
ಹೋಟ್ಲು, ಬಾವಿ, ಮನೆ ಯಾವುದ್ಕೂ ಸೇರ್ಸಲ್ವಲ್ರೊ
ನಮ್ ಹೇಲ್ ತಿನ್ನೋ ನಾಯ್ನ ಕ್ವಾಣೆವಳೀಕ್ ಬುಟ್‌ಕತ್ತಾರೆ
ನಾವ್ ಬೆಳಿದಿತ್ ತಿಂತಾರೆ ನಾವ್ ದುಡಿದಿತ್ ತಗತ್ತಾರೆ
ನಾವ್ ಮಾತ್ರ ಬ್ಯಾಡಾ
ಹೊಲೇರು, ಮಾದುಗ್ರು ಅನ್ನೋ ಬದ್ಲು, ಹರಿಜನಾ
ಅಂತ ಕರ್ದು ನಗ್ತಾರಲ್ಲಪ್ಪೋ
ನಮ್ಯಾಲ್ ಮೀಟಿಂಗ್ ಮಾಡ್ತಾರೆ, ಕಾನೂನ್ ಮಾಡ್ತಾರೆ
ನಮ್ಮ ಯಸ್ರೇಳಿ ಹಾರ ಹಾಕ್ತಾರೆ, ಹಾಕುಸ್ಕತ್ತಾರೆ
ನಮ್ಮುನ್ನ ಉದ್ಧಾರ ಮಾಡ್ತೀವಿ ಅಂತ ಪೇಪ್ರೇಲಿ
ಮೈಕೇಲಿ ಜೋರಾಗಿ ಕೂಗ್ತಾ ಅವ್ರಲ್ಲಪ್ಪೋ
ನಾವ್ ಮಾತ್ರ ಇಸ್ಕೋಲ್‌ಗೋಗಾಂಗಿಲ್ಲ ಜೀತಕ್ಕೋಗ್ಬೇಕು
ತಲೆ ಎತ್ತಾಂಗಿಲ್ಲ – ಬಗ್ಗುಸ್ಬೇಕು
ಈ ನನ್ ಮಕ್ಳು ಕಳ್ಳಾಟ ಆಡ್ತಾ ಅವ್ರೆ ಅದಕ್ಕೇನೆ
ಇಕ್ರಲಾ ವದೀರ್ಲಾ ಈ ಸೂಳೆ ಮಕ್ಳ ಮೂಳೇ ಮುರೀರ್ಲಾ

ಸತ್ತೋಗೋರಾ

ರಾಜಕೀಯದ ಗಡಿಬಿಡಿ ವಳಗೋಡಾಡೋರಾ
ಪಾರ್ಲಿಮೆಂಟು, ಅಸೆಂಬ್ಲೀಲಿ ಮ್ಯತ್ಗಿರೋ ಸೀಟ್ನಮ್ಯಾಲ್ ಕುಂತು
ಪಾನ್ ಬೀಡಾ ಅಗ್ಯೋ ನಾಯಕ್ರಾ
ನಿಮ್ಗ್ ಕೇಳ್ಸಲ್ವೇನ್ರಲೇ ನಮ್ ಕೂಳಿಲ್ಲದ್ ಕೂಗು
ಪಂಚ್‌ತಾರಾದ್ವಳಗೆ ಕಣ್ಣಾರ್‌ಕಾಂಚಾರ ಉಂಡು, ಬಿದ್ದು
ಡೆಳ್ಳೀಗೂ ಬೆಂಗ್ಳೂರ್ಗು ಆಕಾಶ್‌ದೇಲ್ಲಾಡ್ರಾಡೋರಾ
ದಿನ್ದಿನ್ಕು ಕುಬೇರ್ರಾಗಿ, ಬಡೂರುದ್ದಾರ್‍ಲೊಕ್ಕರ
ಭಜ್ನೆ ಮಾಡಾಕ್ ಗುಡಿ ಕಟ್ಟುಸ್ಕೊಟ್ಟು
ನಿಮ್ಗೆ ಬಂಗ್ಲೆ ಕಟ್ಟುಸ್ಕತ್ತೀರೇನ್ರೋ
ನಿಂನಿಂ ಸೀಟ್ಗಾಗಿ ಕ್ವಲೆ ಮಾಡ್ಸುದ್ರು ನಮ್ಗ್ ಮಾತ್ರ
ನೀತಿ ಅಹಿಂಸೆ ಹೇಳ್ಕೊಡ್ತೀರೇನ್ರಲಾ
ಗಾಂಧೀ ಮಾತ್ಮನ ಅಚ್ಚುಗಳಾ
ನೀವು ಎಮ್ಮೆಲ್ಲೆಗಳು, ಮಿನೀಸ್ಟ್ರುಗಳು
ಬೋಳ್ ಮುದುಕ್ರಾ
ಹಲ್ ಉದ್ರೋದೋರಾ ಹಲ್ ಕಟ್ಟುಸ್ಕೊಂಡೋರಾ
ಜನ್ದೆದ್ರು ಮೈಕ್ನ ಮುಂದೆ ತಂದ್‌ವಿಚಾರ್ಸುದ್ರೆ
ತ್ರಾಣಾ ಪ್ರಾಣ ಎಳ್ಡೂ ಇಲ್ದೆ
ತ್ವಡೇ ನಡ್ಗಿ ಸತ್ತೋಗೋರಾ

ಕ್ರಾಂತಿಪದ

ಗುಡಿಸಲುಗಳು ಗುಡುಗುತಿವೆ ಬಂಗಲೆಗಳು ನಡುಗುತಿವೆ
ಎಲ್ಲೆಲ್ಲಿಯು ಮೊಳಗುತ್ತಿದೆ ನವಕ್ರಾಂತಿಯ ಗಾನ
ಮಾತುಗಳು ಹತವಾಗುತಿವೆ ಜನಪಥಗಳು ಮೂಡುತಿವೆ
ಅಸಮಾನತೆ ಆಗುತ್ತಿದೆ ಕ್ರಾಂತಿಗೆ ಸೋಪಾನ.

ರೈಲು ನಿಲುವ ತಾಣದಲಿ ಭಾರ ಹೊತ್ತ ರಟ್ಟೆಯಲಿ
ತೊಟ್ಟಿಕ್ಕಿದ ಬೆವರಿನಹನಿ ಬೆಂಕಿಯಾಗಿ ಸಿಡಿದು
ಬಡಜನಗಳ ಕಣ್ದೆರಸಿ ಶೋಷಕರನು ಕಂಗೆಡಿಸಿ
ಕೆಂಗಿಡಿಗಳ ಕಾರುತ್ತಿದೆ ಘೋರಾರ್ಭಟವಾಗಿ.

ದೇವರುಗಳ ಪೂಜೆಯಲಿ ಗುರುವರ್ಯರ ದಾಸ್ಯದಲಿ
ಇಹಲೋಕಕು ಪರಲೋಕಕು ಸೇತುವೆಯನು ಕಟ್ಟಿ
ಪರಮಾತ್ಮನ ಪರದೆಯಲಿ ಜೀವಾತ್ಮನ ಕಬಳಿಸುವ
ಕಡುಜಾಣರ ಕೊಂದುತಿಂದು ಅನ್ಯಾಯವ ಮೆಟ್ಟಿ.

ಕರ್ಮಕಥೆಯ ಚಾಟಿಯನು ಮುರಿದಿಕ್ಕುತ ಮುನ್ನಡೆದು
ಹಿಮ್ಮೆಟ್ಟಿಸಿ ಅಡ್ಡಬಂದ ಪಟ್ಟಭದ್ರ ಹಿತವ
ಮಿಡಿಯುತಲಿದೆ ಎದೆಗಳಲಿ ತಬ್ಬುತಲಿದೆ ಜಡತೆಯನು
ಚಿಮ್ಮುತ್ತಿರುವ ಹೋರಾಟವು ಹೊಮ್ಮಿ ಮುಗಿಲಿಗೇರಿ.

ದಲಿತರಾಗ ಗುನುಗುತಿದೆ ಗೋರಿಯ ಕರಿಬಿರುಕಿನಲಿ
ಶೋಷಣೆಯಲೆ ಶೃಂಗಾರವು ಆಯಿತೆನ್ನ ಹೆಣಕೆ
ಸುಲಿದವರನು ಸುಲಿವದಿನ ಬಂದಿತೆಂದು ಹಿಗ್ಗುತಿದೆ
ಸುಡುಗಾಡಿನ ಬಿರುಗಾಳಿಯು ಕ್ರಾಂತಿಗೀತೆ ಹಾಡಿ.

ಗಳ್ಡಗಳು

ನಾನ್ ಹ್ಯಣ ನನ್ ಸುಟ್ಬುಡಿ
ಬರೇ ಉಸುರ್‌ಕೊಟ್ ಓಡಾಡುಸ್ ಬ್ಯಾಡಿ
ಕೂಲೀಗ್ ಕರೀಬ್ಯಾಡಿ ದುಡಿಯಾಕ್ಯಳೀ ಬ್ಯಾಡಿ
ಕ್ವಚ್ಚೆ ಜಾಗ್ದೇಲ್ ಮಲುಗ್ಸಿ ಕಕ್ಕಸ್ ಪೈಪ್
ಇತ್ ಕಡೀಕ್ ತಿರುಗುಸ್ಬ್ಯಾಡಿ
ಜೀತ್ ಸಾಲ ಬಡ್ಡಿ ಚಪ್ಪಡಿ ಏರಿ, ಅಪ್ಪಚ್ಚಿ
ಮಾಡಿ ಆಡ್ಕಂಡ್ ನಗಬ್ಯಾಡಿ
ದಯಾ ತುಂಬಿರೋ ನಿಮ್ ಮಾತ್‌ಗಾರ್ಕೆ
ವಳಗ್ಯಲ್ಲ ಕ್ವಳ್ತು ಹುಳಾ ಬಿದ್ದಿರೋ ನೀವು
ಏನೂ ಬ್ಯಾಡ
ತೋಡಿರೋ ಗುಂಡೀಗ್ ನನ್ ಓಡಾಕ್ ಬುಡಿ
ಇಕ್ಕಿರೋ ಬೆಂಕೀಗ್ ನನ್ ಬೀಳಾಕ್ ಬುಡಿ
ನನ್ ಮಯ್ಯಾಗಿನ ಬಾಡ ಇಸ್ಪಿಸ್ಟೇ ಕಿತ್
ತಿನ್‌ಬ್ಯಾಡಿ, ನಾ ಜೀಮೂತವಾಹನ ಅಲ್ಲ
ಏ ಗಳ್ಡಗಳಾ
ನನ್ ಜ್ಯುಟ್ ಕಚ್ಕಂಡ್ ಮ್ಯಾಲ್ಕಾರಿ
ಎಲ್ಲಾನ ಕೆಂಪಟ್ಟೆ ಕೆಂಪ್ ನ್ಯಲ್ದಡೆ ನನ್ಯಸುದ್ಬುಡಿ
ನಾ ಬದಿಕತ್ತಿನಿ ಸರಿಯಾಗುಸ್ರಾಡ್ತಿನಿ.

ಅಡಗೂಲಜ್ಜಿಯ ಕಥೆ

ಅಪರೂಪದ ಕಾರೊಂದು ಹಿಮಾಲಯದಿಂದ
ದಬಕ್ಕನೆ ಕ್ಯಳೀಕ್ ಬಿದ್ದು ಇತ್ ಕಡೀಕ್ ಬತ್ತಾ ಅದೆ.
ಅದರ್ವಳಗೆ ಅಡುಗೂಲಜ್ಜಿ ಕುಂತವ್ಳೆ. ಅರೀದ್ದುಡುಗ ಅದನ್ನೋಡಸ್ತದೆ
ಕಚ್ಚೇ ಬೊಜ್ಜು ಟೋಪಿಯೋರು ಅದರಿಂದೆ ಜೈಕಾರಕ್ಯಾಕ ಹಾಕ್ಕಂಡ್
ಓಡೋಡ್ ಬತ್ತಾ ಅವ್ರೆ. ಕೆಟ್ರೆರಿಪೇರಿ ಮಾಡ್ಕಂಡು
ನಿಂತ್ರೆ ನೂಕ್ಕಂಡು ದಿಗ್ವಿಜಯಕ್ವಂಟವ್ರೆ.

ಕಾಲುಂಗರ ಮಾತ್ರ ಕಂಡೋರು ಕಾರ್ನ ಅಲ್ಲಲ್ಲೇನಿಲ್ಸಿ
ಹಾರಹಾಕಿ ಅಡ್ ಬೀಳ್ತಾರೆ. ಇತ್ತ ಮೂಡಣಕ್ಕೆ ವಂಟಾಗ
ದ್ವಣ್ಣೇ ತಿರುಗ್ಸೋರ್ನ ಕಾಯಸ್ಥರ್ನ ಹಿಂದುಕ್ ನೂಕಿ
ಕಾರುಗ್ ದಾರಿ ಮಾಡ್ಕೊಡ್ತಾರೆ. ಒಂದು ನಮಾಜ್ ಸಿಕ್ಕಿದಮ್ಯಾಲೆ
ಅದು ತೆಂಕಣಕ್ಕೆ ತಿರುಗ್ತದೆ.

ಅಲ್ಲಿ ಒಬ್ಬ ಪೈಲ್ವಾನ್ ತ್ವಡೇ ಭುಜ ತಟ್ಕಂಡು ಒಬ್ಬ
ಬಡ್ಡೀಮಗನ್ನ ಎಳ್ಕಂಡು
ಬಡಬಡನ ಓಡೋಡಿ ಅಡ್ ಬೀಳ್ತಿದ್ದಂಗೆ
ಡೊಳ್ಳೊಟ್ಟೆಕುಳ್ಳ ಹಲ್ಲುದ್ರಿದ ಅಜ್ಜ ಇನ್ನೊಬ್ಬ ಸಕ್ಕತ್ ಗೂಂಡಾ
ಇವ್ರು ಓಡ್ ಬಂದು ಪೈಲ್ವಾನನ್ನ ಎಳೆದಾಕಿ, ನುಗ್ಗಿ,
ಅಡುಗೂಲಜ್ಜಿ ಕಾಲು, ಕೈ, ಸ್ವಂಟ, ನೆರೆಕೂದ್ಲು
ಇತ್ಯಾದಿಗಳನ್ನು ನೆಕ್ಕಿ ನೆಕ್ಕಿ ಚಪ್ಪರಿಸಿ ಕ್ಯಾಕಹಾಕಿ
ಮುಂದಕ್ಕಳುಸ್ತಾರೆ.

ಮುಂದಿನ ರಾಜ್ಯಕೆ ಹತ್ತು ತಲೇ ಒಬ್ಬ ಪಾಳೆಗಾರ
ಅವ್ನು ಸಭೆ ಒಳಗೆ ಕುಂತಿದ್ದೋನು ಸುದ್ದಿ ಕೇಳಿ ಗಕ್ಕನ್‌ನಕ್ತಾನೆ.

ನಾಟಕ ಕಂಪನಿಯೋರು ಹಾರ್ಮನಿ ಮೇಸ್ಟ್ರುಗಳು
ಅಜ್ಜೀಗ್ ಜೈ ಅಂತಾ ನುಗ್ತಾರೆ ಪಾಳೈಗಾರನ ಕಡೇರು
ನಾಟಕ್‌ದೋರ್‍ನ ರುಬ್ಬಿ ಅಪ್ಪಚ್ಚಿ ಮಾಡಿ
ಕರೇ ಬೀದಿಗಳಲ್ಲಿ ಬಡಕಲ ಕಾರ್‍ನ ಓಡುಸ್ಕೊಂಡೋಗಿ
ನೀರುಗ್ ಮುಳುಗುಸ್ತಾರೆ.
ಅಜ್ಜಿ ಅರಜೀವದಲ್ ತೇಲ್‌ವಾಗ
ಯಾವ್ಯಾವ ದೇಸದೋರೋ ಮೀನುಗ್ ಬಂದಿದ್ದೋರು
ಬಣ್ಣಬಣ್ಣದ ಬೆಸ್ತರು
ಕೈ ಬೀಸಿ ಕರೀತಾರೆ.

ಮಹಾವ್ಯಕ್ತಿ ವಬ್ಬ

ತುಕುಡ ತುಕುಡದಲಿ ಗಂಟು ಮೂಳೆಯಲಿ
ಜಿನುಗುಟ್ಟುವ ಕೊಬ್ಬು
ತ್ವಡೆ ತೋಳಿನಲಿ ಗಲ್ಲ ಕತ್ತಿನಲಿ
ತುಂಬಿಕೊಂಡ ಚರ್ಬಿ

ತಿಕ್ಕುಜ್ಜಿ ತ್ವಳೆದ ಬಿಳೇ ಹಲ್ಲಿನಲಿ
ಬೆಳಕಿನಂತ ವಳಪು
ಎಣ್ಣೆ ನೀರಿನಲಿ ಬೆಳದ ಕೂದಲಲಿ
ಗಾಳಿಯಂಥ ನವುರು

ಮೂಳೆ ರಕುತದಲಿ ಎಜ್ಜೆ ಕಟ್ಟಿದ
ದೆವ್ವದಂತ ಸೌಧ
ಸಿಕ್ಕ ದುಡ್ಡಿನಲಿ ಕಂತು ಕಂತಿನಲಿ
ಏರುತಿರುವ ಪೆಟ್ಟಿ

ಬಾಯೆಲ್ಲ ಭಕುತಿ ಹಣೆಯೆಲ್ಲ ನಾಮ
ಹ್ಯಂಡದಂತ ಮಾತು
ಕಸಿದ ಕೋಟಿಯಲಿ ದಾನಕ್ಕೆ ಸಾವ್ರ
ವಳಗೆಲ್ಲ ಕ್ವಳತು ತೂತು

ಮಾತು ಮಾತಿಗೂ ಕ್ಯಾಕನಗ
ತಲೆಯ ಗುಮುಕಾಟ
ಕೊರಳ ಎತ್ತಿದರೆ ಚಿನ್ನದಸರ
ಮಾತೆತ್ತಿದರೆ ಮಹಾವ್ಯಕ್ತಿ ವಬ್ಬ

ಹಿಂದತ್ತು ಜನ ಮುಂದತ್ತು ಜನ
        ನಡುವೆ ನಿಂತವ್ನೆ ನೋಡಿ
ಹೊತ್ತವ್ರೆ ಹಿಡಿದವ್ರೆ ಕೈಯೆತ್ತಿ ಮುಗಿದವ್ರೆ
        ನೋಡಿ ಇವ್ನ ಮೋಡಿ

ದ್ವಡ್ಡ ಭಕ್ತರಿಗೆ ಚಿನ್ನ ಕೊಟ್ಟೋನು
        ದಡ್ಡ ಭಕ್ತರಿಗೆ ಬೂದಿ
ಇವನು ಮಾಡುವನು ಬಿದ್ದೋರ ಉದ್ಧಾರ
        ಕಾಯಿರಪ್ಪ ಕಾಯ್ರಿ

ಹಬ್ಬ

ದಲಿತರ ಮೂಳೆ ಪಕ್ಕೆ ತಲೆಬುರುಡೆ ಮ್ಯಾಲೆ
ಕಾರು, ರಿಕ್ಷ, ಸ್ಕೂಟ್ರೆಲಿ ಓಡಾಡೋರು
ಕ್ಯಳಗ್ನೋರ್ ಕಣ್ಕಿತ್ತು ಕ್ಯಕ್ಕರಸ್ಕಂಡ್ ನೋಡೋರು
ಹಲ್ಲುದ್ರುಸಿ ಫಕ್ಕನ್ ನಗೋರು
ಸುಲ್ಗೆಮಾಡೋ ಮೋಸಗಾರ
ಬಡ್ಡೀಮಕ್ಕಳ್ನ ಕ್ರಾಂತಿಕಾರಿಗಳ ಕೋರ್ಟಿಗೆಳೀತೀನಿ
ಮಾರ್ಕ್ಸ್‌ನಿಂದ ಜಡ್ಜ್‌ಮೆಂಟ್ ಕೊಡುಸ್ತೀನಿ
ಅವುರ್ಗೆ ಪಾಸಿ ಆಯ್ತದೆ
ತಾತ ಮುತ್ತಾತನ ಕಾಲ್ದಿಂದ ಜೀವತೇದೋರು
ಕೋರ್ಟ್ನಂಗಳದ ತುಂಬ ನಿಂತ್ಕಂಡು
ಕ್ಯಾಕಾ ಹಾಕಿ ಕುಣೀತರೇ
ಸುಲ್ದೋರ್ನ ಸುಲಿಯೋ ದಿನಾ ಅದು,
ಅವತ್ತು ದಲಿತರ ಹಬ್ಬ.

ಸುಂಟರಗಾಳಿ

ಸುಂಟರಗಾಳಿಯೊಳಗೆ ಸಿಕ್ಕಿ ಥರಥರಗುಡುವ
ಗುರುಮತದ ಧ್ವಜದಲ್ಲಿ ಧರ್ಮವಿಲ್ಲ
ಮೂಳೆ ತುಂಬಿದ ಹಣೆಗೆ ಸೊಟ್ಟ ಸೊಟ್ಟಗೆ ಬಳಿದ
ನಾಮವಿಭೂತಿಯಲಿ ಧರ್ಮವಿಲ್ಲ

ದಕ್ಷಿಣೆಯ ರುಚಿಯುಂಡು ಉಬ್ಬಿರುವ ಒಡಲಿನಲಿ
ಜುಟ್ಟು ಜನಿವಾರದಲಿ ಧರ್ಮವಿಲ್ಲ
ಊದುಕಡ್ಡಿಯ ಅರೆದು ಮೇಲೆದ್ದ ಧೂಮದಲಿ
ಧರ್ಮಸುಳಿ ಸುಳಿಯಾಗಿ ಸುಳಿವುದಿಲ್ಲ

ದಾರರುದ್ರಾಕ್ಷಿಗಳ ಭಾರ ಬಿಗಿತಕೆ ಬೆದರಿ
ದೂರ ಸರಿಯುತಲಿಹುದು ನೈಜಧರ್ಮ
ಜಾಗಟೆಯ ಆರ್ಭಟಕೆ ಬೌನಾಸಿಯಬ್ಬರಕೆ
ಕಿವಿಯೊಡೆದು ಓಡುತಿದೆ ಬಿದ್ದು ಧರ್ಮ

ಒಂದೊಂದು ಜೀವದಲಿ ಎದೆಯಂತರಾಳದಲಿ
ಅಡಗಿಹುದು ಪರಿಶುದ್ಧ ಧರ್ಮಸತ್ವ
ಮಾನವತೆಗಾಪತ್ತು ಬಂದೊಡನೆ ಸಿಡಿದೆದ್ದು
ರಕ್ಷಣೆಗೆ ನಿಲ್ಲುವುದು ಯೋಧನಂತೆ

ನಿಜಧರ್ಮವರಿಯದವ ಹಾಕಿಕೊಳುವನು ಕೊನೆಗೆ
ಶಿವದಾರ ಜನಿವಾರಗಳಿಗೆ ನೇಣು
ಅಂಧಭಕ್ತನ ಬುದ್ಧಿ ಗುಡಿಯ ಕೆಂಗಲ್ಲಿನಡಿ
ಬಜ್ಜಿ ಪುಡಿಯಾಗುತಿದೆ ಇದುವೆ ಸತ್ಯ.

ಕನ್ನಡವ್ವನಿಗೆ

ಯಂಗೆ ಹೇಳಲಿ ತಾಯಿ
ನಿನ್ನ ಗೌರ್ಯ ?

ವಿಜಯನಗರದ ಹೆಬ್ಬಾಗಲಲಿ
ಇರುವೆ ಸಾಲಲ್ಲೆ ನಿನ್ನ ಬಳಗ
ತಲೆ ಮಗುಚಿ ಕಯ್ಯೊಡ್ಡಿದ ಲಕ್ಷಲಕ್ಷ ಜನಕೆ
ಭಿಕ್ಷ ಹಾಕಿದ ಕೃಷ್ಣದೇವರಾಯನೆಂಥ ಮಾನುಭಾವ
ಅಷ್ಟು ತಾಂಡು ಇಷ್ಟುಕೊಟ್ಟ ಅವನೆಂಥ ಮಹಾದೇವ
'ಮುತ್ತು ರತ್ನಗಳನು ಬಳ್ಳದಿಂದ ಅಳೆದು ಮಾರಿದ'
ಸೆಟ್ಟಿ ವ್ಯಾಪಾರಿಗಳು ನಿನಗೆ ಬಂಗಾರದಲಿ ಸಿಂಗಾರಮಾಡವ್ರೆ
ನಿನದೆಂಥ ಪುಣ್ಯ ತಾಯೇ.

ರಾಜಗುರುಗಳನ್ನು ಯಣಕಿಂತ ಚನ್ನಾಗಿ ಹೊರುವೋರು
ರೆಡಿಯಾಗಿ ನಿಂತ ನಿನ್ನದು ತ್ಯಾಗಿಗಳ ನಾಡು
ದೇವಬ್ರಾಹ್ಮಣರಿಗೆ ಅಗ್ರಹಾರದಲಿ ಸರಬತ್ತು ಕೊಟ್ಟ
ಯಂಥ ಜನಸೇವೆ !

ಸೂಳೆಯರಿಲ್ಲದ ನಾಡೊಂದು ನಾಡೆ ?
ಹದವಾದ ಚರ್ಮವ ಹರಾಜಿಗಿಟ್ಟು ಜನವ ಬದುಕಿಸಿದ
ಕರ್ನಾಟಕ ರತ್ನಸಿಂಹಾಸನಾಧೀಶ್ವರರ
ಕನಸಿನಲಿ ಕಂಡು ಸಲುಗೆಯ ಮಾತಾಡಿದವಳೆ
ನಿನ್ನ ಕೀರ್ತಿ ಕಡಮೆಯೇನೆ ?
ರೈತರ ಬೆವರ ನೆಕ್ಕಿ ನೆಕ್ಕೂದಿದ
ಜಮೀನುದಾರರ ಜೊತೆಗಾತಿ

ಕಾರ್ಮಿಕರ ರಕ್ತದ ರೆವೆವುಂಡೆಯ ಉಂಡು ಕಾರಿನ
ಹಾರನಿನ್ನಂತೆ ತೇಗುವ ಮಾಲೀಕರ ಮಿಂಡಗಾತಿ
ಎಲ್ಲೆಲ್ಲು ನೀನೆ, ನಿನ್ನ ಮಕವೆ
ಕುಣಿಸುತಾರೆ ಮ್ಯರಸುತಾರೆ
ಯಂಗೆ ಬಿಡಿಸಲೆ ನಿನ್ನ
ಯಂಗೆ ಕಯ್ಯೆತ್ತಿ ಮುಗಿಯಲೆ ನಿಂಗೆ ?

ಹಣೆ ಬರವು ಎಂಬ ನಾಟಕವು

ಅ – ವರಗಡೆ ಆಗಿದ್ದೀರಾ ?
ಆ – ಇಲ್ಲ.
ಅ – ಮತ್ಯಾಕೆ ಅತ್ತತ್ತ ಒತ್ರುಸ್ಕಂಡು ನಿಂತಿದ್ದೀರ ಗುಡಿತಾವು ?
ಆ – ಗೊತ್ತಿಲ್ಲ
ಅ – ಬೆವರಲ್ಲಿ ಬಣ್ಣ ಬಳ್ದು ರಕ್ತದಲ್ಲಿ ನೆಲಸಾರ್ಸಿ
ಮೂಳೇಲಿ ಗ್ವಾಡೆಕಟ್ಟಿ ಗುಡಿಚಂದ ಮಾಡಿದೋರು
ನೀವಲ್ಲವೆ ? ನಿಮ್ಮ ತೋಳಲ್ಲವೆ ?
ಆ – ಹೌದೌದು
ಅ – ಕಟ್ವೋತಕ ನೀವು ಬೇಕು ಕಟ್ಬುದ್‌ಮ್ಯಾಲೆ ಕುಂತಿದ್ದೋರು
ಗುಡಿವಳ್ಗೆ ಅಡ್ರುಸ್ಕಂಡು ನಿಂತುಬುಟ್ಟವ್ರೆ
ದುಡುದೋರು ಮನುಸ್ರಲ್ಲವ ?
ಆ – ಹಣೆಬರವು, ಹಣೆಬರವು
ಬ್ರಮ್ಮನು ಹಣೆವಳ್ಗೆ ಬರದವನೆ
ಬರುಸ್ಕಂಡು ಬಂದಿತ್ತು ಅದೆಕಾಣ್ಲಾ
ಅ – ಕೆಂಪಿಂಕೇಲ್ ಬರುದಿರ್ಲಿ ಕಪ್ಪಿಂಕೇಲ್ ಬರುದಿರ್ಲಿ
ಅಳುಸ್ತೀನಿ ನನ್ತಾವು ರಬ್ಬರ್‌ದೆ
ಆ – ಕೇಳಾನ ದೇವುರ್ನೆ ಹುಟ್ಸಿದ ಮಕ್ಕಳಿಗೇನೆ
ವಬುರ್ಗೊಂದು ವಬ್ಬುರ್ಗೊಂದು ಆಗಬೋದಾ ?
ಬರಿವಾಗ್ಲೆ ಭೇದಾನ ಮಾಡುಬೋದಾ ?
ಅ – ಕೂಗುದ್ರು ಕೇಳ್ಸಲ್ಲ ಕಿವುಡನಯ್ಯ ದೇವರು
ಕಷ್ಟವ ನೋಡಲಾರ ಕುರುಡನಯ್ಯ ದೇವರು
ಇದು ಜೀವವೋದ ದೇವರು ಕಲ್ಲುದೇವರು
ಆ – 'ಎಲ್ಲವನೋ ಅವನೆಲ್ಲವನೋ
ಶಿವನೆಲ್ಲವನೋ ಅವನೆಲ್ಲವನೋ'

ಅ – ಸಾವ್ಕಾರ್ರ ಮನೆವಳ್ಗೆ ಸುಖಭೋಜನದಲ್ಲವ್ನೆ
ಕಿಲಕಿಲ್ನೆ ನಗ್ತಾನೆ ಮಕ್ಕುಳ್‌ನಗಂಗೇ
ಆ – ಬರ್ರಾಲಾ ಕೇಳಾನ ನ್ಯಾಯಾವ ಕೇಳಾನ
ತಿದ್ರಾನ ಹಣೆಬರವಾ

ನನ್ನವಳಿಗೆ

ಕ್ರಾಂತಿಕನ್ಯೆ ಮೋಹಜನ್ಯೆ
ನಿನ್ನ ಮದುವೆ ಆಗುವೆ
ಕ್ರಾಂತಿ ಕಿಡಿಯ ಸಿಡಿಸುವಾಗ
ನಾನು ನಿನ್ನ ತಬ್ಬುವೆ

ಬಡಜನಗಳ ಬಂಡಾಯದಿ
ನಿನಗೆ ಮುತ್ತನೊತ್ತುವೆ
ಕ್ರಾಂತಿಜಯವ ಪಡೆವವರೆಗು
ನಿನ್ನ ಹಿಂದೆ ಸುತ್ತುವೆ

ಮೆರೆಯುವವರ ಚರ್ಮಸುಲಿದು
ಸೀರೆಕುಬಸ ಹೊಲಿಸುವೆ
ಮೋಸಗಾರ್ರ ಕೊರಳ ಕಡಿದು
ತಲೆಯ ಹಾರ ಹಾಕುವೆ

ಮೂಳೆ ಹಿಡಿದು ನಿನ್ನ ಮುಂದೆ
ಕೋಲುಯ್ಯುವೆ ಕುಣಿಯುವೆ
ವಂಚಕರನು ಗೋರಿಮಾಡಿ
ಹಾಲುಯ್ಯುವೆ ತಣಿಯುವೆ

ಗುಡಿಯಲಿರುವ ವಡವೆ ತಂದು
ನಿನಗೆ ವಡವೆ ಮಾಡುವೆ
ನುಗ್ಗಿತಂದ ಬೆಳ್ಳಿಯಿಂದ
ಕೈಗೆ ಬಳೆಯ ತೊಡಿಸುವೆ

ಹೀರಿದವರ ರಕ್ತದಿಂದ
        ಮೈಗೆ ನೀರನುಯ್ಯುವೆ
ಮುದ್ದೆಯಾದ ಹೆಪ್ಪಿನಿಂದ
        ಹಣೆಗೆ ಬೊಟ್ಟನಿಕ್ಕುವೆ

ಕೊಬ್ಬಿದವರ ಕರುಳಕಿತ್ತು
        ಮುಡಿಗೆ ಹೂವ ಮುಡಿಸುವೆ
ಕ್ರಾಂತಿಯಲ್ಲಿ ನಿನ್ನ ಎದೆಗೆ
        ನನ್ನ ಎದೆಯ ಒತ್ತುವೆ.

ಭವಿಷದ್ಗೀತೆ

ಕಾರ್ಮೋಡ ಕವಿದಿತ್ತು ಕಗ್ಗಪ್ಪು ಕೆದರಿತ್ತು
        ಕಡುರೌದ್ರ ತುಂಬಿತ್ತು ಬಾನಿನಲ್ಲಿ
ಕ್ರಾಂತಿ ಕರೆಗೋಗೊಟ್ಟು, ಕಪ್ಪುವಸ್ತ್ರವತೊಟ್ಟು
        ಭೂದೇವಿ ನಿಂತಿತ್ತು ರಾತ್ರಿಯಲ್ಲಿ.

ಅಸಮತೆಯ ಗುಡುಗಿನಲಿ ಸಂಕಟದ ಸಿಡಿಲಿನಲಿ
        ಚಿಂದಿಬಟ್ಟೆಯಲೊಂದು ಮಿಂಚುಕಂಡು
ಬಿರುಗಾಳಿ ಬೀಸಿತ್ತು ಭೀರಾಟ ಚಿಮ್ಮಿತ್ತು
        ದೂರಾದಾ ಕಾರ್ಮುಗಿಲ ಬಿರುಕಿನಲ್ಲಿ.

ತೊರೆತುಂಬಿ ಹರಿದಿತ್ತು ಕೆರೆತುಂಬಿ ತುಳುಕಿತ್ತು
        ಮಳೆಯಾಗಿ ಸುರಿದಿರಲು ಕೆಂಪುರಕ್ತ
ಕ್ರಾಂತಿಕಾರಿಯು ನುಗ್ಗಿ ಕೊಲೆಸುಲಿಗೆ ಗೈಯುತಿರೆ
        ಅತ್ತಿದ್ದ ಸತ್ತಿದ್ದ ಸರ್ವಶಕ್ತ.

ಕಾರ್ಗತ್ತಲಿನಲ್ಲೇ ಹಸಿದವರ ಬಂಡಾಯ
        ಅಗುಳಿನಾಸೆಗೆ ಸೇರಿ ಸಾಗುತ್ತಿತ್ತು
ಕ್ರಾಂತಿಸರಪಳಿ ಆಗ ಶೋಷಕರ ಕೊರಳುಗಳ
        ಬಿಗಿದಿತ್ತು ಒಗೆದಿತ್ತು ಕೊಲ್ಲುತ್ತಿತ್ತು.

ಧರ್ಮಗುರುವಿನ ಪೀಠ ಮುಗ್ಗುರಿಸಿ ಮುರಿದಿತ್ತು
        ದೈವಗುಡಿ ಜನರಮನೆ ಆಗುತ್ತಿತ್ತು
ಕನಸೊಂದು ನನಸಾಗಿ ಕ್ರಾಂತಿಬೆಳೆ ಹುಲುಸಾಗಿ
        ಬೆಳೆವುದೆನ್ನುವ ಆಸೆ ಮೂಡುತ್ತಿತ್ತು.

ನಗ್ಬೇಕು

ನ್ಯಡೀತಿರೋ ಅನ್ಯಾಯ ತಡಿಯಾಕೆ
ದುಪ್ಪಿ ಎಸ್ದು ಎಗರ್‍ಬೇಕು
ಕೈಮುಗ್ದು ಕಾಲಗ್ ಬಿದ್ದು
ಹಾರಾ ಹಾಕುದ್ರಾಗಲ್ಲ
ರೇಡಿವಳಗೆ ಮೀಟಿಂಗ್ ಕೇಳಿ
ಹಲ್ ಗಿಂಜುದ್ರಾಗಲ್ಲ
ದೇವ್ರು ದಿಂಡ್ರುಗ್ ಕಡ್ಡಿ ಹಚ್ಚಿ
ಸಾಕಾಗೋಯ್ತಪ್ಪ
ನನ್ ಮಗ್ನವ್ ಹಂಗೇ ಕುಂತವೆ
ಉಸ್ರೇ ವಂಡಲ್ಲ
ಸನ್ಕೆ ಗುದ್ಲಿ ತಗಂಡು
ದೆವ್ಗಳ್ ವಂಟಂಗ್ ಹೋಗ್ಬೇಕು
ಕಳೆ ಕಿತ್ತಂಗ್ ಕೀಳ್ಬೇಕು
ಕುಂಟೆ ವಡ್ದಂಗ್ ವಡೀಬೇಕು
ಏರೂ ಪೇರೂ ನ್ಯಾರಾಮಾಡಿ
ಬಾಡ್ ತಿಂದಂಗ್ ನಗ್ಬೇಕು.

ಬೀಳು

ಎಣ್ಣೆ ಕಾಣದ ತಲೆಯ ಕೂದಲುಗಳೆದ್ದೆದ್ದು
ನರ್ತನವ ಗೈಯುತಿರೆ ಮೋದದಿಂದ
ಬರಿಹೊಟ್ಟೆ ಕೊರಗಿತ್ತು ಕೊಳೆಬಟ್ಟೆ ಹರಿದಿತ್ತು
ಪ್ರೇತಕಳೆ ಚಿಮ್ಮಿತ್ತು ವದನದಿಂದ

ಹರಿದಸೀರೆಯ ಅಂಚು ಸುಳಿವ ಗಾಳಿಗೆ ಹಾರಿ
ಅಡಗಿದ್ದ ತೊಡೆಗಳನು ತೋರುತ್ತಿತ್ತು
ಚಿಂದಿ ಕುಬಸವು ತನ್ನ ಒಲವು ಬಂದೊಡೆತೂರಿ
ವಕ್ಷಗಳ ದರ್ಶನವ ಮಾಡಿಸಿತ್ತು.

ಅನ್ನವಿಲ್ಲದ ಹೆಣ್ಗೆ ಕುಂಕುಮವು ಕಡುಕೇಡು
ಹಣೆಯಲ್ಲಿ ಬೆವರಹನಿ ಮಿನುಗುತ್ತಿತ್ತು
ಉಟ್ಟ ಸೀರೆಯ ಸೆರಗು ಎತ್ತೆತ್ತಲೋ ಏರಿ
ಬಡತನದ ಬಾವುಟವು ಹಾರುತ್ತಿತ್ತು.

ಕಾಲ್ಗೆ ಮೆಟ್ಟುಗಳಿಲ್ಲ ಕೈಗಳಿಗೆ ಬಳೆಯಿಲ್ಲ
ಮೈಯೆಲ್ಲ ಬೆವರೆದ್ದು ನಾರುತ್ತಿತ್ತು
ಬವಣೆಯಲಿ ಬೆಂದತನು ಕೊಳೆಯ ಗೆಳೆತನ ಮಾಡಿ
ಮೂಳೆಯುಳಿದಿವೆ ಎಂದು ಸಾರುತಿತ್ತು.

ಕಗ್ಗೋಳು ಕೊನೆಗೊಂಡು ಬಾಳಿಗೊಳಿತೊದಗುವುದು
ಎಂಬಾಸೆ ಕಣ್ಣಿನಲಿ ಮಾಗುತ್ತಿತ್ತು
ಉಮ್ಮಳವನದುಮಿಟ್ಟ ನೀರಿಲ್ಲದಾ ನೋಟ
ಬಾಳುವೆಗೆ ಧಿಕ್ಕಾರ ಎನ್ನುತ್ತಿತ್ತು.

ಮಸಣದ ಚಲುವೆಗೆ

ಕವನಗಳನ್ನು ನಾ ಬರೆಯಲು
ಆಶ್ರಯಿಸಿದೆ ನಿನ್ನ
ನಗೆ ಚಿಮ್ಮಿಸಿ ಬಾರೆನ್ನುತ
ನೀನಪ್ಪಿದೆ ನನ್ನ.

ಗೋರಿಯ ಮೇಲಣ ಮರಗಳ
ತಂಗಾಳಿಯ ತಂಪು
ಮರ್ಮರ ದನಿ ಮೊರೆಯುತ್ತಿದೆ
ಮೈ ಕಿವಿಗಳಿಗಿಂಪು.

ಗಡಿಬಿಡಿಯಲಿ ಪಾರಾಗಲು
ನಾ ಬಂದೆನು ಇಲ್ಲಿ
ಸಂಭಾಷಿಸಿ ಸುಳಿದಾಡುವೆ
ನೀ ಮಾತಿನ ಮಲ್ಲಿ.

ಉದ್ಯಾನದಿ ಸಾಗುತ್ತಿದೆ
ಸಿರಿವಂತರ ಮೋಜು
ನಾ ಬಡವನು ನನಗೇತಕೆ
ಉದ್ಯಾನದ ಗೋಜು.

ಹೆಣದೊಡವೆಯ ಹೆಣಗುಬಸವ
ಸತ್ತಿರುವರ ಸೀರೆ
ತೊಟ್ಟುಟ್ಟರು ನೀನಾಗಿಹೆ
ವೈಯಾರದ ನೀರೆ.

ನೀನೆಯೆ ಸರಿ ನೀನೆಯೆ ಸಿರಿ
ನೀ ನನ್ನಯ ಹೆಣ್ಣು
ನಿನ್ನನ್ನು ನಾ ಮೆಚ್ಚಿರುವೆನು
ನೀ ಕಾವ್ಯದ ಕಣ್ಣು.

ನಾವು

ಕೂಳಿಲ್ಲದೆ ಕೊರಗುವವರು
        ನಾವು ಹಸಿದ ಹುಲಿಗಳು
ಮೇಲಿರುವರ ಸುಳ್ಳು ಸುಲಿದು
        ನೆಗೆಯಲಿರುವ ಕಲಿಗಳು.

ಕಷ್ಟಪಟ್ಟು ದುಡಿದರೂನೆ
        ನಮಗೆ ಕೂಳು ದೊರೆಯದು
ದುಡಿಯದಿರುವ ಯಜಮಾನರ
        ಮಜವ ಹೇಳ ತೀರದು.

ದೈವ ಮತವ ಮುಂದೆ ಮಾಡಿ
        ನಮಗೆ ಮೋಸ ನಡೆದಿದೆ
ಅನ್ಯಾಯಕೆ ಅನ್ಯಾಯ
        ಮುಯ್ಯಿಗೆ ಮುಯ್ ಮುಂದಿದೆ.

ಉಪದೇಶವು ನಮಗೆ ಬೇಡ
        ಬೇಕು ನಮಗೆ ಅನ್ನವು
ಗುರುವುಗಿರುವು ನಮಗೆ ಬೇಡ
        ಬೇಕು ವಸತಿ ವಸನವು.

ಭಯಭೀತಿಯ ಬೇರುಸಹಿತ
        ಕಿತ್ತು ಮುಂದೆ ನಡೆವೆವು
ವಿಷಜಂತುವ ಹುಡುಕಿ ತಡಕಿ
        ಹಿಡಿದು ತಂದು ಕಡಿವೆವು.

ಅಂಬೇಡ್ಕರ್

ನಾಡನಡುವಿನಿಂದ ಸಿಡಿದ
        ನೋವಿನ ಕೂಗೇ
ಆಕಾಶದ ಅಗಲಕ್ಕೂ
        ನಿಂತ ಆಲವೆ.

ಕೋಟಿ ಕೋಟಿ ಕಪ್ಪು ಜನರ
        ಮೊಟ್ಟ ಮೊದಲ ಮಾತೇ
ನೀರಿನಾಚೆ ಮೋಡದಾಚೆ
        ಮೊಳಗಿದಂಥ ಘೋಷವೆ.

ಬಾಳಿನಲ್ಲೆ ಕಂಡುಕೊಂಡೆ
        ಹೋರಾಟದ ದಾರಿಯ
ಕರೆದು ಕರೆದು ತೋರಿಸಿದೆ
        ಮಹಾಮನೆಯ ಬಿರುಕನು.

ಜಾತಿಯನ್ನು ಹೂತುಬಿಡಲು
        ಲಕ್ಷ ಲಕ್ಷ ಜನರನು
ಕಟ್ಟಿ ಕ್ರಿಯಾರಂಗಕಿಳಿದ
        ಸ್ವಾಭಿಮಾನ ಸಮುದ್ರ.

ಮಹರಾಷ್ಟ್ರದ ಮಣ್ಣಿನಲ್ಲಿ
        ಮೂಡಿಬಂದ ಗುಡುಗುಸಿಡಿಲೆ
ಮಳೆಯನೇಕೆ ತಾರಲಿಲ್ಲ
        ಮಿಂಚು ಮಾಯ ಅಷ್ಟೆಯೆ?

ಅಭಿಮಾನದ ನೇಗಿಲಿಂದ
        ಬಂಜರು ನೆಲ ಉತ್ತವನೆ
ಪಾತಿಮಾಡಿ ನಾಟಿಹಾಕಿ
        ಬೆಳೆಯ ಕಾಣದೋದವನೆ.

ಕಪ್ಪುಕ್ಕಿನ ಕೋಳಗಳನು
        ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
        ಮಹಾಬೌದ್ಧ ಭಿಕ್ಷುವೆ

ಮಲಗಿದ್ದವರ ಕೂರಿಸಿದೆ
        ನಿಲಿಸುವವರು ಯಾರೋ ?
ಛಲದ ಜೊತೆಗೆ ಬಲದ ಪಾಠ
        ಕಲಿಸುವವರು ಯಾರೋ?

ಒಂದು ದನದ ಪದ

ಗೊಂತಿನ ಮುಂದೆ ನಿಲಿಸವುರೆ
        ಗೂಟಕೆ ನನ್ನ ಕಟ್ಟವರೆ
ಹಿಡಿಹಿಡಿ ಒಣಹುಲ್ಲು ಹಾಕಿ ತಾನೆ
        ಮೆಚ್ಚಿಕೊಳ್ಳುತಾನೆ
ದೇವರಂಥ ಮನುಷ ನನ್ನೊಡೆಯ
        ನನ್ನ ಬೆನ್ನ ಮ್ಯಾಲೆ ಬಾಸುಂಡೆ ಬರೆಯ ನೋಡಿ
ತನ್ನ ಬಲಕೆ ತಾನೆ ಮೆಚ್ಚಿಕೊಳ್ಳುತಾನೆ
        ರಾಜನಂಥ ವ್ಯಗುತಿ ನನ್ನ ಧಣಿ
ಕೊಟ್ಟೆಗೇಲಿ ಕಟ್ಟಿ ನನ್ನ ಮಾತೆ ಮಾತೆ ಅನ್ನುತಾರೆ
        ಮಾತಿಗೊಂದು ತೂಕಬ್ಯಾಡವ ?
ಗಟ್ಟಿಹಾಲ ಕರೆದರೂನೆ ಹಾಲಿಗೆಲ್ಲ ನೀರಬೆರಸಿ
        ಮಾರುತಾರಲ್ಲೊ ಮುಂದೇನೆ ಮಾರುತಾರಲ್ಲೊ
ಗಾಡಿದೊಂದು ಮರದ ತೂಕ ಇವರದೊಂದು ಭೀಮತೂಕ
        ಹೆಜ್ಜೆಹಾಕೊ ಬಸವಣ್ಣ ಅನ್ನುತಾರಲ್ಲೊ
ಶಂಕರಾತ್ರಿ ಹಬ್ಬದೊಳಗೆ ಬೆಂಕಿಮ್ಯಾಲೆ ಹಾರಬೇಕು
        ತಿಗವತೊಳೆಯದಿದ್ದರೂನೆ ಕೊಂಬಿಗೆಲ್ಲ ಹೂವಸಿಗಿಸಿ
        ತಳ್ಳುತಾರಲ್ಲೊ ಬೆಂಕಿಗೆ ತಳ್ಳುತಾರಲ್ಲೊ.

ಹಾವುಗಳೇ ಕಚ್ಚಿ

ಆಕಾಶವ ಎತ್ತಿ ನಿಲಿಸಿ
ನೀಲಿಯಾಗಿ ನಿಂತವರೆ
ಕಪ್ಪುನೆಲದ ಕೆಂಪುಮಾಡಿ
ಬಾಳೆಯಾಗಿ ಅರಳಿದವರೆ

ಮುತ್ತಿನ ಮಳೆ ಹುಯ್ಯುವಾಗ
ಸಿಡಿಲುಬಡಿದು ಸತ್ತವರೆ
ಸೊಕ್ಕಿದವರ ಸುಟ್ಟುಬಿಡಲು
ಬೆಂಕಿಯ ಮಳೆಯಾದವರೆ

ನೆಲನೆಲದಲಿ ಜಲವುಕ್ಕಿಸಿ
ಬೆಳ್ಳಿ ಬೆಳೆ ಬೆಳೆದವರೆ
ದುಡಿದು ದುಡಿದು ಧೂಳಾದವರೆ
ಹಸಿವನುಂಡ ಜನಗಳೆ

ಯಜಮಾನರ ಬೆತ್ತಗಳಿಗೆ
ಭುಜಬೆನ್ನನು ತೆತ್ತವರೆ
ಬಂದೂಕದ ತುದಿಗೆದೆಯನು
ಒಡ್ಡುವವರೆ ಬನ್ನಿರಿ

ಮಂತ್ರಗಳಲಿ ಮಲಗಿದವರೆ ಸತ್ಯಗಳಲಿ ಸತ್ತವರೆ
ಕಿಚ್ಚುಗಳೇ ಕೆರಳಿ
ಎಚ್ಚರವನು ತಪ್ಪಿದವರೆ ಮಚ್ಚರವನು ಮುಚ್ಚಿದವರೆ
ಹಾವುಗಳೇ ಕಚ್ಚಿ

ಸಾವಿರಾರು ನದಿಗಳು
೧೯೭೭

Blank

ಸಾವಿರಾರು ನದಿಗಳು

ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು.

ಕಪ್ಪು ಮುಖದ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ
ಇರುವೆಯಂತೆ ಹರಿವಸಾಲು ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗು ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ
ಊರತುಂಬ ಹರಿದರು
ಪಾತಾಳಕೆ ಇಳಿದರು
ಆಕಾಶಕೆ ನೆಗೆದರು.

ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿಮೆಳೆಯ ಮರೆಗಳಲ್ಲಿ
ಯಜಮಾನರ ಹಟ್ಟಿಯಲ್ಲಿ ಧಣಿಕೂರುವ ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು.
ಇವರು ಬಾಯಿ ಬಿಟ್ಟೊಡನೆ
ಅವರ ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ
ಅವರ ದನಿ ಇಂಗಿತು

ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ ಜನ
ಛಡಿಯ ಏಟು ಹೊಡೆದವರ
ಕುತ್ತಿಗೆಗಳ ಹಿಡಿದರು.

ಪೊಲೀಸರ ದೊಣ್ಣೆಗಳು ಏಜೆಂಟರ ಕತ್ತಿಗಳು
ವೇದಶಾಸ್ತ್ರ ಪುರಾಣ ಬಂದೂಕದ ಗುಡಾಣ
ತರಗೆಲೆಕಸಕಡ್ಡಿಯಾಗಿ
ತೇಲಿತೇಲಿ ಹರಿದವು
ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು.

ಬೆಳ್ಚಿಯ ಹಾಡು

ದೊಡ್ಡಗೌಡರ ಬಾಗಿಲೀಗೆ
        ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲುಕಯ್ಯಿ
        ಕಂಬ ಅವರ ಹಟ್ಟಿಗೆ

ಅವರ ಬೇಟೆಗೆ ನಾವು ಮೊಲಗಳು
        ನಮ್ಮ ಬಾಳೇ ಬಂಗಲೆ
ಅವರ ಬಂಗಲೆಯಂಗಳಕ್ಕೆ
        ನಮ್ಮ ರಕ್ತದ ರಂಗಾಲೆ

ಅವರ ತೋಟದ ತೆಂಗಿನಲ್ಲಿ
        ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
        ಕೂಲಿ ಹೆಣ್ಣಿನ ಕಣ್ಣೀರು

ಯಾವ ಪಾಪವ ಮಾಡಲಿಲ್ಲ
        ಯಾರ ತಲೆಯನು ಹೊಡೆಯಲಿಲ್ಲ
ಕರಗಿ ನಮ್ಮಯ ಬಾಳಕತ್ತಲು
        ಕಾಣಲಾರವೆ ಹಗಲನು.

ಕೆಂಪು ಸೂರ್ಯ

ಎಲ್ಲಿದ್ದರೋ ಅವರು ಯಂಗಿದ್ದರೊ ಅವರು
ಎಚ್ಚೆತ್ತ ಸಿಂಹಗಳು ನನ್ನ ಜನರು
ಎಷ್ಟು ಲೋಕದ ಕನಸ ಕಾಣುತ್ತಿದ್ದರೊ ಅವರು
ಎದ್ದ ಬಿರುಗಾಳಿಗಳು ನನ್ನ ಜನರು

ಯಾವ ಮಾಯದ ನಿದ್ದೆ ಕವಿದಿತ್ತು ಇವರನ್ನು
ಯಾವ ಉಕ್ಕಿನ ಸರಳು ಬಿಗಿದಿತ್ತು ಇವರ
ಯಾವ ಬಣ್ಣದ ಬೀಗ ಮುಚ್ಚಿತ್ತು ಬಾಯನ್ನು
ಯಾವ ಮೋಡದ ಹಿಂಡು ತಡೆದಿತ್ತು ಬೆಳಕ

ಸಾಹುಕಾರರ ಬಲೆಗೆ ಪಾರಿವಾಳಗಳಂತೆ
ಸಿಕ್ಕಿ ಸುಸ್ತಾದಂಥ ನನ್ನ ಜನರು
ಎಲ್ಲರೂ ತಲೆಯೆತ್ತಿ ಬಲೆಯೊಡನೆ ಹಾರಿದರು
ಎದುರಾದ ಮೋಡಗಳ ಸೀಳಿಕೊಂಡು

ದಟ್ಟ ಅಡವಿಯ ನಡುವೆ ಬಿದ್ದಂಥ ಬೀಜಗಳು
ಹೂವಾಗಿ ಊರೊಳಗೆ ಬಂದವಲ್ಲೊ
ಹೂವ ಮುಡಿಯುವ ಧೈರ್ಯ ಊರ ದೇವತೆಗಿಲ್ಲ
ಕ್ರಾಂತಿ ಕನ್ಯೆಯ ಕಣ್ಣ ಸೆಳೆದವಲ್ಲೊ

ಇಪ್ಪತ್ತು ಅಂಶಗಳ ಒಪ್ಪೊತ್ತಿನೂಟದಲಿ
ಸೊರಗಿ ಉಚ್ಚಳ್ಳು ಕಡ್ಡಿಯಾಗಿ
ಬೆಂದು ಬಳಲಿದ ಜನರು ಕೆಂಪು ಸೂರ್ಯನ ಕಂಡು
ಹಬ್ಬದೂಟಕೆ ಎದ್ದು ನಿಂತರಲ್ಲೊ.

ದಲಿತರು ಬರುವರು

ದಲಿತರು ಬರುವರು ದಾರಿಬಿಡಿ
ದಲಿತರ ಕೈಗೆ ರಾಜ್ಯ ಕೊಡಿ

ಕೋಟಿ ಕೋಟಿ ಕನಸುಗಳೊಂದಿಗೆ
ಹತ್ತಿ ಉರಿಯುವ ಮನಸುಗಳೊಂದಿಗೆ
ಗುಡುಗು ಮಿಂಚಿನ ಘೋಷಣೆಯಲ್ಲಿ
ಭೂಕಂಪನಗಳ ಭಾಷೆಗಳಲ್ಲಿ
ಬಂತೋ ದಲಿತರ ಮೆರವಣಿಗೆ
ನೆಲಕೆ ಕಾಲುಗಳ ಬರವಣಿಗೆ

ದೇವರು ಗುರುಗಳ ತಿಪ್ಪೆಗೆ ತಳ್ಳಿ
ಮಂತ್ರಿ ಶಾಸಕರ ಮೋರಿಗೆ ನೂಕಿ
ತಾವೇ ಕಂಡ ಹೊಸ ದಾರಿಯಲಿ
ಹೊಂಟರು ದಲಿತರು ಮೆರವಣಿಗೆ
ಉರಿಯುವ ಪಂಜು ಕೈಯಲ್ಲಿ
ಕ್ರಾಂತಿಯ ಕಿಡಿಗಳು ಕಣ್ಣುಗಳಲ್ಲಿ
ಸಿಡಿದರು ಕೆಂಡದ ಉಂಡೆಗಳು

ಜಾತಿಮತಗಳ ಮುಳ್ಳಿನ ಮೆಳೆಗೆ
ಮುಳ್ಳಾದರು ಇವರು
ತಮ್ಮನು ನುಂಗಿದ ಏಳು ಸಮುದ್ರಕೆ
ಮುಗಿಲಾದರು ಇವರು

ರಾಮರ ಕಾಲ ಕೃಷ್ಣರ ಕಾಲ

ಗಾಂಧಿ ಗಾಂಧಿಗಳ ಕಾಲಗಳಿಂದ
ಕೈಮುಗಿಯುತ ತಲೆಬಾಗಿದ ದಲಿತರು
ಹೋರಾಟವನು ಮಾಡಿದರು.

ಬೆಳೆಯಿತು ಮೊಗ್ಗೊಡೆಯಿತು
ಕೊನೆಗಾಣದ ದಲಿತರ ಮೆರವಣಿಗೆ
ಗುಂಡಿಗೆ ಗುಂಡು ರಕ್ತಕೆ ರಕ್ತ
ಹೆಗಲಿಗೆ ಹೆಗಲು ಪ್ರಾಣಕೆ ಪ್ರಾಣಗಳು

ದಲಿತ ಭಾರತದ ಬಾವುಟದಲ್ಲಿ
ನಿಂತರು ರೈತರು ಕಾರ್ಮಿಕರು
ಬಿರಿವವು ಹೂವು ಬನಬನದಲ್ಲಿ
ಹಾರಿದೊ ಹಕ್ಕಿ ನೂರಾರು
ಕಂಡಿತು ಕೆಂಪು ಮೂಡಣದಲ್ಲಿ
ಬೆಳಗಾಯಿತು ಬಡವರಿಗೆ

ದಲಿತರು ಬರುವರು ದಾರಿಬಿಡಿ
ದಲಿತರ ಕೈಗೆ ರಾಜ್ಯಕೊಡಿ

ಬಿದ್ದಾವು ಮನೆಗಳು

ಬಿದ್ದಾವು ಮನೆಗಳು ಬಿದ್ದಾವು ಹೆಣಗಳು
ಬಿದ್ದಾವು ತೆಂಗಿನ ಗರಿಗಳು / ಅಣ್ಣಯ್ಯ
ಬಡವರ ಸಾವು ಆಯ್ತಲ್ಲೊ

ಗುಡಿಸಲು ಬೀಳುವಾಗ ಬಂಗಲೆ ನಗುತಿದ್ದೊ
ನಮ್ಮೂರ ಮೋರಿ ಹೆಣತುಂಬಿ / ಹರಿಯಿತು
ರಕ್ತದ ಕೋಡಿ ಊರೆಲ್ಲ

ಮಕ್ಕಳು ಮರಿಗಳು ಬಸರೀರು ಬಾಣಂತೀರು
ಇಲಿಗಳ ರೀತೀಲಿ ಚೆಲ್ಲಾಡಿ । ಹೋದರು
ಬಡವರ ಬಂಧುಗಳೆಲ್ಲವರೋ

ಮಡಕೇಗೆ ಕುಡಿಕೇಗೆ ಮನುಷರು ಸಮನಾಗಿ
ಬೀದಿಗೆ ಬಂದು ಬಿದ್ವಲ್ಲೊ । ಈವತ್ತು
ಮಣ್ಣಿನ ಕಣವಾಗಿ ಹೋದ್ವಲ್ಲೊ

ಬಡವರ ಹೆಸರೇಳಿ ಪಟ್ಟಕ್ಕೆ ಬಂದೋರು
ಬಡವರ ಚಟ್ಟವ ಕಟ್ಟೀಸಿ । ಮಣ್ಮಾಡಿ
ಗುಡಿಸಲುಗಳನುಂಗಿ ನಗುತಾರಲ್ಲೊ

ತುಳಿಯುವ ಜನರನ್ನು ಸುಮ್ಮನೆ ಬಿಡಲಾರೊ
ಮನೆಮನೆ ಮುಂದಲ ಗಿಡದಲ್ಲಿ । ನಾವೆಲ್ಲ
ಬರುತೀವಿ ಕೆಂಪನೆ ಹೂವಾಗಿ

ಕತ್ತೆ ಮತ್ತು ಧರ್ಮ

ಮಧುಗಿರಿ ಪಟ್ಟಣಕೆ ಸಿದ್ಧಯ್ಯನೆಂಬಗಸ
ಯಂಡರು ಮಕ್ಕಳಿಲ್ಲ ಏಕಾಕಿ । ಸಿದ್ದಯ್ಯ
ಕತ್ತೆಯೆ ಅವುನ ಒಡನಾಡಿ

ಕತ್ತೆಯ ಮೈ ತೊಳೆದು ಮುದ್ದಾಡಿ ಸಿದ್ದಯ್ಯ
ಒಂದೆ ಗಂಗಳದಲ್ಲಿ ಉಣ್ಣೋನು । ಸಿದ್ದಯ್ಯ
ಕತ್ತೆಯ ಮಗ್ಗುಲಲ್ಲಿ ಮಲಗೋನು

ಬಟ್ಟೆಯ ಹೇರಿಕೊಂಡು ಹೊಂಟರೆ ಬೀದಿಲಿ
ದೇವೇಂದ್ರನಾ ಕುದುರೆ ಸಮನಲ್ಲ । ರಾಜನ
ಪಟ್ಟದ ಆನೆಯು ಚಟ್ಟಂತು

ಸಿದ್ದಯ್ನ ಸಾಕುಮಗಳು ಕತ್ತೆ ಅನ್ನೋ ಸುದ್ದಿ
ಊರ ಬಾಯೀಗೆ ಎಲೆ ಅಡಿಕೆ । ಸಿದ್ದಯ್ಯ
ಕತ್ತೆ ಬಿಟ್ಟಿರಲಾರ ಅರುಗಳಿಗೆ

ಇಂಥ ಸಿದ್ದಯ್ಯನಿಗೆ ಬಂತಲ್ಲೊ ಕೇಡುಗಾಲ
ಬಟ್ಟೆಯ ಒಗಿವಾಗ ತಲೆಮ್ಯಾಲೆ । ಕಾಗೆನುಗ್ಗಿ
ಮನೆಯಲ್ಲಿ ಗವುಳಿ ಲೊಚ ಲೊಚ

ಎದ್ದಾನು ಸಿದ್ದಯ್ಯ ಕತ್ತೇಯು ಏಳ್ಳಿಲ್ಲ
ಹೊಟ್ಟೆಯು ಊದಿ ಮಯ್ಯೆಲ್ಲ । ತಣ್ಣಗಾಗಿ
ಶಿವ ತನ್ನ ಪಾದಕೆ ಕರುಕೊಂಡ

ಊರ ಸೀಳಾದೀಲಿ ಕತ್ತೇಯ ಮಣ್ಮಾಡಿ
ಗಂಧದ ಕಡ್ಡಿಯ ಹಚ್ಚವನೆ । ಸಿದ್ದಯ್ಯ
ತೆಂಗಿನ ಕಾಯ ಒಡದವನೆ

ಸಿದ್ದಯ್ನ ಗೋಳನು ಕೇಳೋರು ಯಾರಯ್ಯ
ಮನವೆಲ್ಲ ವಣಗಿ ಮರುಳಾಗಿ । ಸಿದ್ದಯ್ಯ
ಹೊರಟನು ದುಕ್ಕದಿ ದೇಸಾಂತರ

ಯಾಪಾರಕೊಂಟಿದ್ದ ದೂರಾದ ಜಯಶೆಟ್ಟಿ
ನೋಡಿದ ಸಿದ್ದಯ್ನ ಘನಪೂಜೆ । ಬಂದಿಲ್ಲಿ
ಕೈಮುಗದು ವಂಟನು ಯಾಪಾರಕೆ

ಶೆಟ್ಟೀಗೆ ಅವತ್ತು ಪ್ಯಾಟೇಲಿ ಸೌಭಾಗ್ಯ
ಬೆಳ್ಳಿಯ ಅಳಕೊಂಡ ಬಳ್ಳ ಬಳ್ಳ । ನಮ್ಮ ಶೆಟ್ಟಿ
ಬಂಗಾರ ಬಾಚಿಕೊಂಡ ಚೀಲ ಚೀಲ

ಮನೆಗೋಗೋ ದಾರೀಲಿ ಶೆಟ್ಟಿ ಗೋರಿಯ ಮುಂದೆ
ಕೈಮುಗದು ಬಿದ್ದು ನಮಸ್ಕಾರ । ಮಾಡಿಕೊಟ್ಟ
ದೇವರ ಕಂಬ ಅದಕೆಣ್ಣೆ

ಊರೂರ ಸುದ್ದೀಲಿ ಜನಕೆ ಭಕ್ತಿಯು ಹುಟ್ಟಿ
ಸೇರಿತು ಪರುಸೆ ಗೋರಿದೇವ್ರ । ಹೆಸರೇಲಿ
ಗುಡಿಯೊಂದು ನಿಂತಿತಲ್ಲೊ ಮುಗಿಲುದ್ದ

ಕೈಚಾಚಿ ಭಿಕ್ಷದೋರು ಮೈಚಾಚಿ ಸೂಳೇರು
ಭಕ್ತೀಲಿ ಕುಡದು ಕುಣಿಯೋರು । ಸೇರವ್ರೆ
ಬಿಳಿಟೋಪಿಯೋರ ಬೆಳಕೇಲಿ

ಪೂಜೇಗೆ ವೈದಿಕರು ದಾನಾಕೆ ಸಾವುಕಾರ್‍ರು
ಕತ್ತೆಗೋರಿಯ ಮೇಲೆ ಕೈಲಾಸ । ಹಬ್ಬಿತ್ತು
ರಾಜ ರಾಣಿಗೆ ಸುದ್ದಿ ಹೋಯ್ತು

ರಾಜ ಸುಂಗಾರವಾದ ರಾಣಿ ಸುಂಗಾರವಾದ್ಲು
ಕತ್ತೆಯ ಪೂಜೆಗೆ ಕುದುರೆಯ । ಏರಿಕೊಂಡು
ಬಂದರು ಗೋರಿಯ ದೇವರಿಗೆ

ದಾರಿ ದೇವರ ಕಂಡು ಧನ್ಯರಾಗಲು ಅಂದು
ರಾಜರಾಣಿಯ ಜೊತೆ ಪರಿವಾರ । ಹರಿದಿತ್ತು
ಕೂಡಿತು ಪರುಸೆ ಕಡಲಾಗಿ

ಗೋರಿ ದೇವರ ಮಹಿಮೆ ಕೊಂಡಾಟ ನೆಡಿವಾಗ
ತಳ್ಳಾಟ ಹೊರಗೆ ಆಗಿತ್ತು । ಕತ್ತಿಡಿದು
ತಳವಾರ್‍ರು ಸಿದ್ದಯ್ನ ತಳ್ಳುತಾರೆ

ದೇಸಾಂತ್ರ ಹೋಗಿದ್ದ ಸಿದ್ದಯ್ಯ ಕತ್ತೇಯ
ಹೂತ ಜಾಗವ ನೋಡೊ ಆಸೇಲಿ । ಬಂದವ್ನೆ
ಹುಡುಕುತ ನಿಂತವ್ನೆ ಹೂತಜಾಗ

ಈ ದೇಶದ ಸೆರೆಮನೆ

ಓ ಗೆಳೆಯ !
ಕೋಳ ತೊಡಿಸಿಕೊಂಡ ಸೋದರ
ಕನಸು ಚಿಂತನೆಯ ಕಗ್ಗೊಲೆಯ ಈ ಮನೆಯಲ್ಲಿ
ರಕ್ತ ಉಕ್ಕು ದುಡಿಮೆಯ ಬಯಲಿನ ಮೇಲೆ
ಮುತ್ತು ಮೀನುಗಳ ಸಾಗರದ ತೀರದ ಮೇಲೆ
ದಂಡಿನ ಎಣ್ಣೆಯ ಬಂದರಿನಲ್ಲಿ
ಯುದ್ಧದ ಹಡಗುಗಳಲ್ಲಿ
ಭತ್ತ ಟೀ ಗೋದುವೆಯ ಭೂಮಿಯಲ್ಲಿ
ಕುರಿ ಮಂದೆಯ ಸಂದಿಗಳಲ್ಲಿ

ಓ ಗೆಳೆಯ !
ಕೋಳ ತೊಡಿಸಿಕೊಂಡ ಸೋದರ

ನಾವು :
ಬರಲಿರುವ ಬಿರುಗಾಳಿಯ ಕೂಡಿಕೊಂಡ ಮೋಡಗಳು
ಇದ್ದಕ್ಕಿದ್ದಂತೆ ಎದ್ದೇಳುವ ಬಿರುಗಾಳಿಯ ಸಂಗೀತಗಳು
ಗೆಜೆಲ್‌ಕಲೇ ಇವಿನ್ ಹಿಸಾರ್‌ಗಳ
ಕೊರೆಯುವ ಕತ್ತಲ ಕೋಣೆಯಲ್ಲಿದ್ದರೂ
ನಾವು ಸೊರಗಿದ ಸೆರೆಯಾಳುಗಳಲ್ಲ
ಬಂದಿಗಳೇ ಬೇರೆ ಸೆರೆಮನೆಗಳೇ ಬೇರೆ

ಈ ನೆಲದ ಬಂದಿಗಳು ಯಾರೆಂದರೆ :

ಕಾರ್ಖಾನೆ ಹೊಲಗಳಲ್ಲಿ ಸುತ್ತಿದ ಸರಪಳಿಗಳಲ್ಲಿ

ಯಜಮಾನರ ಸುಖಕ್ಕಾಗಿ ಜೀವಗಳನು ತೇದವರು
ಬೆವರು ಸುರಿಸಿ ಬೆಂದವರು
ಈ ನೆಲದ ಬಂದಿಗಳು
ಬಂದೂಕ ಬಂಗಾರದ ಗೂಢಚಾರರು
ಈ ದೇಶದ ರಾಜರು.
ಗುಡ್ಡೆಗುಡ್ಡೆಯಾಗಿ ಬಯಲಿನಲ್ಲಿ ಚೆಲ್ಲಿಹೋದ ಮನೆಗಳು
ಈ ನಾಡಿನ ನಿಜವಾದ ಜೈಲುಗಳು
ಸ್ವಾತಂತ್ರ್ಯದ ಕೂಗಿನಲ್ಲಿ ಮತ್ತು ಗುಲಾಮಗಿರಿಯಲ್ಲಿ
ಇಕ್ಕಟ್ಟಿಗೆ ಸಿಕ್ಕಿದೆ ಇರಾನ್

ಎಂದೆಂದೂ ನಾವು :

ಬಿರುಗಾಳಿಯ ಒಂದಾಗುವ ಮೋಡಗಳು
ನುಗ್ಗಿ ಬರುವ ಬಿರುಗಾಳಿಯ ರಭಸದ ಸಂಗೀತಗಳು
ಧಗಧಗಿಸುವ ಬೆಂಕಿಯ ಬೆಳಕಿನಲ್ಲಿ
ನಮ್ಮ ಚರ್ಮಕ್ಕಂಟಿದ ಗಾಯಗಳ
ಸುಡುವ ಎದೆಯ ಹಾಡಿನಲ್ಲಿ ಬಿಡುಗಡೆ
ಓ ರಕ್ತಸಿಕ್ತ ಪರಿವರ್ತನೆಯೇ
ಓ ಮುಂಗಾಣುವ ಕ್ರಾಂತಿಯೇ

---

* ಇರಾನಿನ ಕವಿ ಸುಲ್ತಾನಪರ್ ಅವರ ಕವಿತೆಯ ಭಾವಾನುವಾದ

ಕಂಡೆ ನನ್ನವಳ ಒಂದು ದಿವಸ

ಕೊಲೆಯ ಹಿಂದಿನ ರಾತ್ರಿ ಸೂರ್ಯ ಚಂದ್ರರ ಹಿಡಿದು
ಹಣದ ಪೆಟ್ಟಿಗೆಯಲ್ಲಿ ಕೂಡಿಟ್ಟರು
ಭಾರತದ ಬಾವುಟವ ಸುತ್ತಿ ಬಾಯಿಗೆ ತುರುಕಿ
ಕಿತ್ತುಕೊಂಡರು ಅವಳ ಮಾತುಗಳನು

ಕತ್ತಿಯನು ಹಿಡಿದವರು ಹತ್ತಾರು ಜನನುಗ್ಗಿ
ಎತ್ತಿಕೊಂಡರು ಅವಳ ಹಣ್ಣಿನಂತೆ
ಮುಖಕೆ ತುಬಕನೆ ಉಗಿಯ ಬೇಕೆನಿಸಿತವಳಿಗೆ
ಮುಖಗಳೇ ಇರಲಿಲ್ಲ ಬಂದವರಿಗೆ

ಸಪ್ತಸಾಗರವೆದ್ದು ಬರಸೆಳೆದುಕೊಂಡಂತೆ
ಕಾಮುಕರ ಸರಪಳಿಗೆ ಒಳಗಾದಳು
ಬೇಟೆಗಾರರು ಎಸೆದ ಬಲೆಯೊಡನೆ ಸೆಣಸುತ್ತ
ಪಂಜುಗಳ ಪಹರೆಯಲಿ ಮರೆಯಾದಳು

ಅವಳಿಟ್ಟ ಕಣ್ಣೀರು ತೊರೆಯಾಗಿ ಹರಿದರೂ
ನೂರು ನಾಲಗೆ ದಾಹ ತಣಿಸಲಿಲ್ಲ
ನದಿಯ ದಡದಲ್ಲೆಲ್ಲ ಮಾಂಸ ಖಂಡದ ಚೂರು
ಚಿಂದಿಯಾಯಿತು ಅವಳು ತೊಟ್ಟ ಬಟ್ಟೆ

ಅವಳ ಬಾಳಿನ ಬಳ್ಳಿ ಉಕ್ಕಿನಪ್ಪುಗೆಯಲ್ಲಿ
ರಕ್ತವನು ಬಸಿಬಸಿದು ನೆಲಕುರುಳಿತು
ಕತ್ತಲೆಯ ರಾಕ್ಷಸರು ಪಣಕಟ್ಟಿ ಆಡಿದರು
ಕಣ್ಣಿನುಂಡೆಗಳಲ್ಲಿ ಗೋಲಿಯಾಟ

ತಾಳಿಯನು ತೂಗಿದರು ಕುಡಿದು ಕೂಗಾಡಿದರು
ಮಾರವಾಡಿಯು ಅದಕೆ ಇಟ್ಟ ಬೆಲೆಗೆ
ಮಯ್ಯ ದಳಗಳನೆಲ್ಲ ಒಂದೊಂದನೇ ಹೊಸಗಿ
ಹೊತ್ತು ಹೊರಟರು ಅವಳ ಎತ್ತಲೋ ?

ಕಂಡೆ ನನ್ನವಳ ಒಂದು ದಿವಸ
ಕಂಡೆ ನನ್ನನು ನಾನೆ ಕನ್ನಡಿಯಲಿ

ಮುಖದ ಹುತ್ತದ ಮೇಲೆ ಕೆಂಪು ನಾಗರ ಹಾವು
ಹೆಡೆಯೆತ್ತಿ ಆಡುತಿದ್ದೊ
ಬತ್ತಿರುವ ಕಣ್ಣಿನಲಿ ಬೆಳ್ಳಿ ಬಾಕುಗಳರಳಿ
ಮುಗಿಲುದ್ದ ಬೆಳೆಯುತಿದ್ದೊ

ಕಪ್ಪು ಮಯ್ಯಲಿ ಕೆಂಪು ಗಂಗೆಯಮುನೆಯು ಹರಿದು
ಅವಳ ಬಾಯಿಯ ತುಂಬ ಬೆಂಕಿಯಿತ್ತು
ಊರ ಬೇಲಿಯ ಒಳಗೆ ಕೊಳಕು ಮಂಡಲ ಮಲಗಿ
ಅಂಗಾಂಗ ಧರಿಸಿತ್ತು ಬಿಳಿಯ ತೊನ್ನು

ಕಂಡ ಕಂಡಲ್ಲೆಲ್ಲ ಹುಲಿಸಿಂಹ ಚಿರತೆಗಳು
ಇವಳ ಮೈ ಸಿಗಿದದ್ದು ಯಾವ ಪ್ರಾಣಿ
ಎದ್ದು ನಿಂತಿವೆ ಯಾಕೊ ಮರ ಮಂಜು ಬಂಡೆಗಳು
ದಿಕ್ಕುಗಳ ತುಂಬಿರುವ ದನಿ ಯಾರದು

ಭಾರತ ದೇಶದ ಬೀದಿಯ ತುಂಬ
ಬೆಳ್ಳಿಬಾಕುಗಳ ಮೆರವಣಿಗೆ
ರಕ್ತದ ಕೊಳದಿಂದೀಚೆಗೆ ತೆಗೆದ
ಚಿಂದಿ ಬಟ್ಟೆಗಳ ಮೆರವಣಿಗೆ.

ಹೋರಾಟವೆ ದಾರಿ

ಕುಂತ ಮನೆಗಳೆ
ನಿಂತ ಜನಗಳೆ
ಕೇಳದೆ ಹೊಸನುಡಿ
ಕಾಣದೆ ಕೆಂಗಿಡಿ
ಹೋರಾಟವೆ ದಾರಿ
ಕೊನೆಗಾಣದ ಬಾಳಿನ ಗೋಳಿಗೆ
ಹೋರಾಟವೆ ದಾರಿ

ಭಿಕ್ಷಾನ್ನಕೆ ಕೈಯನು ಒಡ್ಡುವ
ಕೈಗಳು ಕೊಳೆಯುವವು
ಬೇಡುವ ನೀಡುವ ಜಾಲದಂತ್ಯದಲಿ
ಸೌಖ್ಯದ ನಾಡುದಯ
ಸಮಸೌಖ್ಯದ ನಾಡುದಯ
ಕಪ್ಪುಕತ್ತಲೆಯ ಕಗ್ಗವಿಯಲ್ಲಿ
ಕೆಂಪು ಬೆಳಕಿನ ಕಿರಣಗಳು
ಸರಪಳಿ ಕಿತ್ತ ಕೆಂಪು ದಾರಿಯಲಿ
ಕೋಟಿಕಂಠಗಳ ಸಾಲುಗಳು

ಕುಂತ ಮನಗಳೆ
ನಿಂತ ಜನಗಳೆ
ಕೇಳದೆ ಹೊಸನುಡಿ
ಕಾಣದೆ ಕೆಂಗಿಡಿ
ಹೋರಾಟವೆ ದಾರಿ
ಕೊನೆಗಾಣದ ಬಾಳಿನ ಗೋಳಿಗೆ
ಹೋರಾಟವೆ ದಾರಿ.

ನಿನ್ನ ಮಗನ ಕೊಂದರು

ಓ ಗೆಳತಿ ವ್ಲಾಸೋವ ನಿನ್ನ ಮಗನ ಕೊಂದರು
ಹೋರಾಟದ ಜೀವಿಯನ್ನು ಒಡನಾಡಿ ಬಂಧುವನ್ನು
ನಿನ್ನ ಮಗನ ಕೊಂದರು

ಅವನಂಥ ಮೈಕೈಗಳು ಕಟ್ಟಿದಂಥ ಗ್ವಾಡೆ ತಾವು
ಬಿಸಿಲೇರದ ಬೆಳಗಿನಲ್ಲಿ ನಿನ್ನ ಮಗನ ಕೊಂದರು
ಬೆವರ ಬಸಿದ ಅವನ ಎದೆಗೆ ಗುರಿಯಿಟ್ಟರು
ಗುಂಡಿಕ್ಕಿದರು

ಗುಂಡೊಂದೂ ಕಾಣಲಿಲ್ಲ ಕೊಲೆಗಡುಕರ ಕೆಲಸವೆಲ್ಲ
ಸತ್ತ ಮಗನ ಕಣ್ಣಿನಲ್ಲಿ ಮಿಂಚಿಮಾಯವಾಯಿತು.
ಹೊರಗಿನವರು ಕೊಲ್ಲಲಿಲ್ಲ ಎಲ್ಲ ಇವನ ಬಂಧುಬಳಗ
ನೆರೆಹೊರೆಯವರು

ಸುತ್ತಿದಂಥ ಸರಪಳಿಯಲಿ ಧರಧರಧರ ಎಳೆಯುವಾಗ
ಕ್ರಾಂತಿವೀರರೆಲ್ಲ ಬಂದು ಮುತ್ತಿಕೊಂಡರು.
ಗಿಟುಕಾಸಿದ ಗಿರಣಿಗಳು ಚಿಮಣಿ ಹೊತ್ತು ನಿಂತಿದ್ದೊ
ಅವನ ಕಾಲ ಮಿಂಚಿತ್ತು ಹೊಳೆಯಿತೇನೊ ಮನಸಿಗೆ
ಶೂನ್ಯವಾದ ಗಿರಣಿಗಳಲಿ ದಿನದಿನಕ್ಕೂ ಬೆಳೆಯುವಂಥ
ಬೆಟ್ಟದಂಥ ಶಕ್ತಿಯೊಂದು ಕಂಡಿತವನ ಕಣ್ಣಿಗೆ
ತೊಟ್ಟಿಕ್ಕಿತು ಕಣ್ಣೀರು ಹೋದನವನು ಮಣ್ಣಿಗೆ.

ಓ ಗೆಳತಿ ವ್ಲಾಸೋವ ನಿನ್ನ ಮಗನ ಕೊಂದರು
ಹೋರಾಟದ ಜೀವಿಯನ್ನು ಒಡನಾಡಿ ಬಂಧುವನ್ನು
ನಿನ್ನ ಮಗನ ಕೊಂದರು.

* ಬ್ರೆಕ್ಟ್ ಕವಿಯ ಹಾಡಿನ ಭಾವಾನುವಾದ

ಚೋಮನ ಮಕ್ಕಳ ಹಾಡು

ಕಾಲ ನೀಲ ಬೆಳ್ಳಿ ಗುರುವ ಚೆನಿಯ
ಚೋಮನ ಮಕ್ಕಳು ನಾವುಗಳು

ಕಣ್ಣಿನ ಒಳಗೆ ನೋವಿರುವವರು
ಮಣ್ಣಿನ ಒಳಗೆ ಮುಖವಿಟ್ಟವರು
ತಾಯಿಯನಗಲಿದ ಮಕ್ಕಳು ನಾವು
ನೋವನಪ್ಪಿದವರು

ಉಕ್ಕಿನ ಮಯ್ಯಿ ಹೂವಿನ ಮನಸು
ಮೂಡುವ ಭೂಮಿಯ ಗೆಣಿಯ ಕನಸು
ಭೂತಾಯಿಯ ಮಲಮಕ್ಕಳು ನಾವು
ಚೋಮನ ಎಲುಬುಗಳು

ಒಡೆಯರ ಸುಂದರ ತೋಟದ ಒಳಗೆ
ಅರಳುವ ಹೂವಿನ ದಳದಳದಲ್ಲಿ
ಅಪ್ಪನ ಬೆವರಿನ ರಕ್ತವು ಸೋರಿ
ಕೆಂಪಾದವು ಹೂವು

ದಣಿಗಳ ಹಬ್ಬದ ಊಟಕ್ಕಾಗಿ
ಖಂಡವ ಕಿತ್ತು ಕೊಟ್ಟವರು
ನೆಲದಾಧಾರ ತಪ್ಪಿದ ಜನರು
ಮುಗಿಲಿನ ಆಸರೆ ಸಿಗದವರು

ಭೂಮಿ ಬೆಟ್ಟ ನೀಲಿಯ ಬಾನಿಗೆ

ನಮ್ಮಯ ನಾಡಿನ ಎಲ್ಲಾ ಜನತೆಗೆ
ಚೋಮನ ಹೆಸರು ಕಥೆಗೊತ್ತು
ಚೋಮನ ಮಕ್ಕಳೆ ಹೇಳುವ ಕಥೆಯನು
ಕೇಳಿರಿ ಸ್ವಾಮಿ ಈ ಹೊತ್ತು.

ಮಾತಾಡಬೇಕು

ಕತ್ತಾಳೆಯ ಮುಳ್ಳುಗಳು ಹಾಲಿಲ್ಲದ ಕಳ್ಳಿಗಳು
ಮೈಸಿಗಿಯುವ ಬಾಡಬಕ್ಕದ ಗಿಡಗಳು
ಇವುಗಳ ಜೊತೆಗೆ ಕೊಂಚ ಮಾತಾಡಬೇಕು

ಬಾಡಿಗೆ ಬೆಳಕಿನ ಚಂದ್ರನಿಗೆ ರವಷ್ಟು
ಪ್ರಶ್ನೆ ಕೇಳಬೇಕು
ಚಂದದ ಗುಲಾಬಿಯನ್ನು ಮುಳ್ಳುಗಳಿಂದ
ಬಿಡುಗಡೆ ಮಾಡಬೇಕು

ಜಲವಿಲ್ಲದ ಬಾವಿಗಳು ಮಾತಿಲ್ಲದ ಮಂತ್ರಿಗಳು
ಸೀಗೆಮೆಳೆಗಳು ಓಡಾಡುವ ಪೋಲೀಸರು
ಲೋಕವೇ ನಾ ನಿನ್ನ ನೋಡಬೇಕು
ಭಾಷಣಗಳಂತೆ ಬರುವ ಬಿಳಿ ಮೋಡಗಳಿಂದ
ತೊರೆ ಹರಿಯುವುದಿಲ್ಲ – ಹಸಿರು ಏಳುವುದಿಲ್ಲ

ಕಾಲ ಕಾಲಕ್ಕೆ ಬರದಂತೆ ಮಳೆಯನ್ನು ತಡೆಯುತ್ತಿರುವವರಾರು ?
ಕಾಮನ ಬಿಲ್ಲಿನಿಂದ ನಕ್ಷತ್ರಗಳನ್ನು ಕತ್ತರಿಸುತ್ತಿರುವವರಾರು ?
ಸೂರ್ಯನನ್ನು ಸೆರಗಿನಿಂದ ಮರೆಮಾಡಿಕೊಂಡು
ಕೆದರಿದ ಕತ್ತಲೆಯನ್ನು ಎತ್ತರಿಸುತ್ತಿರುವವರಾರು ?

ಮಾವುಹಲಸುಗಳ ಫಲಕಿತ್ತುಕೊಂಡು
ಹೆಣ್ಣೂ ಅಲ್ಲ – ಗಂಡೂ ಅಲ್ಲದ
ಆತ್ಮಗಳನ್ನು ಹುಟ್ಟಿಸುತ್ತಿರುವವರಾರು ?

ಲೋಕವೇ ನಾನಿನ್ನ ನೋಡಬೇಕು
ನಿನ್ನೊಡನೆ ಮಾತಾಡಬೇಕು.

ಮೆರವಣಿಗೆ

ಮಲಗಿದ್ದ ಜನವೆದ್ದು ದನಿಯೆತ್ತಿ ಮೊಳಗಿಸಿದ
ಧಿಕ್ಕಾರಗಳ ನಡುವೆ ಬೆಳೆದ ಚೆಲುವೆ
ನರಭಕ್ಷಕರ ಬಂಗಲೆಯಂಗಳದಲ್ಲಿ
ಕ್ರಾಂತಿ ಕಣ್ಣಾಗಿ ಅರಳಿದವಳೆ
ಹಾರಿದೆವು ಜೋಡಿ ಪಾರಿವಾಳಗಳಾಗಿ
ತಡಿಕೆ ಗುಡಿಸಲ ಕೇರಿಮೇಲೆ
ನೇಗಿಲಿಗೆ ನೆಲವಾಗಿ ನೀರುಗೊಬ್ಬರವಾಗಿ
ಬಿತ್ತಿ ಬೆಳೆದೆವು ಕೆಂಡಗಳ ಫಸಲು

ನಾವು ಆಡಿದ ಮಾತು :
ಭೂಲೋಕವನು ಮೀರಿ ಹಬ್ಬಿತ್ತು ದೇವಲೋಕ
ಕೆಂಬಾವುಟವ ಹಿಡಿದು ಹೊಂಟಿತು
ದೇವರುಗಳದೊಂದು ದೊಡ್ಡ ಮೆರವಣಿಗೆ
ಮೋಡಗಳ ನಾಡಿನಲಿ ಮಿಂಚುಗಳ ಘೋಷಣೆ
ಗುಡುಗು ಸಿಡಿಲುಗಳ ಸೆರಗಿನಲಿ ಕಟ್ಟಿಕೊಂಡೆ

ಚುಕ್ಕೆಗಳ ಲೋಕದಲಿ ಚಿಕ್ಕವನು ನಾನು
ಬೆಳ್ಳಿಬನ ಬೆಳ್ಳಿಹೂ ಬಿಳಿಯ ಮಾತುಗಳು
ಬೆಳಕಂಡು ಬೆಳೆಯಬೇಕು
ಬಿಳಪಾಯ್ತು ಬಾವುಟದ ಬಣ್ಣ
ನಾನಾದೆ ಸಣ್ಣ ಸಣ್ಣ
ನೀನಂದು ಬಲತುಂಬಿದೆ
ಮುನ್ನಡೆಸಿದೆ

ದೇವಮಾನವರೆಲ್ಲ ಒಂದಾದರು
ಪಂತ್ ನಗರದ ಸೀಳು ನಾಯಿಗಳ ಹಿಡಿಯಲು
ಬೆಲ್ಚಿಯಲಿ ಅಡಗಿದ್ದ ರಾಕ್ಷಸರ ಕಾಣಲು
ಹೊಂಟಿತ್ತು ಮೆರವಣಿಗೆ ಸಾಲುಸಾಲು
ಕಾಡುಗಳು ಚಲಿಸಿದವು
ಬೆಟ್ಟಗಳು ಬಯಲಾದವು
ಹಕ್ಕಿ ಹಕ್ಕಿಗಳಲ್ಲಿ ಧಿಕ್ಕಾರ ಹೊಮ್ಮಿತ್ತು
ಹೂವುಗಳು ಹಾವಾದವು

ಈ ಸಾಗರದ ಕೂಗಿನಲಿ ನಿನ್ನ ದನಿಯಿಲ್ಲ
ಕ್ರಾಂತಿ ಕಣಿವೆಯಲೆಲ್ಲೊ ಮರೆಯಾದೆಯ ?
ಯಾರು ಎಳೆದರೆ ನಿನ್ನ
ಯಾರು ಸೆಳೆದರೆ ನಿನ್ನ
ನನ್ನಾಸೆ ಹಣ್ಣನ್ನು ಗಿಣಿಕಚ್ಚಿತೆ ?

ನೂರು ನೋವಿನ ಮರಳಿನಲ್ಲಿ
ಹರೆಯುತ್ತಿದ್ದ ಗಂಗೆಯೆ
ಹತ್ತಿ ಉರಿದವು ಜಾಜಿಮಲ್ಲಿಗೆ
ಉರಿಬಿಸಿಲು ಮುಂಗಾರಿಗೆ

ಹೆತ್ತ ಹೆಣಗಳು ನೆಟ್ಟ ಮುಳ್ಳುಬೇಲಿಯ ನೀನು
ನೆಗೆಯಲಾರದೆ ಹೋದೆಯ ?
ಒಂದಾದ ಮನಸುಗಳ ಪಾಲುಮಾಡಿದ ಜನರ
ಬಗೆಯಲಾರದೆ ಹೋದೆಯ ?

ಯಾರು ಯಾರೋ ಅವರು ?
ನನ್ನ ಮನಸಿನ ಕೊಂಬೆ ರೆಂಬೆಗಳ ಕಡಿದವರು
ಮಲ್ಲಿಗೆಯ ಬನಗಳಿಗೆ ಬೆಂಕಿಬರೆ ಎಳೆದವರು
ಹುಟ್ಟೂರ ಸುಟ್ಟವರು
ನನ್ನೆಲುಬುಗಳ ಕಿತ್ತು ನೆಕ್ಕಿ
ನಲಿದವರು ಯಾರೋ ?

ಬಂದಿರುವರು ಹುಲಿಗಳಾಗಿ

ಒಪ್ಪೊತ್ತಿನ ತುತ್ತಿಗಾಗಿ ತತ್ತರಿಸುವ ಮೈಗಳನ್ನು
ಸುಪ್ಪತ್ತಿಗೆ ಮಾಡಿ ಮೆರೆವ ದರಬಾರಿನ ಧೀರರೆ
ಘೋರ ಹೆರಿಗೆ ನೋವುಗಳಿಗೆ ಬಂಗಾರದ ಭರವಸೆಗಳ
ಕೊಟ್ಟು ಕಾಲನೂಕುವಂಥ ಅಧಿಕಾರದ ಮಿಂಡರೆ

ಬಡಜನಗಳ ಗುಂಡಿಗೆಗಳ ಇಟ್ಟಿಗೆಗಳ ಗಟ್ಟಿಮಾಡಿ
ಸೌಧಗಳನ್ನು ಕಟ್ಟುವಂಥ ಚುನಾವಣೆಯ ವೀರರೆ
ಇತಿಹಾಸದ ಕತ್ತಲೆಯಲಿ ಕಾಣದಾದ ಸತ್ಯಗಳನು
ಸುಟ್ಟು ಬೂದಿ ಮಾಡುವಂಥ ಸತ್ಯ ಹರಿಶ್ಚಂದ್ರರೆ

ಭಾಷಣಗಳ ಬಡಿಸಿದಿರಿ ಘೋಷಣೆಗಳ ಕುಡಿಸಿದಿರಿ
ಸಂಕಟಗಳ ಕಂಪನಕ್ಕೆ ಕೊನೆಯಿಲ್ಲವೆ ಹೇಳಿರಿ
ನಿಮ್ಮ ಬೇಟೆಯುತ್ಸವದಲಿ ಕುರಿಗಳಾಗಿ ಸತ್ತ ಜನರು
ಬಂದಿರುವರು ಹುಲಿಗಳಾಗಿ ಗರ್ಜನೆಯನು ಕೇಳಿರಿ.

ಅಲ್ಲೆ ಕುಂತವರೆ

ಪದ : ಒಂದಾನೊಂದು ಊರು
ಊರಿಗೆ ಮಳೆಯಿಲ್ಲಾ
ಬೂಟಿನ ಸದ್ದು ಗುಂಡಿನ ಸದ್ದು
ಕತ್ತಿಯ ತಿವಿತ ಕೂಗಾಟ
ಊರಿಗೆ ಬೆಳೆಯಿಲ್ಲಾ

ಮಳೆರಾಯ ಕ್ವಾಪದಲಿ ದೇಸಂತರಾ ಹೋಗಿ
ಅಂದಾವೆ ಹೋಯಿತಲ್ಲೋ
ನಗುತಿದ್ದ ಮಲ್ಲಿಗೆಯ ಮಕದಲ್ಲಿ ಕಳೆಗುಂದಿ
ಚಂದಾವೆ ಹೋಯಿತಲ್ಲೋ

ಬಡವನ ದನವೊಂದು ಸಗಣಿಯ ಇಕ್ಕದೆ
ನೆಲವ ತಾರಿಸಲಿಲ್ಲ
ಮದುವೆಯ ಮನೆಯಲ್ಲಿ ವಡವೇಯ ಮಾತೇರಿ
ಹಸೆಗೆ ಕೂರಿಸಲಿಲ್ಲ

ಅನ್ನ ನೀಡದೆ ಹೋದ ನೂರಾರು ದೇವರು
ಹೋದಾವು ಬಿದ್ದಾವು ಪಾಳುಬಾವಿ
ಅನ್ನ ನೀಡದ ದೊರೆಯ ದರಬಾರು ನಿರುವಾದು
ಬಡಜನ ಬುಡುತಾರೆ ಬಾಯಿ ಬಾಯಿ

ವಟ್ಟೆಗಿಲ್ಲದ ಜನರ ವಣನೆತ್ತಿ ಮ್ಯಾಲೇರಿ
ಕುಣಿಯುತ್ತ ಬರುತಾವೆ ಕರೆಬಾಣ
ಯಾರಾನ ಕದ್ದಾರೆ ಮರುಮಾತು ಕೊಟ್ಟಾರೆ

ಬಯಲಲ್ಲಿ ನ್ಯಡಸವರೆ ಕತ್ತಿವರಸೆ
ಸುತ್ತಮುತ್ತ ಹಸಿರು ಮಳೆ
ಬೆಳೆಯುತಾರೆ ಬೆಂಕಿ ಮಳೆ
ಕಪ್ಪು ಜನರ ತಲೆಯಮ್ಯಾಲೆ
ಬಿಳಿಬಿಳಿ ಮಡಕೆ
ಪಾತಾಳದ ಆಳದಲ್ಲಿ
ಭರವಸೆಗಳ ಕೋಳದಲ್ಲಿ
ನರಳುತಾದೆ ಉರುಳುತಾದೆ
ಜನರ ಜಂಗುಳಿ

ಈ ಬಾಳಿನ ಗೋಳನೆಲ್ಲ
ಗುಡಿಸು ಬಾರೋ ಮಳೆರಾಯ
ಆಕಾಸವ ಬಗೆದು ಬಾರೊ
ಸುಕ ಪ್ರೀತಿಯ ಬೆಳಕ ತೋರೋ
ಸುತ್ತ ಬಿಗಿದ ಬೇಲಿಯನ್ನು
ಬಿಳಿಸು ಬಾರೋ ಮಳೆರಾಯ
ಹುಯ್ಯೋ ಹುಯ್ಯೋ ಮಳೆರಾಯ
ಎದೆಗಳ ಕಡಲು ಬತ್ತೋದೊ
ಬಡವರ ಕಣ್ಣಲ್ಲಿ ನೀರಿಲ್ಲ
ಹುಯ್ಯೋ ಹುಯ್ಯೋ ಮಳೆರಾಯ

ಮಾತು : ಜನ ಸುತ್ತಮುತ್ತ ನೋಡ್ತರೆ
ಆಕಾಸ ನೋಡ್ತರೆ
ಬಡವರ ಮನೆ ಗುಂಡಿ ಬಿಂದ್ಗೆ
ಹಂಡೆ ಕಡಾಯಿಕಡ್ಗ ಎಲ್ಲ
ಯಜಮಾನ್ರ ಮನೆ ಸೇರ್ಕಂಡೊ
ರಾತ್ರಿ ಹಗ್ಲು ಅನ್ನಂಗಿಲ್ಲ
ಜೀವಕ್ಕೆ ಗ್ಯಾರಂಟಿ ಇಲ್ಲ
ಮೋಸಗಾರ್ರ ಮನೆ ಸುತ್ತ

ಜಮೀನ್ದಾರ್ರ ಮನೆ ಸುತ್ತ
ಗವ್ ಅನ್ನೋ ರಾತ್ರೆವಳ್ಗೆ
ಎಲ್ಲೆಲ್ಲೂ ಕಪ್ಪು ಜನ
ಡೋಲ್ ಬಡ್ಕಂಡು ಪದ ಯೇಳ್ತಾ ಅವ್ರೆ
ಮಳೇ ಬರ್ದೇ ಇದ್ರೇನೆ ಚಂದಾ
ಅನ್ನಂಗೆ ಕುಣೀತಾ ಅವ್ರೆ

ಪದ : ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ತ್ವಾಟಕೆ ನೀರಿಲ್ಲ
ಚಂಡೂವಿನ ತ್ವಾಟಕೆ ನೀರಿಲ್ಲ
ಬೀದಿಯ ನಲ್ಲೀಲಿ ನೀರಿಲ್ಲ
ನಲ್ಲೀಗ್ ಕುಡಿಯಾಕ್ ನೀರಿಲ್ಲ
ಬಾರಪ್ಪೋ ಮಳೆರಾಯ
ನೀ ಬಂದುಯ್ಯೋ ಮಳೆರಾಯ

ಮಾತು : ಜನ ಕಾಲಿಗಡ್ಗೆ ತಪ್ಲೆ ಯಿಡಕಂಡು
ಅನ್ನ ನೀರು ವುಡಿಕಂಡು
ಬೀದ್ ಬೀದಿ ಸುತ್ತಾ ಅವ್ರೆ
ಯಾರಾನ ಯಾವ್ದಾನ ಗ್ವಾಡೆ ಕೈಳಗೆ ಕುಂತಿದ್ರೆ
ಗಲ್ಲೀಲಿ ನಿಂತಿದ್ರೆ
ಓಡ್ ಬಂದು ಅವುರ್ನ ಗದುರ್ಸಿ
ಗ್ವಾಮಾಳೆ ಯಿಡ್ಡು
ಯಂಗುಸ್ರಾದ್ರೆ ಮಡ್ಲು ಕಾಯ್ ತಡ್ಕಿ
ಗಂಡುಸ್ರಾದ್ರೆ ಚಡ್ಡಿ ಜೋಬ್ ತಡ್ಕಿ
ಆಮ್ಯಾಲ್ ಬುಡೋರು ವಂದಷ್ಟು ಜನ
ಎಲ್ಲೆಲ್ಲೂ ಅವ್ರೆ ಅವ್ರ ಮಕವೆ

೨

ಒಂದಿ ಭರ್ರೋ ಅಂತ ಮಳೆ ಹುಯ್ತದೆ
ಕದ ಅಂಚಿನ ತೂತ್ನಿಂದ ಮಿಂಚು ಕುಕ್ತದೆ

ಗುಡ್ಡುಗ್ಗ ಸಿಡ್ಲು ವಡೀತದೆ ವಬ್ಬುರ್ಗ್ಗ ಕೇಳ್ಸಲ್ಲ
ಮಳೆ ಜ್ಯೋರಾಗಿ ಬೀದಿಗಲ್ಲೀಲೆಲ್ಲ ಆಳೆತ್ರ ಹರೀತಿದ್ದಂಗೆ
ಮನೆ ಮ್ಯಾಲೂ ನುಗ್ ಬುಡ್ತು
ನಾನಂತೂ ಬಟ್ಟೆತರಾ ನ್ಯಂದೋದೆ
ಮನೆ ಮ್ಯಾಗಳ ನೀರು ರವ ರವಷ್ಟೆ ಇಂಗ್ತಿದ್ದಂಗೆ
ಕದಾನ ಯಾರೊ ಬಡಬಡ ಬಡಿಯಾಕ್ ಸುರುಮಾಡುದ್ರು
ಅದ್ರ ಜತ್ಗೆ ಕಿಟ್ಗೆ ಸೂರಿನ ಅಂಚು
ಮನೇಲಿ ಇದ್ದ ಬದ್ದ ಕಂಚು
ದಡದಡ ಅನ್ನಾಕ್ ತಿರಿಕಂಡೋ
ಕಬ್ಬುಣದ ಬುಟುನ್ ಸದ್ದು
ಫಳಾರ್ ಅನ್ನೋ ಗುದ್ದು
ಮಳೆನೀರು ನನ್ ನೀರು
ನಾನು ನ್ಯಲುಕ್ ಕಚ್ಕಂಡ್ ಬುಟ್ಟೆ
ನತ್ತೀ ಮ್ಯಾಗಳ ಅಂಚು ಕದ ಕಿಟ್ಗೆ ಕಡೀಂದ
ನಾಲ್ಕ್‌ಜನ ನ್ಯಂದೋಗಿರೋ ಮನೇವಳೀಕೆ
ಪುದೀರ್ನೆ ತೂರ್ ಬಂದ್ರು
ವಬ್ಬೊಬ್ಬರ್ಗು ಮೂರು ಮೂರು ಕಣ್ಣು
ಕೆಂಪು ಬಿಳಿ ಹಸ್ರು ರವರವ ಉರಿತವೆ
ಬಂದೋರೆ ಕುಂತಿದ್ದೋನ್ ಮುಂಗೈಯಿಡ್ಕಂಡು
ಕೈ ಉಳ್ಕಂಗ್ ನುಲ್ಚಿ ತಾಂಕ್ಸೊ ಅಂದ್ರು
ಗುರ್ತು ಕೂನು ಇಲ್ದೋರು
ನಂಗೊಂದು ಗೊತ್ತಾಗ್ದೆ ಈಕ್ ಮೆಟ್ಟಂಗಾದೆ

ಪದ : ಐದು ವರ್ಷದ ಹಿಂದೆ ಓಟಿಗೆ ಬಂದೋರು
ನೋಟನ್ನು ಕೊಟ್ಟೋರು ಅಲ್ಲವೇನೋ
ಕೊಟ್ಟ ಸಾಲವ ಜನರು ಯಿಂದಕ್ಕೆ ಕೊಡದಿರಲು
ಕೈಕಾಲು ಮುರಿಯೋರು ಅಲ್ಲವೇನೋ

ಮಾತು ಕೇಳದ ಜನರು ನೇತು ಹಾಕಲು ಮರಕೆ

ಹಾವಿನ ಹಗ್ಗವ ತಂದವರು
ಮಂತ್ರಿ ಮಾನ್ಯರ ಜೊತೆಗೆ ತಂತ್ರವ ಮಾಡೋರು
ಚೂರಿಯ ಗೆಳೆಯರು ಅಲ್ಲವೇನೋ

ಗಾಂಧಿ ಮಹಾತ್ಮನ ವಾರಸುದಾರರು
ರಾಮ ನಾಮವ ಜಪಿಸಿ ಬಂದರಲ್ಲೊ
ಕಚ್ಚೆ ಟೋಪಿಯ ಒಳಗೆ ಹೆಗಲ ಜೋಳಿಗೆ ತುಂಬ
ಬಡವರ ತಲೆಗಳ ತಂದರಲ್ಲೊ

ಮಾತು : ವಂಡು ಅಂತ ಕೈ ಸನ್ನೆ ಮಾಡದ್ರು
ನಾ ಏಳ್ಳಿಲ್ಲ ತಲೆ ಅಳ್ಳಾಡುಸ್ದೆ
ಅವ್ರು ರುದ್ದರಗ್ವಾಪಾ ತಾಳಿ
"ನಡ್ ನಡಿಯಲೇ" ಅಂತ
ಕಿವಿ ಪೋಟೋಗಂಗೆ ಭೂಮಿ ವೋಳಾಗಂಗೆ
ಕಿರಚಿದ್ರು
ಯಲ್ಲ ರೇಡಿ ಮೈಕು ಪಿಚರ್ರೆಲೆಲ್ಲ ಮಳಗ್ದಂಗಾಯ್ತು
ಬಿಳೀಕರೀ ಪೇಪ್ರೆಲೆಲ್ಲ
ಇದೇನೆ ದಪ್ಪಕ್ಷರದಲ್ ಕಂಡಂಗಾಯ್ತು
ನಾನು ಗಡಗಡ್ನೆ ನಡಿಕಂಡು ಕ್ಯಳಿಕ್ ವೂತೋದೆ
ಹಚ್ಚಿರೋ ಸಿಗರೇಟ್ನ ಚುಚ್ಚಿ ಚುಚ್ಚಿ
ನನ್ ಮೈಲಿ ಸಿಡುಬಿನ ಗುರ್ತ್ ಮಾಡುದ್ರು
ಕಾಲುನ ಬೂಟ್ನ ಬಾಯಿಗ್ ತುರ್ಕಿ
"ನೆಕ್ಕೋದ್ ಕಲ್ತಕೋ" ಅಂತಾ ಅವ್ರೆ
ನಿಮ್ಮುನ್ನ ಮುಂದ್ವರ್ಸಕೇನೆ ನಾವ್ ಹುಟ್ಟಿರೋದು
ಅಂತ ಯಗುರ್ಸಿ ನನ್ ಮುಂದಲೆಗೆ ವದ್ರು
ನಾನು ಅವ್ರ ಕಾಲ್ನ ಪಟ್ಟಾಗಿ ಯಿಡ್ಡಿದ್ದೋನು
ಅವರ್ನೆ ದುರ್ಗುಟ್‌ಕಂಡ್ ನೋಡ್ದೆ
ಅವ್ರು ನನ್ನ ಅತ್ತಿಂದಿತ್ತ ಇತ್ತಿಂದತ್ತಾ
ವದ್ಕಂಡು ಚಂಡಾಟ ಆಡ್ತಾರೆ

ಈ ನನ್‌ನ ಮಕ್ಳು ಯಿಂಗಾದ್ರೆ ದಾರಿಗ್‌ಬರಲ್ಲ
ಅಂತ ವಳಗಿಂದ ಬೀದಿಗ್ ತಂದ್ರು
ಅಲ್ಲಿ ನಾಗ್ರಾವು ಹಸ್ರಾವು ಯಬ್ಬಾವುಂತರ
ನೀರು ನುಲ್‌ಕಂಡು ಹರೀತದೆ
ನನ್‌ನ ಮಯ್ಯಿಂದ ರಕ್ತ ಯಿಂಕಿಂಕ್ರಾನೆ
ತೊಟ್ಟಿಕ್ಕಿ ಹರ್‍ಯೋ ನೀರು
ಬಣ್ಣ ಏರ್ತಾ ಅದೆ
ಆದಿ ಬೀದೀಲಿ ಆಡೋ ಹುಡುಗರ ಪದ ಕೇಳುಸ್ತಾ ಅದೆ

ಪದ : ಬನ್ನಿರಿ ಆಯನ ಆನೇಕಲ್ಲ
ಬನ್ನಿರ ಆಡಾನ ನೀರಾಟ
ಗೆಳೆಯರೆಲ್ಲಾ ಕೂಡಾನ
ಕಪ್ಪೆ ಚಿಪ್ಪು ಆಡಾನ
ಕೈಲೇ ಬಾವಿ ತೋಡಾನಾ
ನೀರು ಬಂದಾವ ನೋಡಾನ
ಬನ್ನಿರಿ ಆಯನ ಆನೇಕಲ್ಲ
ಬನ್ನಿರಿ ಆಡಾನ ನೀರಾಟ
ಏನಿದೇನು ಚೀರಾಟ
ಏನೀದೇನು ಹೋರಾಟ

ಮಾತು : ಅಂಗನ್ನಂಡು ವುಡುಗ್ರೆಲ್ಲ
ಬಿದ್ದಂಬೀಳ ವಾಟವಡುದ್ಬುಟ್ರು
ಆಡ್ರು ಮಾಡೋ ಯಜಮಾನ್ರಂಗೆ
ನನ್ ತಗಂಡು ವೋಯ್ತಿದ್ದೋರು
ಏನೇನೋ ವಟಗುಟ್ತಾ ಅವ್ರೆ

"ರಗುಪತಿ ರಾಗವರಾಜಾರಾಮ್ ಪತೀತ ಪಾವನ ಸೀತಾರಾಮ್
ಸಬಕೋ ಸನ್ಮತಿ ದೇಬಗವಾನ್ ಈಶ್ವರ ಅಲ್ಲ ತೇರೇನಾಮ್"
ಅಂತಾ ಭಕ್ತಿ ಯೆಚ್ಚಾಗಿರೋರ್ ತರಾ ಯೇಳ್ತಾ ಅವ್ರೆ

ನಾನು ಧೈರ್ಯ ಮಾಡಿ
"ಸ್ವಾಮಿ ಬಡವರ್ ಮೇಲ್ ದಯಾ ದೇವ್ರುರ್ ಮ್ಯಾಲ್ ಭಕ್ತಿ
ಎಳ್ಡೂ ಇರೋ ನಿಮ್ಮಂತೋರು ಈ ತರ ಕ್ವಲೆ
ಮಾಡ್ಬ್ಯಾಡಿ ನನ್ ಬುಟ್ಬುಡಿ" ಅಂದೆ
ಅವ್ರುಕ್ವಾಪ ನತ್ತಿಗೇರಿ

"ಲೋಪರ್ದೇಸ್ ನನ್ ಮಕ್ಳ ವಟ್ಟಿಗಿಟ್ಟಿಲ್ಲ
ತಿಕ್ ಬಟ್ಟಿಲ್ಲ ಎಷ್ಟಲೇ ಕೊಬ್ಬು
ನಾವು ಯಿಂಜಿನ್ನು ನೀವ್ ಪೆಟ್ಟಿಕಳ್ಳೆ
ನಿಮ್ಮಂದೆ ನಾವ್ ನಮ್ಮಿಂದೆ ನೀವ್"
ಅಂತ ಜಾಡಿಸಿ ವದ್ರು
ಬೂಟ್ ಬಾಯ್ಗಿಕ್ಕುದ್ರು

ನನ್ನಿವ್ರು ಕುಯ್ದು ಪಾಲ್ ಆಕ್ತಾ ಅವ್ರೆ ಅನ್ನುಸ್ತು
ನನ್ ಎಳ್ಡ್‌ಕಯ್ಯಿ ಎಳ್ಡ್ ಕಾಲು
ಇಪ್ಪತ್ ಬೆಳ್ಳು ಸಾವ್‌ರಾರ್ ಕೂದ್ಲು
ಮೂಗು ಬಾಯಿ ಮೂವತ್ತೆಳ್ಡ್ ಹಲ್ಲುಗೊಳೆಲ್ಲ
ಗಾಳೀಲಿ ಆಕಾಸದ್ ತುಂಬಾ ಹಾರ್ತಾ ಅವೆ
ನನ್ ಮೂಳೇನ ಇವ್ರ ಬೂಟ್ಗುಳು
ತುಳ್ದು ಪುಡ್‌ಪುಡಿ ಮಾಡ್ತಾ ಅವೆ
ನನ್ಗೆ ರೋಸೋಯ್ತು
ಕಲ್ತಿದ್ದು ಕೇಳಿದ್ದು ಯಲ್ಲಾ ಮರ್‍ತೋಗಿ
ಉಳ್ಕಂಡಿತ್ತೊಂದೇ ಮಾತು
"ಧಿಕ್ಕಾರ ಧಿಕ್ಕಾರ"
ಅಂತ ಅವ್ರು ಯದ್ರಿ ಪದ್ರಗುಟ್ಟಂಗೆ ಕಿರುಚ್ ಬುಟ್ಟೆ
ಅವ್ರು "ಎಲಾ ಇವ್ನ" ಅನ್ನಂಡು
ಒಂದು ಉದ್ದಾಗಿರೋ ದಬ್ಬ ಟೈನಾದಾರ ತಗಂಡು
ಎಳ್ಡ್ ತುಟೀನು ಸೇರ್‍ಸಿ ವಲದ್ಬುಟ್ರು
ಬಾಯ್ ಬೀಗ ಹಾಕ್ಬುಟ್ರು

ಪದ : ಗ್ವಾಮಾಳೆ ಹಿಂಡುತಾರೆ
ತಲೆಬುಳ್ಡೆ ಜಜ್ಜುತಾರೆ
ಮಾತಿಲ್ಲದ ಗಂಟಲಿಗೆ
ವಲೆದುಕೊಂಡ ತುಟಿಗಳಿಗೆ
ಅದುಮಿ ಅದುಮಿ ತುರುಕುತಾರೆ
ಅನ್ನದ ಮಿದಿಕೆ
ಹುಟ್ಟಿದ ನಿರ್ವಾಣಕ್ಕೆ
ಸೆಣಬಿನೆಂಬ ಸುತ್ತಿಬಿಗಿದು
ದರದರನೆ ಎಳೆಯುತಾರೆ
ಕತ್ತಲೇಲಿ ಕೊಳ್ಳಿದೆವ್ವ
ಕೈಗಳಲ್ಲಿ ಬೆಳ್ಳಿಕತ್ತಿ
ಸುತ್ತ ನಿಂತು ಕುಣಿಯುತಾರೆ

ಮಾತು : ಕಾಡು ಕಲ್ಲು ಗಿಡ ಗುಡ್ಡ ಯಲ್ಲಾ ದಾಟದ ಮ್ಯಾಲೆ
ಒಂದು ಬಟ್ಟ ಬಯಲಿಗೆ ಯಳಕಂಬಂದ್ರು
ಆ ಬಯ್ಲಿನ ಸುತ್ತಮುತ್ತ ತರತರದ ತ್ವಾಟಗಳು
ತಗ್ಗಿ ಬಗ್ಗಿ ನಗ್ತ ನ್ಯಗೀತ ನಿಂತವೆ

ಪದ : ಅವ್ರು ಕತ್ತೀ ತ್ವಾಟಕೆ ಹೋದಾರು
ಅಲ್ಲಿ । ಚಿನ್ನದ ಕತ್ತಿ ತಂದಾರು
ಬಾಕಿನ ತ್ವಾಟಕೆ ಹೋದಾರು
ಬೆಳ್ಳಿ ಬಾಕ ತಂದಾರು
ಸೀಮೆಣ್ಣೇ ಬಾವಿಗಾಳು । ಅಲ್ಲಿ
ಬಂದೂಕ ಬೆಳೆದವರೆ
ದತ್ತೂರಿ ಗಿಡಗಳು । ಅಲ್ಲಿ
ಮದ್ದುಗುಂಡು ಉದುರುತಾವೆ

ಮಾತು : ಬಂದೋರೆ ಚಿನ್ನದ ಕತ್ತೀಲಿ ನನ್ ತಲೇನ
ನುಣ್ಣಗೆ ಬೋಳುಸ್ತಾರೆ

ರಕ್ತಾ ತೊಟ್ಟಿಕ್ಕಿರೋ ಹಣೆಗೆ ಮಂತ್ರ ಯೇಳ್ಕಂಡು
ಮೂರ್ ನಾಮಾ ಇಕ್ತಾ ಅವ್ರೆ
ನೇಣಾಕೋರಂಗೆ ಬಿಳೆ ಉರೀನ
ಜನ್ವಾರ ಅಂತ ಕುತ್ಗೇಗೆನ್ಯಾತಾಕ್ತಾ ಅವ್ರೆ
ನನ್ನ ಅಂತರ್ ಮಕನಾಗಿ ಮಲುಗ್ಸಿ
ಚಿನ್ನದ ಕತ್ತೀಲಿ ನನ್ನದೆ ಮ್ಯಾಗಳ
ಕೂದಲ್ನ ಬೋಳ್ಸಿ
ಬೆಳ್ಳಿ ಬಾಕೇಲಿ ಯದೇನ
ತೂತ್ ಮಾಡುದ್ರು
ರಕ್ತ ಬುಳಬುಳನೆ ಬತ್ತಿದಂಗೆ ವೋಡೋಗಿ
ಒಂದು ಸಸಿ ತಂದು ಅಲ್ಲಿ ನಟ್ ಬುಟ್ರು
ಆ ಸಸಿ ನನ್ ಮೈತುಂಬ ಬೇರ್ಬುಟ್ಟು ಅರಳ್ತಾ ಅದೆ
ಅದು ಬಲ್ತು ಕ್ವಂಬೆ ರ್‍ಯಂಬೆ ಅಣ್ಣು ಕಾಯಿ ವೂವ
ಬುಡ್ತಿದ್ದಂಗೆ ನನ್ನ ಉಸ್ರು ವಂಟೋಯ್ತು

ಪದ : ತೂಕ ತುಂಬಿದ ಟಗರು ನಾನು
ಕಾಲು ಯಿಂದಗಡೆ
ತೂಕವಿಲ್ಲದ ಟಗರು ನಾನು
ಕಣ್ಣು ನೆತ್ತೀಲಿ
ಕತ್ತಲೇಲಿ ಬತ್ತಲೇಲಿ
ನನ್ನ ಸಂಚಾರ
ಗುರುತು ಸಿಕ್ಕತಿಲ್ಲವಲ್ಲೊ
ನನ್ನ ಸವಕಾರ

ಮಾತು : ಒಂದಿನ ನಾನು ಸುಳ್ಕಾಡ್ತಿದ್ದೆ
ಕಣ್ಣಿಲ್ಲ ಕಾಲಿಲ್ಲ ಮೈಯಿಲ್ಲ ಉಸ್ರಿಲ್ಲ
ಅದೇ ಬಯ್ಲು ಅದೇ ಮರ
ಅಡೇ ಜನ ಗಿಟುಕಾಸ್ಕೊಂಬುಟ್ಟವ್ರೆ
ನಡ್ವೆದ್ವಡ್ಡಾಗೊಂದು ಸ್ಟೇಜ್ ಹಾಕವ್ರೆ

ಅದ್ರ ಮ್ಯಾಲೆ ದ್ವಡ್ ದ್ವಡ್ಡೋರು
ನಗ್‌ನಗ್ತಾ ಕುಂತವ್ರೆ
ಸುತ್ತಮುತ್ತ ಜನವೆಲ್ಲ ಮೂಳೆ ಚಕ್ಳ ಬುಟ್ಕಂಡು
ಕಚ್ಚರುಬೆ ಕಟ್ಕಂಡು
ಪದಾ ಯೇಳ್ತಾ ಅವ್ರೆ
ತಾಳಾ ಮೇಳ ಹಾಕ್ಕಂಡು
ಕುಣ್ದು ಕುಪ್ಪಳುಸ್ತಾ ಅವ್ರೆ

ಪದ : ಇವ್ರ ಸೇವೆ ದೊಡ್ಡಾದು
ಯಸ್ರಯೆತ್ತಿ ಕೊಂಡಾಡಿ
ಇವ್ರ ತ್ಯಾಗ ದೊಡ್ಡಾದು
ಸ್ಟೇಜಿನ ಮ್ಯಾಲಕೆ ಕರೆತನ್ನಿ
ಇವರ ಕಾರು ಬಂಗಾರ
ಗಂಧದ ಹಾರಾ ಹಾಕೀರಿ
ಇವರ ಬಂಗಾಲೆ ದೊಡ್ಡಾದು
ಸೀಟಿನ ದೂಳಾ ವರಸೀರಿ
ಇವರ ಜೇಬು ಅಗಾಲ
ಭಕ್ತಿ ಭಜನೆ ಮಾಡೀರಿ
ಇವುರ ಮಗಳು ದೊಡ್ಡೋಳು
ಮಾವ ದೇವ ಅನ್ನೀರಿ
ಇವ್ರ ಮೈಯಿ ದಪ್ಪಾದು
ಹೊತ್ತುಕೊಂಡು ಕುಣಿಯೀರಿ
ಮ್ಯಾಲ್ ಕುಂತಿರೋ ನಮ್ಮಪ್ಪದಿರ ಪಾದಕೆ ಗೋವಿಂದಾ
ಅವ್ರ ಯೆಂಡರ ಪಾದಕೆ ಗೋವಿಂದ
ಮಕ್ಕಳ ಪಾದಕೆ ಗೋವಿಂದ
ಅವ್ರ ತಾತನ ಪಾದಕೆ ಗೋವಿಂದ
ಮುತ್ತಾತನ ಪಾದಕೆ ಗೋವಿಂದ

ಮಾತು : ಈತರ ಇವ್ರು ಕುಣೀತಿದ್ರೆ

ಮ್ಯಾಲಿರೋರು ಇವುರನ್ನು ನೋಡಿ
ಆನಂದ ಪಟ್ಕಂಡು ತಲೆದೂಗ್ತಾ ಅವ್ರೆ
ಇವ್ರ ಭಯಾ ಭಕ್ತೀನ
ಮನಸಾರೆ ಮೆಚ್ಕೊತ್ತಾ ಅವ್ರೆ
ನಾನು "ಎಲಾ ಇವ್ನಾ !" ಅನ್ಕಂಡು
ಸ್ಟೇಜಿನತಕಾ ಹೋದೆ
ಅಲ್ಲಿ ದ್ವಡ್ ದ್ವಡ್ ಮನಸ್ರಯಿಂದ್ಗಡೆ
ಮರೇಲಿ ಯಾರೋ ಕುಂತಿದ್ರು
ಅವುರನ್ನ ನೋಡ್ದೇಟ್ಗೆ ನನ್ಗೆ
ಭೀತಿ ಬಡೀತು ಮಂಕು ಕವೀತು
ಅಲ್ಲೆ ದ್ವಡ್ಡ ಮನಸ್ರಿಂದೆ

ಪದ : ಅಲ್ಲೆ ಕುಂತವರೆ ಅವರು
ಅಲ್ಲೇ ಕುಂತವರೆ
ಬೇವಿನ ಸೊಪ್ಪು ಹಾಸವರೆ
ಬೇವಿನ ಸೊಪ್ಪು ಹೊದ್ದವರೆ
ಹಳೇ ಕ್ಯರವ ಕಾಯೀಸಿ
ಮಯ್ಯಿಗೆ ಬರೆಯ ಎಳೆಯೋರು
ಸೈಜುಕಲ್ಲು ಹೊರುಸೋರು
ಹುಣಸೆ ಮರಕೆ ಕಟ್ಟೋರು
ಅಲ್ಲೇ ಕುಂತವರೆ ಅವರು
ಅಲ್ಲೇ ಕುಂತವರೆ
ನಿಂಬೆ ಹಣ್ಣು ಮಡಗವರೆ
ಬಸುರೀ ಕಯ್ಯ ಮಡಗವರೆ
ಮೂಳೇ ಜೋಳಿಗೆ ಹಾಕವರೆ
ಮೀಸೆ ಮರೆಯಲಿ ನಗುತಾರೆ
ದೊಡ್ಡ ಮನುಷರ ಹಿಂದವರೆ
ಅಲ್ಲೇ ಕುಂತವರೆ ಅವರು
ಅಲ್ಲೇ ಕುಂತವರೆ.

Blank

ಕಪ್ಪು ಕಾಡಿನ ಹಾಡು
೧೯೮೩

Blank

ನನ್ನ ಕವನ

ಗುಡಿಸಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಈ ಕವನ

ಬದುಕ ಪ್ರೀತಿಸುವ ಬಡವರ ಮಗಳು
ನಿರಾಭರಣೆ ಕವನ
ಜನಗಳು ತಿನ್ನುವ ಅನ್ನದ ಅಗುಳು
ಜೀವ ನನ್ನ ಕವನ

ಚಿಮ್ಮಿ ಹರಿಯುವ ರಕ್ತದ ಕೋಡಿ
ಕೆಂಪು ಕಡಲು ಕವನ
ಹೆಣ್ಣು ತುಳುಕಿಸಿದ ಕಣ್ಣೀರಿನ ಹನಿ
ನನ್ನ ಪುಟ್ಟ ಕವನ

ಕಾಡಿನ ನಡುವೆ ಕಂಗೆಟ್ಟವರಿಗೆ
ಕಂಡ ದಾರಿ ಕವನ
ನಡುರಾತ್ರಿಯಲಿ ನಡುಗುವ ಜನತೆಗೆ
ಧೈರ್ಯ ಕೊಡುವ ಕವನ

ಮರಳುಗಾಡಿನಲಿ ಬೀಸುತಲಿರುವ
ಬಿರುಗಾಳಿ ನನ್ನ ಕವನ
ಅರಮನೆಯಲ್ಲಿ ಉರುಳುತಲಿರುವ
ಸಾವು ನನ್ನ ಕವನ

ಕುರಿಗಳ ಕಾಯುವ ಕುರುಬನ ಕೂಗು
ಜನರ ಮಾತು ಕವನ
ಸೋತ ರಟ್ಟೆಗಳ ಹೂತ ಕಾಲುಗಳ
ಬೆವರ ಹಸಿರು ಕವನ

ನನ್ನ ಜನದೊಡನೆ ನಾನಾಡಿದ ಮಾತು
ನಾನು ಕೊಡುವ ಕವನ
ನನ್ನ ಜನರ ನಾ ನೋಡಿದ ರೀತಿ
ನನ್ನ ಒಡಲ ಕವನ

ಬೆಂಗಳೂರಿನ ಹಾಡು

ಬೆಂಗಳೂರೇ ಎಂದು ಬಾಯಾರೆ ಕರೆಯೋರೆ
ಮೈತುಂಬ ವಡವೆಗಳು ಇರಬಹುದು ನನಗೆ
ನನ್ನ ಮೇಲಿರಬಹುದು ಎಲ್ಲ ಚೆಲುವರ ಕಣ್ಣು
ರಥ ಕುದುರೆ ಕಾಲಾಳು ಆನೆಗಳು ಸುತ್ತ

ನಮ್ಮ ಮದುವೆಗೆ ಮೊದಲು ಗಂಡ ಕೆಂಪೇಗೌಡ
ಹಾರುವರ ಹಟ್ಟಿಯಲಿ ಜೀತಕಿದ್ದ
ಚಿಂದಿ ದುಬಟಿಯ ಚೆಲುವ ತಂಗಳಿನ ಸರದಾರ
ದನದ ಕೊಟ್ಟಿಗೆಯಲ್ಲಿ ಮಲಗುತ್ತಿದ್ದ

ಏಳು ಲೋಕದ ನೋವು ಮೂಡುವಾಗೆದ್ದವನು
ದುಡಿಯುತಿದ್ದನು ಹೊತ್ತು ಇಳಿವತನಕ
ಹಿಪ್ಪನೇರಳೆ ಕಡ್ಡಿ ಹಣ್ಣು ತರಕಾರಿಗಳು
ಮಲ್ಲಿಗೆಯು ಕಿಕ್ಕಿರಿದು ಬೆಳೆವತನಕ

ಅಪ್ಪಣೆಯ ಕೊಟ್ಟ ಧಣಿ ಮೇಲುತೋಟವನೆಲ್ಲ
ಅಗೆದುಬಿಡು ನಾ ಬರುವ ವೇಳೆಯೊಳಗೆ
ಯಾವ ಕೀಲಿನ ನೋವೊ ಎಂಥ ಮಾಯದ ಮರೆವೊ
ನನಗಂಡ ತೋಟದಲಿ ಮಲಗಿಬಿಟ್ಟ

ಗಿಡಗಿಡವು ಹಾವಾಗಿ ನಾಗಲೋಕವು ಹುಟ್ಟಿ
ಬೇಲಿಗಳ ಮೇಲೆಲ್ಲ ಮಾಣಿಕ್ಯ ಚೆಲ್ಲಿ
ಏಳೆಡೆಯ ನಾಗರವು ನಿಂತು ನಾಂಟೇವಾಡಿ
ಮಲಗಿದ್ದ ಪತಿರಾಯ ಬೆಳಗುತಿದ್ದ

ಹತ್ತು ದಿಕ್ಕುಗಳಲ್ಲಿ ಮುತ್ತು ರತ್ನದ ದೀಪ
ಕಂಡ ಹಾರುವ ಹರಿದ ಬೆವರ ತೊರೆಯಾಗಿ
ಎಂಥ ಪುಣ್ಯವೊ ನಿನದು ಯಾವ ತಾಯಿಯ ಮಗನೊ
ನಾಗಪ್ಪ ಬಂದವನೆ ಕೆಂಪಯ್ಯ ಏಳೊ

ರಾಜ್ಯವಾಳುವ ಯೋಗ ನಿನಗುಂಟು ಕೆಂಪಣ್ಣ
ಎದ್ದು ನಿಲ್ಲೋ ರಾಜ ಕಟ್ಟಯ್ಯ ದಂಡು
ನೀನರಸನಾದಾಗ ನನ್ನ ಮಂತ್ರಿಯ ಮಾಡೊ
ಮುತ್ತಿಗೆಯ ಹಾಕಯ್ಯ ಕೊಳ್ಳಯ್ಯ ಕತ್ತಿ

ಸತ್ತ ಮಕ್ಕಳು ಎಷ್ಟು ಆದ ಮುಂಡೆಯರೆಷ್ಟು
ಎಷ್ಟಯ್ಯ ಕನಸೊಡೆದು ಹರಿದ ರಕ್ತ
ಮುರಿದ ಕೈ ಕಾಲುಗಳು ಮುರಿದ ತೊಲೆ ಕಂಬಗಳು
ಒಡೆದ ಹೊಂಗಳಸಗಳ ಲೆಕ್ಕವೆಷ್ಟು

ನನ್ನ ಗಂಡನ ಜೊತೆಯ ಜೀತಗಾರರ ಕಥೆಯು
ಯಾವ ಹಾಡಿನ ಒಳಗು ಮೂಡಲಿಲ್ಲ
ರಾಜ್ಯದಾಹದ ಬೆಂಕಿ ಊರೂರು ಸುಟ್ಟಾಗ
ಬೂದಿಯಾದರೊ ಅವರು ತಿಳಿಯಲಿಲ್ಲ

ನನ್ನ ಸೀರೆಯ ಸೆರಗು ಮರೆಮಾಡಿಕೊಂಡಿರುವ
ಜೋಪಡಿಯ ಲೋಕವನು ತೋರಲೇನು
ಹೊಟ್ಟೆಯೊಳಗಿನ ಬೆಂಕಿಯುಂಡೆಯೆಲ್ಲವನೆತ್ತಿ
ಮೆರೆವ ಜನಗಳ ಮೇಲೆ ಚೆಲ್ಲಲೇನು

ಸುಟ್ಟಾವು ಬೆಳ್ಳಿಕಿರಣ

ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ
ಸುಳಿದಾಡಬೇಡ ಗೆಳತಿ
ಚೆಲುವಾದ ನಿನ್ನ ಮಲ್ಲಿಗೆಯ ಮಯ್ಯ
ಸುಟ್ಟಾವು ಬೆಳ್ಳಿಕಿರಣ

ಇಳಿಜಾರಿನಲ್ಲಿ ಆ ಕಣಿವೆಯಲ್ಲಿ
ನೀ ಇಳಿಯ ಬೇಡ ಗೆಳತಿ
ತತ್ತರಿಸುವಂತೆ ಕಾಲಲ್ಲಿ ಕಮಲ
ಮುತ್ತುವವು ಮೊಲದ ಹಿಂಡು

ಈ ಊರ ಬನಕೊಬ್ಬಳೇ ಒಂಟಿ
ಹೂವಾಗಿ ಅರಳಿ ನೀನು
ಮರೆಯಾಗಬೇಡ ಮಕರಂದವೆಂದ
ದುಂಬಿಗಳ ದಾಳಿಯಲ್ಲಿ

ನನ್ನದೆಯ ತೋಟದಲ್ಲಂದು ನೀನು
ನೆಟ್ಟಂತ ಪ್ರೀತಿ ಬಳ್ಳಿ
ಫಲಕೊಟ್ಟಿತೇನೆ ಹೂ ಬಿಟ್ಟಿತೇನೆ
ಉಲ್ಲಾಸವನ್ನು ಚೆಲ್ಲಿ

ನಿನ್ನಂತರಂಗದಲ್ಲೊಂದು ನೋವು
ನಾನಾಗಿ ನಿಂತು ಬಿಟ್ಟೆ
ನೀನೊಪ್ಪಿಕೊಂಡ ಚಂದಿರನ ಕಣ್ಣ
ಬೆಳಕಾಗಿ ಕೂಡಿಕೊಂಡೆ

ನೀನಿತ್ತ ಒಲವು ನಾನಿತ್ತ ವಿಷವು
ಒಂದಾಗಲಾರವೆಂದು
ನೀ ಕೊಟ್ಟ ಜೀವ ನಾ ಕೊಟ್ಟ ಸಾವು
ಸಮನಾಗಬಹುದೆ ಗೆಳತಿ

ಕಂಡಂಥ ಕನಸು ಫಲಿಸಿತ್ತೆ ಗೆಳತಿ
ಕನಸಿತ್ತು ಕಡಲಿನಲ್ಲಿ
ತೆಂಗು ತಾರೆಗಳ ಸಂಗಮವು ಮುಗಿದು
ಮನಸಿತ್ತು ಮುಗಿಲಿನಲ್ಲಿ

ರಾಣಿಯ ಪ್ರೇಮ

ಉತ್ತರ ದಿಕ್ಕಿಗೆ ರಾಣಿಯೊಬ್ಬಳು
ಇದ್ದಳು ಬಲು ಹಿಗ್ಗಿ
ಎತ್ತರದಲ್ಲಿ ರಾಣಿ ಇದ್ದಳು
ಕಣ್ಣುಗಳಿಗೆ ಸುಗ್ಗಿ

ಆಳನು ಕರೆದಳು ಪಟ್ಟದ ರಾಣಿ
ಆಳು ಬಾರೊ ನನ್ನ
ಜೀತಗಾರನ ಜೊತೆಗೆ ಕರೆದಳು
ಪ್ರೀತಿ ಮಾಡೊ ನನ್ನ

ಆಳು : ಕೊಕ್ಕರೆಯೊಂದು ಮೀನ ಪ್ರೀತಿಸಿತು
ಈ ಪ್ರೇಮದ ಗುಟ್ಟೇನು
ಮಸೆದ ಕತ್ತಿಯು ಕೊರಳ ಪ್ರೀತಿಸಿತು
ಈ ಒಲವಿನ ಪರಿಯೇನು ?

ರಾಣಿ : ಮನದಾಳದ ನೋವೇರುತಲಿರುವುದು
ತಲೆಯ ತಿಕ್ಕು ಬಾರೋ
ಕಣ್ಣ ಕೊಳದಲ್ಲಿ ಮುಖವ ನೋಡುವೆನು
ಎದೆಯ ಹೊಕ್ಕು ಬಾರೋ

ಆಳು : ನೆಲ ಮುಗಿಲುಗಳ ಸಂಗಮವಿಲ್ಲ
ಪ್ರೀತಿಯ ಎಲ್ಲೆಯ ಅರಿತಿಲ್ಲ
ಹಂಗಿನ ಅರಮನೆ ಭಂಗದ ಗುಡಿಸಲು
ಮನಸುಗಳೊಪ್ಪಿ ಬೆರೆತಿಲ್ಲ

ಜೀತಗಾರನು ಜೀವ ಭಯದಲ್ಲಿ
ಊರ ಬಿಡುವೆನೆಂದ
ಬೇಲಿ ಮರೆಯಲ್ಲಿ ಹೆಣ ಬಿದ್ದಿತ್ತು
ನೋಡಿ ಪ್ರೇಮದಂದ

ದೋಣಿಯ ಹಾಡು

ನನ್ನೆದೆಯ ಬನದಲ್ಲಿ
ಹೂ ಬಳ್ಳಿಗಳ ತಳ್ಳಿ
ನದಿಯೊಂದು ಹರಿಯುತ್ತಿತ್ತು
ಶಿವಗಂಗೆ ತುಂಗೆ
ಕಾವೇರಿ ಕೃಷ್ಣೆ
ಏನೊ ಅದರ ಹೆಸರು

ಗಿಡದ ಮೊಗ್ಗುಗಳು ಅರಳಿ ನಕ್ಕವು
ಗಿರಿಯ ಸಾಲುಗಳಲ್ಲಿ
ರೋಮಾಂಚನ
ಹರಿವ ನದಿಗಳಿಗೆಲ್ಲ
ಹಗಲು ರಾತ್ರಿಗಳಿಲ್ಲ
ಎಲೆಯ ಉಲ್ಲಾಸಕ್ಕೆ ಎಲ್ಲೆ ಇಲ್ಲ

ತುಂಬಿ ಹರಿಯುವ ನದಿಯ ತುಂಬ
ಕುಣಿದು ಕುಪ್ಪಳಿಸುತ್ತ ಬಂತು
ಬಣ್ಣ ಬಣ್ಣದ ಹಾಡ ಹೊತ್ತ ದೋಣಿ
ಅಲೆಯ ತಲ್ಲಣದಲ್ಲಿ ನದಿಯ ನಗೆ ಏರಿತ್ತು
ಬಳ್ಳಿಗಳ ಮೈಯಲ್ಲಿ ಬೆಳದಿಂಗಳು

ಎದೆಯ ಹಕ್ಕಿಗಳು ಎಚ್ಚರವಾದವು
ಹಾಡಿನ ಮೋಡಿಗೆ ಬೆರಗಾಗಿ
ನಾಡಿನ ಜನಗಳು ಹುಚ್ಚರಾದರು
ಕತ್ತಲೆ ಕಳೆದು ಬೆಳಕಾಗಿ

ಎಲ್ಲೋ
ಭೂಲೋಕದಲಿ
ಯಾವ ಮೂಲೆಯ ಒಳಗೊ
ರಣವಾದ್ಯ ಮೊಳಗುತಿತ್ತು
ಮರಮರದ ಮೇಲೆಲ್ಲ ನೋವು ಕೂಗುತ್ತಿತ್ತು
ಸತ್ತವರ ನಿಟ್ಟುಸಿರು ಪ್ರೇತವಾಗಿ

ಮದ್ದುಗುಂಡಿನ ಹೊಗೆಯು ಹಬ್ಬಿಸಿದ ಧಗೆಯಲ್ಲಿ
ಮುಡಿದ ಮಲ್ಲಿಗೆಯೆಲ್ಲ ಬಾಡಿಹೋದೊ
ಕುಣಿವ ಕಾಲಿನ ಗೆಜ್ಜೆ ಕಳಚಿ ಬಿದ್ದಿತ್ತೆಲ್ಲೊ
ಹಾಡುಗಳು ನೀರಿನಲಿ ಚೆಲ್ಲಿಹೋದೊ

ಚೂರು ಚೂರಾಗಿತ್ತು ದೋಣಿ
ಮುರಿದು ಬಿದ್ದವು ಎಲ್ಲ ಕನಸು
ಹೇಳಲಾಗದ ಗೋಳಿನಲ್ಲಿ
ಬಾಳು ಬಿದ್ದಿತ್ತು

ಆ ನೀರಿನಲ್ಲಿ ತೇಲಿಬಂದೊ ಹೆಣ
ಮೇಲಾಡುತಿದ್ದೊ ಹಾವು
ನಕ್ಕ ಚುಕ್ಕಿಗಳೆಲ್ಲ ಕಲ್ಲಿದ್ದಲಾಗಿದ್ದೊ
ಎಷ್ಟೊ ಈ ಸಲದ ಸಾವು ?

ಮುರಿದ ಮನ ಇರಿದ ಎದೆ
ಕತ್ತಲೆಯು ಮುತ್ತಿರುವ ನಾಡಿನಲ್ಲಿ
ನನ್ನ ಒಲವಿನ ಹೂವ ಕಂಡಿರೇನು ?
ಈ ಮಣ್ಣಿನಲೆ ಮಿಂಚಿ ಪ್ರೀತಿಯಮೃತ ಹಂಚಿ
ಮರೆಯಾದ ದನಿಯನ್ನು ಕಂಡಿರೇನು ?

ನೆಲದ ನಗೆಯನು ನುಂಗಿ

ಹಾವುಗಳ ಹರಿದಾಟ
ಮಳೆ ಪೊದರುಗಳು ತುಂಬ
ಗಾಢ ಮೌನ

ನೆತ್ತಿಯನು ಎತ್ತಿದರೆ
ಹತ್ತಿ ಉರಿಯುವ ಮುಗಿಲು
ನನ್ನದೆಯ ನದಿ ಬತ್ತಿ ಒಣಗಿ ಹೋಗಿತ್ತು
ಉರಿದ ಹೂ ಬಳ್ಳಿಗಳ
ಬೂದಿ ಸುರಿದಿತ್ತು.

ನಿನ್ನ ಕಣ್ಣಿನ ಮಾತು

ಪ್ರೀತಿ ಎಂಬುದು ಗೆಳತಿ
ಮಿಂಚುಗಳ ಮಾಲೆಯೇನೆ
ಪಾರಿವಾಳದ ಎದೆಗೆ ಗುರಿಯಿಟ್ಟು ಬಿಟ್ಟ
ಬಾಣಗಳ ದಾಳಿಯೇನೆ

ಸೊಂಪು ನಿದ್ದೆಯ ಒಳಗೆ
ಬಿದ್ದ ಬೆಂಕಿಯ ಕೂಗು
ಮೈ ಹಿಡಿದು ಕೈ ಕುಲುಕಿ
ಸುತ್ತ ಕುಣಿಯುವ ಸಾವು
ನೊಂದ ಜೀವಕೆ ತಂಪು ತಾರೆಗಳ
ತೋರಿಸುವ ನಿನ್ನ ಹಾಡು
ಗುಡುಗಾಗಿ ಮೊಳಗುತಿತ್ತು
ಸುಖ ತರುವ ನಿನ್ನ ಮುಖ
ಏನಾಯಿತೋ ಕಾಣೆ
ಏಳು ಲೋಕಗಳಾಚೆ ಘೋರ ಬೆಟ್ಟಗಳಲ್ಲಿ
ಅಡಗಿರುವ ಅರಮನೆಯ
ಗುರುತು ಸಿಗಲಿಲ್ಲ

ಜಾತಿ ಜಾತಿಯ ನಡುವೆ
ನಿಂತ ಸಾಗರದಲ್ಲಿ
ನಮ್ಮ ಪ್ರೀತಿಯ ಹಡಗು ಮುಳುಗಿತಲ್ಲೆ
ತುಂಬೆ ತೆಂಗುಗಳ ಅಂತರವು ಹತ್ತಿರವೆ
ಗುಡಿಯ ಗೋಪುರದೊಡನೆ
ಜೋಪಡಿಯ ಗರಿಗಳಿಗೆ
ನಂಟಾಗಲಿಲ್ಲ

ಒಣ ಮರಳು ಕಾಡಿನಲಿ
ಹೂ ಅರಳಲಿಲ್ಲ
ಚುಕ್ಕೆ ಚಂದಿರ ಹಾಲು
ಚೆಲ್ಲಿಲಿಲ್ಲ
ಕೂಗಿ ಕುಣಿಯುತ್ತಿದ್ದ
ಕುಡುಗೋಲು
ಸುತ್ತಿಗೆಯು
ಉಳ್ಳವರ ಕುತ್ತಿಗೆಯ ಕತ್ತರಿಸಲಿಲ್ಲ

ಸುಟ್ಟ ಹೆಣಗಳ ಸಾಲು ಬಂದಾಗ ಮೆರವಣಿಗೆ
ಪುಟ್ಟ ಕಂದಮ್ಮಗಳ
ಚೀರಾಟಗಳ ನಡುವೆ
ನಿನ್ನ ಕಣ್ಣಿನ ಮಾತು ತಿಳಿಯಲಿಲ್ಲ

ಕೋರಿಕೆ

ಒಲವರಳಿದ ಆ ದಿನಗಳೆ ಹೂಗಳೆ
ಕಡಲ ತೀರಗಳೆ ಕಾಡದಿರಿ
ಬೆಳದಿಂಗಳು ತುಳುಕಾಡುವ ಹೊಳೆಗಳೆ
ಹಲವು ಬಣ್ಣಗಳೆ ಕಾಡದಿರಿ

ಇಲ್ಲವಾಗಿರುವ ಮಲ್ಲಿಗೆ ಕಂಪೇ
ಕತ್ತಲು ಕಳೆದ ಮಿಂಚಿನ ಹುಳುವೆ
ಒಂದುಗೂಡಿಸಿದ ಸೀಳು ದಾರಿಗಳೆ
ಕಳೆದ ಹಾಡುಗಳೆ ಕಾಡದಿರಿ

ದುಗುಡದ ದುಮ್ಮಾನದ ಮನಸೇ
ಅನುಮಾನದ ಬಿಗುಮಾನದ ಕ್ಷಣವೇ
ಎಣಿಸಿದ ಮುಗಿಲಿನ ಚುಕ್ಕೆಯ ಹಿಂಡೇ
ಎದೆಯ ಹಕ್ಕಿಗಳೆ ಕಾಡದಿರಿ

ಜಲವಿಲ್ಲದ ಈ ಭೂಮಿಯ ಮೇಲೆ
ಸಾವು ಹಸಿವುಗಳೆ ಅಲೆಯದಿರಿ
ಬಲವಿಲ್ಲದ ಈ ಬಳ್ಳಿಯ ಮೇಲೆ
ಘೋರ ವೃಕ್ಷಗಳೆ ಎರಗದಿರಿ

ಹಳ್ಳತಿಟ್ಟುಗಳೆ ಹೊಕ್ಕ ಮುಳ್ಳುಗಳೆ
ನಗೆಯ ಬಗೆಗಳೇ ಕಾಡದಿರಿ
ಬಿರುಗಾಳಿಯ ತಂಗಾಳಿಯ ಪಯಣವೆ
ನೆನಪಿನ ನದಿಗಳೆ ಕಾಡದಿರಿ

ಬಾಳ ರಮ್ಯತೆಯ ಚಿಮ್ಮಿಸಿ ಹಾರುವ
ಹಳದಿ ಚಿಟ್ಟೆಗಳೆ ಕಾಡದಿರಿ
ಯಾವ ಬನದಲ್ಲೂ ಉತ್ತರವಿಲ್ಲದ
ಒಡೆಯದ ಒಗಟೇ ಕಾಡದಿರಿ

ಪ್ರಾಣದ ಹರಣದ ಗಳಿಗೆಯ ಒಳಗೆ
ನೀಲಿ ತಾವರೆಯೆ ಅರಳದಿರಿ
ಎಲ್ಲೆಲ್ಲು ತುಂಬಿದ ನೋವಿನ ಒಳಗೆ
ಗುಲಾಬಿ ವನಗಳೆ ಸುಳಿಯದಿರಿ

ಕಪ್ಪು ಕಾಡಿನ ಹಾಡು

ಹರಕೆ ಹೊತ್ತರು ಹೊಸ ಹೆಣ್ಣು ಗಂಡು
ಒಂದು ಮಗುವಾಗಲೆಂದು
ರಾತ್ರಿಗಳ ಯಾತ್ರೆಯನು ಮಾಡಿದರು
ಮುಳುಗಿ ಎದ್ದರು ಪ್ರೇಮಕಾಮಗಳ
ಗಂಗೆ ಕಾವೇರಿಗಳಲಿ
ಹಸಿದು ಹೋರಾಡಿದರು
ಹೂವು ಕಬ್ಬಿಣವಾಗಿ ಕಬ್ಬಿಣವು ಕೆಂಪಾಗಿ
ಹಲವು ರೂಪಕೆ ಸಿಕ್ಕಿ
ಸೊಕ್ಕೇರಿ ಕುಣಿವ ತನಕ
ಮೂಳೆ ಲಟಲಟವಾಗಿ ಮಯ್ಯೆಲ್ಲ ಮಳೆಯಾಗಿ
ಜೀವ ಕಾರಂಜಿ ತೋಟದಗಲಕು ಚಿಮ್ಮಿ
ಹರಿವ ತನಕ
ಸಂಕೋಚಗಳಿಗಿವರು ಹೊರಗಾದರು
ಚುಂಬನದ ಚೆಂದಕ್ಕೆ ಬೆರಗಾದರು

ಊರಂಚಿನಲ್ಲಿ ಜೋಪಡಿಯಲ್ಲಿ
ಅಳುವ ಹಾಡುವ ಸದ್ದು
ಸೂರಿಗೆ ಬಿಗಿದ ಹಗ್ಗ ತೂಗುವ ತೊಟ್ಟಿಲಿನಲ್ಲಿ
ಹೊಳೆವ ಅರಳುವ ಒಂದು ಕಪ್ಪು ಹೂವು
ತಿಪ್ಪೆಗುಂಡಿಯ ಕಡೆ ಹೋದ ಹುಡುಗರನ್ನು
ಚಪ್ಪಾಳೆ ತಟ್ಟಿ ಕರೆವ ದೆವ್ವಗಳ ಗುಂಪು
ಕಳ್ಳರಾಕಾರದಲಿ ತೇಲಿ ಬರುವ ಮೋಡಗಳ ಹಿಂಡು
ದೂರದಲಿ ಯಾರದೋ ಹೊಲದಲ್ಲಿ ಅಂಗಸಾಧನೆಯಲ್ಲಿ
ತೊಡಗಿರುವ ಕೊಲೆಗಡುಕರು
ಸುಡುಗಾಡಿನಲ್ಲಿ ಹುಟ್ಟಿ ಮೊಳಗುವ
ಸತ್ತವರ ಹಾಡು

ಆಕಾಶದಿಂದ ನೆಲಕ್ಕೆ ಚಕ್ಕನೆ ಜಿಗಿದು
ಜನದ ಮುಂದೆ ಕುಣಿದು
ಕಾಸುಕಿತ್ತು ಮುಗಿಲಲ್ಲಿ ಮರೆಯಾಗುವ
ಜುಂಜಪ್ಪ ಕುರ್‌ಮಾಮಗಳ ಪಡೆ
ಆಗಾಗ ಬರುವ ಗುರು
ಭಯಭಕ್ತಿಯನು ಹಂಚಿ
ಮಿಂಚುವನು ಮರದಡಿಯಲ್ಲಿ
ದಿನವೂ ಬರುವ ಯಜಮಾನ
ದೂರದಲ್ಲೇ ನಿಂತು ಗರ್ಜಿಸಿ
ಅಟ್ಟುವನು ಕೆಲಸಕ್ಕೆ ಆಳುಗಳನು

ನಡು ಹಗಲಿನಲ್ಲಿ ಕಪ್ಪು ಮೋಡವು ಕೆರಳಿ
ಪುಕ್ಕಲು ಸೂರ್ಯನನ್ನು ಓಡಿಸಿಕೊಂಡು ಹೋಗಿ
ಜಗವೆಲ್ಲ ಕತ್ತಲಾಗಿ ಆಕಾಶ ಅಲುಗಾಡಿ ಅತ್ತು
ದಿನವೆಲ್ಲ ಮಳೆಯಾಯಿತು
ಕೂಲಿ ಕಂಬಳಕ್ಕೆಂದು ಮನೆಬಿಟ್ಟು ಹೋದ
ಅಪ್ಪ ಅವ್ವಂದಿರು ಹಿಂತಿರುಗಿ ಬರದೆ
ಮಕ್ಕಳಿಗೆ ಗೋಳಾಯಿತು

ಓಡಿ ಹೋದವನು ಮತ್ತೆ ಬಂದ
ಆಕಾಶಕ್ಕೆಸೆದ ಕಿತ್ತಲೆಯಂತೆ ತಕತಕನೆ ಕುಣಿದ
ಹಟ್ಟಿ ಹುಡುಗರು ಎದ್ದು ಮಳೆಯ ನೀರಿಗೆ ಇಳಿದು
ಮುಖ ತೊಳೆದು ಮನೆಕಟ್ಟಿ
ಸೇತುವೆಗಳ ನಿರ್ಮಿಸಿದರು

ಹಳೆಯಕಾಲದ ಹರಿದ ಗುರುಭಕ್ತಿ
ಬಿಚ್ಚಿದರೆ ಗದೆ ಮುಚ್ಚಿದರೆ ಕತ್ತಿ
ಬಸವಣ್ಣ ಸರ್ವಜ್ಞ ಕನಕನುಡಿ ಬಳ್ಳಿಯನು
ನೆಟ್ಟರೆದೆಗೆ

ಕಪ್ಪು ಹುಡುಗನು ಕಂಡ
ನಕ್ಷತ್ರ ಕಿತ್ತ ಕನಸು
ಏಳೇಳು ಲೋಕವನು
ಸುತ್ತಿಳಿದ ಕನಸು

ಸಂಚಾರಕಾಯಿತು ಸಂಚಕಾರ
ತೆರೆದರೂ ಮುಚ್ಚಿರುವ ಗುಡಿ ಹೋಟೆಲು
ಇದ್ದರೂ ಸಿಗಲಿಲ್ಲ ಕೊಳದ ನೀರು
ಅಪ್ಪ ಅವ್ವನ ಒಡನಾಟದಲ್ಲಿ
ಧಣಿಯ ಕೊಟ್ಟಿಗೆಯಲ್ಲಿ ಹಬ್ಬದೂಟ
ಹೊಲೆತನದ ಬೆಂಕಿಯಲ್ಲಿ
ಸುಟ್ಟು ಹೋದವು ಎದೆಯ ಹೂವು

ಈ ಊರ ಗುಡಿ ಗೋಪುರಗಳಿಗೆ ಬೆಂಕಿ ಹಚ್ಚಿ
ನನ್ನ ಸುಟ್ಟಂತೆ ಇವರನೂ ಸುಡಬೇಕು
ಉಳ್ಳವರ ಅಟ್ಟಹಾಸಕ್ಕೆ ಚಟ್ಟ ಕಟ್ಟಿ
ಸುಡುಗಾಡಿನಲ್ಲಿವರ ನೆಡಬೇಕು
ಎಂದು ಈ ಹುಡುಗ ಹೊರಟ
ಕಪ್ಪು ಕಾಡಿನ ಕಡೆಗೆ
ಜನದ ಕಡೆಗೆ.

ಭೂತನ ಕತೆ

ದಲಿತರ ದೇವರು ಧರಣೀಗೆ ದೊಡ್ಡೋನು
ವೀರಾಧಿವೀರ ಭೂತಪ್ಪ / ಸೋತಂಥ
ಮರ್ಮದ ಕಥೆಯ ಕೇಳಿರಿ

ಕಂಡದ್ದು ಬಂಗಾರ ಕಾಣದ್ದು ಶೃಂಗಾರ
ಭೂತಪ್ಪನರಮನೆ ಐಭೋಗ / ನೋಡಲು
ಕಣ್ಣೆರಡು ಸಾಲದೆ ಹೋದಾವು

ಅಲೆಯುವ ಹೊಲೆಯರ ಹೊಲೆಯುವ ಮಾದಿಗರ
ಮಲಗಿದ ಜನಕೆಲ್ಲ ಗುರುಕಾಣೊ / ಭೂತಪ್ಪ
ಬಡವರ ಬಾಳಿಗೆ ಶಿವಕಾಣೊ

ಕತ್ತಲೆ ಮುಖದೋನು ಕೆಂಡದ ಕಣ್ಣೋನು
ಮುಗಿಲಿನ ಉದ್ದ ಈ ಸ್ವಾಮಿ / ಇದ್ದ
ಭೂತಪ್ಪ ನಕ್ಕರೆ ಬೆಳಗಾದೊ

ಭೂತಪ್ಪ ಕುಣಿದರೆ ಮರಗಿಡ ಮಣ್ಣಾದೊ
ಭಯದಲ್ಲಿ ನೆಲವು ನಡುಗೀತು / ಆಕಾಶ
ಕಣ್ಣೀರ ಚೆಲ್ಲಿ ಮಳೆಯಾದೊ

ಹಂದಿಯ ಕಡಿಬೇಕು ಕೋಳಿಯ ಕೊಯ್ಯಬೇಕು
ಕುರಿಕೋಣನಾ ಬಲಿಯ ಕೊಡಬೇಕು / ಜಾತ್ರೆಗೆ
ಇರುವೆಯ ಸಾಲಂತೆ ಜನಬಂದೊ

ಏಳೂರ ದೇವರ ಆಳುವ ಆಸೆಯು
ಬಂತಲ್ಲ ಭೂತನ ಮನಸೀಗೆ / ಬಿತ್ತಲ್ಲ
ಇಂದ್ರನ ಪಟ್ಟವು ಕಣ್ಣೀಗೆ

ತೆಂಗಿನ ಮರದುದ್ದ ಅನ್ನವ ಉಣ್ಣುವೆ
ಕೊಡಿರಯ್ಯೊ ಉಳ್ಳ ದೇವರು / ನನಗೆ
ಕಾಯುವೆ ನಿಮ್ಮ ಬಾಗಿಲ

ತೆಂಗಿನ ಮರದುದ್ದ ಅನ್ನವ ಕೊಟ್ಟರೆ
ಆಗುವೆ ಕಾಲಾಳು ಕಯ್ಯಾಳು / ನಿಮ್ಮ
ಪಾದದ ಧೂಳ ತಲೆಗಿಟ್ಟು

ಅನ್ನದ ದಾಹವ ಇಂಗಿಸಲಾರದ
ದೇವರು ಹಂಗಿಗೆ ಒಳಗಾಗಿ / ಬಾಳಲಿ
ನನ್ನಯ ಕಾಲಿಗೆ ಕಸವಾಗಿ

ಊರುರ ದೇವರು ಅನ್ನವ ತಂದವು
ತೆಂಗಿನ ಮರದುದ್ದ ಬರಲಿಲ್ಲ/ ದೇವರು
ಭೂತಪ್ಪನೆದುರು ಯಾರಯ್ಯ

ಭೂತಪ್ಪನೆದುರು ಯಾರಯ್ಯ ಎಂದರೆ
ಅಂಜದ ದೇವರು ಘನಮಂಜು / ನಾಥ
ಅನ್ನದ ಪಣಕೆ ಇಳಿದಾನು

ತೆಂಗಿನ ಮರದುದ್ದ ಅನ್ನವ ಕೊಡುವೆನು
ನನ್ನಯ ಹಂಗಿಗೆ ಒಳಗಾಗೊ / ಭೂತ
ನೀನಿಂದು ನನಗೆ ಶರಣಾಗೊ

ಎಲೆಮಂಜ ಎಂದು ಪಕಪಕ ನಕ್ಕನು
ತಕತಕ ಕುಣಿದು ಭೂತಪ್ಪ / ಅಂದನು
ನಕ್ಸಾರ ಬ್ಯಾಡೊ ಮಂಜಪ್ಪ

ಆಳನು ಕರೆಸಿದ ಘನಮಂಜುನಾಥ
ತೆಂಗಿನ ಮರವೊಂದ ಕಡಿಸೀದ / ದೇವರು
ಮರವನು ಉದ್ದಕ್ಕೆ ಮಲಗೀಸಿ

ಅನ್ನದ ಮಡಿಕೆಯ ತಂದನು ದೇವರು
ಒಂದೊಂದೆ ಅಗುಳೆ ಇಟ್ಟಾನು / ಅನ್ನ
ತೆಂಗಿನ ಮರದುದ್ದ ಆಯ್ತಲ್ಲೊ

ತೆಂಗಿನ ಮರದುದ್ದ ಅನ್ನವ ಉಣ್ಣಯ್ಯ
ಹಸಿವನು ನೀಗೊ ಭೂತಪ್ಪ / ನೀನು
ನನ್ನರಮನೆಯ ಕಾಯಪ್ಪ

ಘನಮಂಜುನಾಥನಾಳಾದ ಭೂತಪ್ಪ
ಭೂತಪ್ಪನೊಡನೆ ಜನವೆಲ್ಲ / ಶರಣಾಗಿ
ಜಯಮಂಜುನಾಥ ಎಂದರು.

ನಲವತ್ತೇಳರ ಸ್ವಾತಂತ್ರ್ಯ

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾ ಜೋಬಿಗೆ ಬಂತು
ಕೋಟ್ಯಾಧೀಶನ ಕೋಣೆಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ
ಸಮತೆಯ ಹೂವನು ಅರಳಿಸಲಿಲ್ಲ
ನಲವತ್ತೇಳರ ಸ್ವಾತಂತ್ರ್ಯ

ಹಣವಂತರು ಕೈ ಸನ್ನೆ ಮಾಡಿದರೆ
ಕತ್ತಲೆಯಲ್ಲಿ ಬೆತ್ತಲೆಯಾಯಿತು
ಯಾರು ಕಾಣದ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ

ಸಾವಿರಾರು ಜನ ಗೋರಿಯಾದರು
ಲಕ್ಷ ಲಕ್ಷ ಜನ ಗಲ್ಲಿಗೇರಿದರು
ರೈತ ಕಾರ್ಮಿಕರು ರಕ್ತವ ಕೊಟ್ಟರು
ಯಾರಿಗೆ ಬಂತು ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ

ಪೋಲೀಸರ ಬೂಟಿಗೆ ಬಂತು
ಮಾಲೀಕರ ಚಾಟಿಗೆ ಬಂತು
ಬಂದೂಕದ ಗುಂಡಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಪಾರ್ಲಿಮೆಂಟಿನ ಕುರ್ಚಿಯ ಮೇಲೆ
ವರ್ಷಗಟ್ಟಲೆ ಚರ್ಚೆಗೆ ಕೂತು
ಬಡವರ ಬೆವರು ರಕ್ತವ ಕುಡಿದು
ಏಳಲೆ ಇಲ್ಲ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ತಬರನ ಹಾಡು

ಎಚ್ಚರವಿಲ್ಲದ ಕತ್ತಲ ನಾಡಿಗೆ
ಎಂದಿಗಯ್ಯ ಬೆಳಕು
ಎಲ್ಲೆಡೆ ಬೆಳೆಯುವ ಸಾವ ಸಂಕಟಕೆ
ಇಲ್ಲವೇನು ಕೊನೆಯು

ಉಳ್ಳವರೆಸೆದ ಗಾಳಕೆ ಸಿಕ್ಕಿ
ಸ್ವಾತಂತ್ರ್ಯವು ಬರಿ ಗೋಳಾಯ್ತು
ಯೋಜನೆಯೆಲ್ಲ ಯೋಜನ ದೂರ
ಹಸಿವೆಯೆ ಬಡವನ ಬಾಳಾಯ್ತು

ಇದ್ದೊಂದು ಓಟನು ಮಾರಿಕೊಂಡರು
ಹಸಿರು ನೋಟುಗಳಿಗೆ
ತನು ಮನ ಧನವನು ಅರ್ಪಿಸಿಬಿಟ್ಟರು
ಲಾಟಿ ಬೂಟುಗಳಿಗೆ

ಅಧಿಕಾರದ ಮದ ಕುಣಿಯುತ್ತಿತ್ತು
ಕುರ್ಚಿ ಕುರ್ಚಿಯಲ್ಲಿ
ಬಡವರ ರಕ್ತ ಹರಿಯುತ್ತಿತ್ತು
ಬೀದಿ ಬೀದಿಯಲ್ಲಿ

ಬಿಳಿಯ ಟೋಪಿಗಳ ಬಿಳಿಯ ಮೋಡಗಳ
ನಂಬಿ ಕುಂತ ಜನರು
ಸುಳ್ಳು ಭಾಷಣದ ಹಳ್ಳಕೆ ಬಿದ್ದು
ದಿಕ್ಕು ಕೆಟ್ಟರಯ್ಯ

ನಿಲ್ಲುವುದೆಂದಿಗೆ ಕುಂತ ಜನಗಳು
ಕೋಪಗೊಂಡು ಕೆರಳಿ
ಹರಿಯುವುದೆಂದಿಗೆ ಜನಪ್ರವಾಹ
ಕೆಂಪು ಹೂವು ಅರಳಿ

ಮಾಟ ಆಗಿತ್ತು

ಮಾಟ ಆಗಿತ್ತು
ದೇಶಕೆ ಮಾಟ ಆಗಿತ್ತು

ದೇಶದ ದೇಹದ ಅಂಗಾಂಗಕ್ಕೆ
ಸಕಲವು ವಿಕಲ ಆಗುವಂತೆ
ತೃಣವು ಕೂಡ ಚಲಿಸದಂತೆ
ಮಾಟ ಆಗಿತ್ತು

ಮಳೆಯು ಬೆಳೆಯು ಆಗದಂತೆ
ಸತ್ಯದ ಸುಳಿವು ಸಿಕ್ಕದಂತೆ
ಯಾರಿಗು ಎಚ್ಚರವಾಗದಂತೆ
ಮಾಟ ಆಗಿತ್ತು

ಮಾಟ ಮದ್ದಿನ ಗದ್ದಲದಲ್ಲಿ
ಜನತೆಯ ಸದ್ದು ಅಡಗಿತ್ತಯ್ಯ
ಸೊಕ್ಕಿನ ದನಿಯು ಗುಡುಗಿತ್ತಯ್ಯ
ಮಾಟ ಆಗಿತ್ತು
ರಣ ಮಾಟ ಆಗಿತ್ತು

ಬಿಡುಗಡೆ

ಬಿಡುಗಡೆ ಎಂಬುದು ಏನೊ
ಬಿಡುಗಡೆ ಎಂಬುದು ಎಲ್ಲೊ

ಸ್ವಾತಂತ್ರ್ಯದ ಸೂರ್ಯ ಹುಟ್ಟಿದರು
    ಕಿರಣ ಕಾಣಲಿಲ್ಲ
ಸೂರ್ಯನ ಎದುರು ಉಳ್ಳವರೊಡ್ಡಿದ
    ಮೋಡ ಚದುರಲಿಲ್ಲ

ಯಾರು ಬಂದರೂ ಯಾರು ಹೋದರೂ
    ಕತ್ತಲಳಿಯಲಿಲ್ಲ
ಅಸ್ಥಿಪಂಜರದ ಜೋಪಡಿಯೊಳಗೆ
    ದೀಪ ಹಚ್ಚಲಿಲ್ಲ

ತುಳಿಯುವ ಬೂಟಿಗೆ ಸಿಡಿಯುವ ಗುಂಡಿಗೆ
    ಅಡೆತಡೆ ಎಂದಿಗು ಇಲ್ಲ
ಬಿಗಿಯುವ ಸರಪಳಿ ಕಳೆಯಲಿಲ್ಲ
    ಮುಂದಿನ ದಾರಿ ಹೊಳೆಯಲಿಲ್ಲ

ಬಿಡುಗಡೆ ಎಂಬುದು ಏನೊ
ಬಿಡುಗಡೆ ಎಂಬುದು ಎಲ್ಲೊ.

ದಾರಿ ಯಾವುದೋ

ದಾರಿ ಯಾವುದೋ
ಸರಿ–ದಾರಿ ಯಾವುದೋ

ಕತ್ತಲೆಯಲ್ಲಿ ಮುಳುಗಿದ ಜನಕೆ
ಸುತ್ತಲು ಸಾವನು ಕಾಣುವ ಜನಕೆ
ಕರುಣೆಯ ಸರಪಳಿ ಕೊಲ್ಲುವ ಜನಕೆ
ಬಿಡುಗಡೆಯನ್ನು ನೀಡುವ ಒಂದು
ದಾರಿ ಯಾವುದೋ
ಸರಿ–ದಾರಿ ಯಾವುದೋ

ಭಿಕ್ಷೆಯ ಕೊಟ್ಟು ಶಿಕ್ಷೆಯ ಕೊಟ್ಟು
ನಾಯಿಯ ಬಾಳಿಗೆ ದಲಿತರ ನೂಕಿ
ನಡೆಸುವ ಹಿಂಸೆಯ ಕೊನೆಗಾಣಿಸುವ
ಸಮತೆಯ ಹೂವು ಅರಳುವ ತೋಟಕೆ
ದಾರಿ ಯಾವುದೋ
ಗೆಳೆಯ – ದಾರಿ ಯಾವುದೋ

ಅವಮಾನದ ಕಣ್ಣೀರನು ತೊಳೆಯಲು
ಸಾವಿರ ಕೈಗಳು ಮೇಲಕ್ಕೇಳುವ
ಎಲ್ಲಾ ಮನುಷರು ಒಂದೇ ಎನ್ನುವ
ಬಡವರ ಬಾಳಿಗೆ ಬೆಳಕನು ತರುವ
ದಾರಿ ಯಾವುದೋ
ಸರಿ–ದಾರಿ ಯಾವುದೋ
ದಾರಿ ಯಾವುದೋ
ಸರಿ – ದಾರಿ ಯಾವುದೋ

ಸಂಪಿಗೆಯ ಮರದಲ್ಲಿ

ನೂರಾರು ಹಾವುಗಳು ಊರೆಲ್ಲ ನೋವುಗಳು
ಸಂಪಿಗೆಯ ಮರದಲ್ಲಿ ಸಾವಿನಾಟ
ಕೊಂಬೆ ಕೊಂಬೆಯ ಕೆಳಗೆ ಮಸೆದ ಕತ್ತಿಯ ಸಾಲು
ಹೆಣಗಳುಯ್ಯಾಲೆಯಲಿ ಮರದ ಕುಣಿತ

ಹೂವುಗಳ ಒಡನಾಟ ಅಲೆಗಳಲಿ ತೇಲಾಟ
ವಿಷಸರ್ಪಗಳ ಸ್ನೇಹ ಜೊತಗೆ ಇತ್ತು
ಚುಕ್ಕೆಗಳ ಜೊತೆಯಲ್ಲಿ ಚಕ್ಕಂದವಾಡಿದರು
ಕನಸಿನಲಿ ಕಾಡಿತ್ತು ಧೂಮಕೇತು

ಬಡಜನರ ಗುಡಿಸಲಿಗೆ ಬೆಂಕಿಯನು ಇಟ್ಟವರು
ರಾಜರಾದರು ದೆಹಲಿ ನಾಡಿನಲ್ಲಿ
ಎಳೆಯ ಮಕ್ಕಳ ಕೊರಳ ದನಿಕಿತ್ತು ನಕ್ಕವರು
ರಕ್ತವನು ಹಂಚಿದರು ಅಮಲಿನಲ್ಲಿ

ಈ ನಾಡಿನಾಪತ್ತು ನಮ್ಮ ಜನಗಳ ಸಾವು
ಬಂದು ನಿಂತಿತ್ತಯ್ಯ ಕಣ್ಣ ಮುಂದೆ
ಪೊಲೀಸು ಪಹರೆಯಲಿ ಭಾಷಣದ ಹೊಗೆಯಲ್ಲಿ
ಮುಖವು ಕಾಣಿಸಲಿಲ್ಲ ಗಂಡೊ ಹೆಣ್ಣೊ

ಬೆಳಕು ಚೆಲ್ಲುವ ಸೂರ್ಯ ಹೊಳೆವ ಚುಕ್ಕೆಗಳನ್ನು
ಕೊಂಡುಕೊಂಡರೂ ಏನೊ ಶ್ರೀಮಂತರು
ಮಲಗಿದ್ದ ಹಕ್ಕಿಗಳು ಮೇಲೆಳಲಿಲ್ಲ
ಬೆಂಗಳೂರಿನ ಜನಕೆ ಬೆಳಕಾಗಲಿಲ್ಲ

ಖಾಲಿಯಾಕಾಶದಲಿ ಕಿರಣಗಳ ಸುಳಿವಿಲ್ಲ
ಇದು ಬೆಳಕೊ ಕತ್ತಲೆಯೊ ತಿಳಿಯದಲ್ಲ
ಹೂದೋಟಗಳ ತುಂಬ ಹುಚ್ಚುನಾಯಿಯ ಸಂತೆ
ಕಿಕ್ಕಿರಿದ ಜನ ಕಾಣೊ ಜೈಲಿನಲ್ಲಿ

ಬೆಂಗಳೂರಿನ ಸುತ್ತ ಬೆತ್ತ ಬೆಳೆಯುತಲಿತ್ತು
ಊರಕಡೆ ಟ್ಯಾಂಕುಗಳ ಪಯಣವಿತ್ತು
ಮಂತ್ರಿಮಾನ್ಯರ ಹೊತ್ತು ಹೊರಟಂಥ ಪ್ಲೇನುಗಳು
ಬಡಜನರ ಕೈಕಟ್ಟಿ ಮೇಲೆತ್ತಿದೊ

ಏನಾದರೊ ಅವರು ವ್ಯಾನಿನಲ್ಲಿ ಹೋದವರು
ಮರಮರವು ನರಳಿತ್ತು ಗಾಳಿಯಲ್ಲಿ
ಮದ್ದು ಗುಂಡಿನ ಸದ್ದೊ ಎದೆಯೊಡೆದ ಸದ್ದೊ
ನೋವು ಬಿರಿಯುತ್ತಿತ್ತು ಹೂವಿನಲ್ಲಿ

ಬಡಜನರ ಜೋಪಡಿಗೆ ಕಾಡುಗಳ ಕತ್ತಲೆಗೆ
ಬೆಳಕು ಬೇಕೆಂದವರ ಕೊಂದರಲ್ಲೊ
ಈ ನೆಲದ ಹೂ ಬಳ್ಳಿ ಹಕ್ಕಿ ಮಕ್ಕಳಿಗೆಲ್ಲ
ಬದುಕು ಬೇಕೆಂದವರ ಬಗೆದರಲ್ಲೊ

ಏನು ಮಾಡುವೆ ಗೆಳೆಯ ಕಂಡಕಂಡಲ್ಲೆಲ್ಲ
ರುಂಡಗಳು ನೆಲಕುರುಳಿ ಬೀಳುವಾಗ
ಕಾದ ಬಂಡೆಯ ಸುತ್ತ ಬೆಳೆದ ಹಸುರಿನ ಮೇಲೆ
ಕೆಂಪು ರಕ್ತವು ಚಿಮ್ಮಿ ಹರಿಯುವಾಗ

ಕೆಂಡ ಸಂಪಿಗೆಯಲ್ಲಿ ಕೆಂಡಗಳು ಅಡಗಿದ್ದು
ಮುಡಿದ ಹೆಣ್ಣುಗಳೆಲ್ಲ ಬುದಿಯಾದೊ
ಹೆಜ್ಜೆ ಇಟ್ಟಲ್ಲೆಲ್ಲ ಕೆಂಪು ಕಮಲವು ಮೂಡಿ
ಬರುವ ಜನತೆಗೆ ಹೂವು ಹಾದಿಯಾದೊ

ಎದೆಎದೆಯ ಮೇಲೆಲ್ಲ ಮೊಳೆ ಜಡಿಯುತ್ತಿದ್ದಾಗ
ಏಸುವಾಗಿದ್ದವರು ಎದ್ದರಲ್ಲೊ
ನೊಂದ ಮುಖಗಳ ತುಂಬ ನಗೆಯನ್ನು ಬಿತ್ತಿದರು
ಮೋರಿಗಳ ದಾರಿಯಲಿ ಬಂದ ಜನರು

ಗಗನಸಾಗರದಲ್ಲಿ ಮುಗಿಲ ದೋಣಿಯ ಸಾಲು
ಎಣಿಸಿದಷ್ಟೂ ಮಿಗುವ ಜನಸಂದಣಿ
ಕೆಂಪು ಸೂರ್ಯನು ಹುಟ್ಟಿ ಮೆರವಣಿಗೆ ಬರುವಾಗ
ಕಪ್ಪ ಕಾಡಿನ ಹಾಡು ಮೊಳಗುತ್ತಿತ್ತು.

ಕೊಳೆಗೇರಿಯ ಹಾಡು

ಬಡವರ ಜೋಪಡಿ ನೆಲಸಮವಾದ
ನೋವಿನ ಕಥೆ ಕೇಳಿ
ದುಡಿಯುವ ಜನಗಳ ಪ್ರಾಣವು ಹೋದ
ಗೋಳಿನ ಕಥೆ ಕೇಳಿ

ಮಹಾನಗರದ ಮಧ್ಯ ಭಾಗದಲಿ
ಬಡವರ ಗುಡಿಸಲ ಗುಂಪಿತ್ತು
ಕೂಲಿಯ ಮಾಡುವ ಗಾಡಿಯ ಎಳೆಯುವ
ಬೆವರನು ಸುರಿಸುವ ಜನವಿತ್ತು

ಬೀದಿ ಬೀದಿಯಲಿ ಭಿಕ್ಷೆಯ ಎತ್ತುವ
ಮಕ್ಕಳ ಹಿಂಡು ಅಲ್ಲಿತ್ತು
ಬೀಡಿಯ ಹೊಗೆಯು ಮನೆಯೊಳಗಿತ್ತು
ಗುಡಿಸಲು ಗುಡಿಸಲ ತಬ್ಬಿತ್ತು

ಸಣ್ಣ ಸಂಗತಿಗು ಕೂಗಾಡುವ ಕುಣಿಯುವ
ಹೆಂಗಸರಾ ಪಡೆ ಅಲ್ಲಿತ್ತು
ಮಾಜೀ ರೌಡಿಯ ಕುಂಟು ನಡಿಗೆಯಲಿ
ಪೋಲಿಸರ ಏಟಿನ ಗುರುತಿತ್ತು

ಓಟಿನ ಕಾಲದ ಲೈಟಿನ ಕಂಬ
ಕತ್ತಲೆ ಚೆಲ್ಲಿತ್ತು
ಮನೆಗಳ ಮುಂದೆ ಹರಿಯುವ ಮೋರಿಗೆ
ತೂರಾಡುವ ಜನ ಬಿದ್ದಿತ್ತು

ಬಡವರ ಜೋಪಡಿ ನೆಲಸಮವಾದ
ನೋವಿನ ಕತೆ ಕೇಳಿ
ದುಡಿಯುವ ಜನಗಳ ಪ್ರಾಣವು ಹೋದ
ಗೋಳಿನ ಕತೆ ಕೇಳಿ.

ಗುಡಿಗೆ ಹೋಗುವವರ ಹಾಡು

ಗುಟ್ಟಿನ ಲೋಕದ ಗುಡಿಗೆ ಹೋಗುವೆವು
ಶತಮಾನದ ಸುಳ್ಳನು ಒಡೆದು
ಹೊಸಬಾಳ ಪಯಣದಲ್ಲಿ
ನಾವಿಟ್ಟು ಮೊದಲ ಹೆಜ್ಜೆ

ಕೆಟ್ಟು ನಿಂತಿರುವ ಕಾಲದ ರಥವನು
ಎಳೆಯುತೀವಿ ಮುಂದೆ
ಸಮತೆಯ ಹೂಗಳು ಚೆಲ್ಲಿದ ಪಥವನು
ತುಳಿಯುತೀವಿ ನಾವು

ಮರೆತು ಹೋಗಿರುವ ಗುರುತು ಸಿಗದಿರುವ
ನಮ್ಮ ಸೊಲ್ಲೆ ಬನ್ನಿ
ಜಗವೆಲ್ಲ ಕೇಳಲಿ ಅಚ್ಚರಿಗೊಳ್ಳಲಿ
ಹೊಸ ಮಾತನೊಂದ ಅನ್ನಿ

ದೇವರಿರುವನೊ ಎಂತು ಇರುವನೊ
ನೋಡುತೀವಿ ಇಂದು
ಆತಂಕ ತಲ್ಲಣದಾಕ್ಷಣಕೆ
ಹಾತೊರೆಯುತೀವಿ ನಾವು

ಎಂದೂ ಬರದವರು ಇಂದು ಬರುವೆವು
ಏಳು ಮಂಜುನಾಥ
ಹೊರಗೆ ಉಳಿದವರು ಒಳಗೆ ಬರುವೆವು
ಬರಮಾಡಿಕೊಳ್ಳೊ ದೇವ

ಅಜ್ಜಿಯ ಹಾಡು

ಈ ಊರಿನ ಜಮೀನುದಾರ
ಸಂಕಪ್ಪಯ್ಯ ನನ್ನ ಮಗ
ನಮ್ಮದು ಊರಿಗೆ ದೊಡ್ಡ ಜಾತಿ
ಭೂಮಿಯ ದೇವರು ನಮ್ಮ ಜನ

ಉತ್ತಮ ಜಾತಿಯ ನಾವುಗಳೆಲ್ಲ
ದೇವಾಲಯದ ಕಳಸಗಳು
ನಮ್ಮಯ ಊರಿನ ಪಂಚವರ್ಣಿಗಳೆಲ್ಲ
ಪಾಯದ ಕೆಳಗಿನ ಕಲ್ಲುಗಳು

ಕಲ್ಲುಗಳೆಂದೂ ಕಳಸಗಳಲ್ಲ
ಹೊಲೆಯರಿಗೆಂದೂ ನೆಲವಿಲ್ಲ
ಕಪ್ಪುನಾಯಿ ಕೆಂಪಾಗುವುದಿಲ್ಲ
ಹೊಲೆಯರಿಗೆಂದೂ ಬೆಲೆಯಿಲ್ಲ

'ಹೀಗೆನ್ನುವ ಮುದುಕಿಗೆ ಸಾವೇ ಇಲ್ಲವೆ
ಚೋಮನಿಗೆಂದೂ ನೆಲವೇ ಬೇಡವೆ
ನೋವನು ಉಂಡು ನೋವನು ಹೊದಿಯುವ
ದಲಿತರ ಬಾಳಿಗೆ ಬೆಳಕೇ ಬೇಡವೆ'

ಹೆಂಡಕ್ಕೆ ಸಾವಿಲ್ಲವೊ

ಭೂತಾಯಿ ಸಿಗಲಿಲ್ಲ ಈ ತಾಯಿ ಸಿಕ್ಕವಳೆ
ಕಾಣಿರೋ ಆನಂದವ
ಹೆಂಡ ಬಾಡಿನ ಮುಂದೆ ಇನ್ನು ದೇವರು ಉಂಟೆ
ಮಾಡಿರೋ ದೊಡ್ಡಬ್ಬವ
ಸಾವ್ಕಾರ್ರ ಸಾಲಗಳ ಅರೆಗಳಿಗೆ ಮರೆಯೋಣ
ಹಾಡಿರೊ ಸಂಗೀತವ

ನಮ್ಮಯ ದುಡಿಮೇಲಿ ಧಣಿಜೀವ ಅಡಗೈತೆ
ಧಣಿಗೆಂದು ನೋವಿಲ್ಲವೊ
ಹೆಂಡದ ಗಡಿಗೇಲಿ ನಮಜೀವ ಅಡಗೈತೆ
ಹೆಂಡಕ್ಕೆ ಸಾವಿಲ್ಲವೊ
ಉರಿಬಾಡು ಹೆಂಡಕ್ಕೆ ಹುಟ್ಟಿದ ಜನ ನಾವು
ವ್ಯಸನಕ್ಕೆ ತಾವಿಲ್ಲವೊ
ಹೆಂಡಕ್ಕೆ ಸಾವಿಲ್ಲವೊ

ನೆನಪು

ಹಾಡುವ ಹಕ್ಕಿ ಓಡುವ ಬಸ್ಸು
ಧುಮುಕುವ ಜೋಗದ ಜಲವನು ಕಂಡರೆ
ನಿನ್ನ ನೆನಪು ಗೆಳತಿ
ಕರೆಯುವ ಹಸುಗಳು ಕುಣಿಯುವ ನವಿಲು
ಚಂಗನೆ ನಗೆಯುವ ಜಿಂಕೆಯ ಕಂಡರೆ
ನಿನ್ನ ನೆನಪು ಗೆಳತಿ

ಕೆಂಪು ಕನಸುಗಳ ಈ ನೆಲದಲ್ಲಿ
ಕಂಪಾಗುವ ಬಯಕೆಯ ಬಿತ್ತಿ
ಬಣ್ಣಬಣ್ಣಗಳ ಹೂ ಬೆಳೆದೆ
ಹಾಡಿನ ಆನಂದದಲಿ ಮುಗಿಲುದ್ದಕು ನಗೆಚೆಲ್ಲಿ
ಮನ ಸೆಳೆದೆ

ಮಿಂಚುಗಳ ಬಳ್ಳಿಯಲಿ ಮೂಡಿ ನಡೆಯುವ ಬೆಳಕೆ
ಬೆಟ್ಟಗುಲಗಂಜಿಗಳ ಒಂದು ಮಾಡುವ ಕನಸೆ
ನೀನು ಬಯಸುವ ಬಣ್ಣ
ನೀನು ಮೆಚ್ಚುವ ಲೋಕ
ತಿಳಿಯದಲ್ಲೆ.

Blank

ಹೊಸ ಕವಿತೆಗಳು

Blank

ಪ್ರಕೃತಿ

ಸಂಕಷ್ಟಗಳ ಸೂರ್ಯ ದಿನದಿನವು ಮೂಡುವನು
ಮುಳುಗುವನು ವೇದನೆಯ ಹಬ್ಬದಲ್ಲಿ
ಕುದಿವ ನೀಲಿಯ ಕಡಲು ಏಳೆಡೆಯ ಕಾಳಿಂಗ
ಹೆಪ್ಪುಗಟ್ಟಿದ ನೋವು ಮುಗಿಲಿನಲ್ಲಿ

ಬಸಿರ ಬಗೆದೇಳುವರು ಅಂಗಾಂಗವಾಳುವರು
ತಾಯ ಸಹನೆಯ ಉಂಡು ಮಕ್ಕಳೆಲ್ಲ
ದೇವಮಾನವರೆಲ್ಲ ಮಿಂದುಮುಳುಗೆದ್ದರೂ
ಬತ್ತಿಲ್ಲ ಅವಳೆದೆಯ ಬೆಳದಿಂಗಳು

ಇಲ್ಲಿಗೀ ಬೆಟ್ಟಗಳು ಎಲ್ಲಿಂದಲೋ ಬಂದು
ಗಾಢ ಚಿಂತನೆಯಲ್ಲಿ ನಿಂತವೇಕೆ
ಹಾಲು ಅಮೃತವುಳ್ಳ ಈ ಹಳ್ಳಕೊಳ್ಳಗಳು
ಬೆಟ್ಟದಪ್ಪುಗೆ ತೊರೆದು ಹರಿದವೇಕೆ

ನಿನ್ನ ಸಾಗರದೊಡಲ ಅನುಕಂಪದಲೆಯಲ್ಲಿ
ಈ ಲೋಕ ತೇಲುತಿದೆ ನೌಕೆಯಂತೆ
ಬೆಂಗಾಡಿನಲಿ ನಿನ್ನ ತಂಗಾಳಿ ಬೀಸುವುದು
ಮಳೆ ಬೆಳೆಯು ನಿನ್ನದೆಯ ಬಯಕೆಯಂತೆ

ನಾನು ನಿನಗೇನಾಗಬೇಕೆಂದು ಕೇಳಿದೆಯ
ನಿನ್ನ ಬೆಟ್ಟಗಳಲ್ಲಿ ಪುಟ್ಟ ಹೊನಲು
ನನ್ನ ಬದುಕಿನ ಗುರಿಯು ಏನೆಂದು ಕೇಳಿದೆಯ
ನಿನ್ನ ಕಾಡುಗಳಲ್ಲಿ ಹಾಡುಹಕ್ಕಿ

ರಸ್ತೆ ಬದಿಯಲಿ ನಿಂತು ನಕ್ಷತ್ರಗಳ ಎಣಿಸಿ
ಎದೆಯೊಳಗೆ ನಿಧಿಯನ್ನು ಇಟ್ಟುಕೊಂಡೆ
ಸೆಳೆದು ಕಾಮನಬಿಲ್ಲು ಹೆಗಲಿಗೇರಿಸಿ ಹೊರಟೆ
ಗಂಧರ್ವಲೋಕಕ್ಕೆ ನೆಂಟನಂತೆ

ಆಕಾಶಕಾಯದಲಿ ಸೂರ್ಯ ಚಂದ್ರರು ಭೂಮಿ
ಇಲ್ಲವಾಗುವರಂತೆ ಒಂದು ದಿವಸ
ಹದಿನಾಲ್ಕು ಲೋಕಗಳು ಅಳಿದು ಹೋದರು ತಾಯೆ
ನನಗೆ ಬೆಳಕಾಗುವುದು ನಿನ್ನ ಪ್ರೀತಿ.

ಗ್ರಾಮದೇವತೆ

ಕೊಡಲಿಯ ಏಟಿಗೆ ಗಡಗಡ ನಡುಗಿ
ನರಳುತ್ತಿರುವುದು ಏನಣ್ಣ
ಅದು ಮರವಲ್ಲ ಅದು ಬೇರಲ್ಲ
ಗ್ರಾಮದೇವತೆ ತಿಳಿಯಣ್ಣ

ನಂಬಿದ ಜನತೆಯ ಹಂಬಲ ತೀರಿಸಿ
ತುಂಬು ಬಾಳನು ಕೊಟ್ಟವಳು
ಕಾಡುಕಳ್ಳರ ಕರಾಳ ಕೈಗೆ
ಕೊರಳನು ಕೊಟ್ಟು ಮರುಗುವಳು

ಬೆಟ್ಟಗುಡ್ಡದಲಿ ಬಂಡೆಯು ಸಿಡಿದು
ಖಂಡುಗ ಅತ್ತವರಾರಣ್ಣ
ರಾಮನಬಂಟ ವೀರ ಹನುಮನ
ಎದೆಯನು ಒಡೆದರು ನೋಡಣ್ಣ

ಹರಿಯುವ ತೊರೆಗಳು ಬೇವಿನ ಮರಗಳು
ಗಿರಿಗಳೆ ದೈವ ಗುರುವೆಂದು
ಅರಿತು ಬಾಳಿದರು ನಮ್ಮ ಹಿರಿಯರು
ಇದ ಅರಿಯದೆ ಹೋದರು ಜನವಿಂದು

ಕಾಡನು ದೋಚಿ ನಾಡನು ಮಾರಲು
ಗುಳ್ಳೇ ನರಿಗಳು ಬರುತಿಹರು
ಈ ಖೂಳರ ಆಟ ನಿಲ್ಲಿಸಲೆಂದು
ಜನಸಮುದಾಯವೆ ಎದ್ದೇಳಿ

ದಶಾವತಾರ

ದಶಾವತಾರದ ಸಂಪುಟದಲ್ಲಿ
ಶತಾವತಾರದ ಅಕ್ಷರಮಾಲೆ
ಬೆಂದೊಡಲಿನ ಈ ನೆಲದಲ್ಲಿ
ನಗೆಗಡಲಿನ ಮಣಿಮಾಲೆ

ದಶಾವತಾರ ಹಾಕುವ ಮಂತ್ರಿ
ದೇಶವ ಮಾರುವ ದಳ್ಳಾಳಿ
ಸಮಾಜ ಸೇವೆಯ ಸೋಗಿನ ಧಣಿಯು
ವಿಷ ಮಾರಾಟದ ರೂವಾರಿ

ನಗೆ ಹೊಗೆಯಾಗುವ, ಹೊಗೆ ಮುಗಿಲಾಗುವ
ಹುಲಿ ಬೆಕ್ಕಾಗುವ ನರಿ ನವಿಲಾಗುವ
ದಶಾವತಾರದ ಪರಿ ನೋಡಣ್ಣ

ದಶಾವತಾರದ ದಂಧೆಯಲ್ಲಿ
ಕುರಿಮರಿಗಳ ಈ ಮಂದೆಯಲ್ಲಿ
ದಯೆಕರುಣೆಯ ಆ ಮುಖವೆಲ್ಲಿ

ನಕಲಿ ಶಾಮರ ಆರ್ಭಟದಲ್ಲಿ
ಇಲಿಹೆಗ್ಗಣಗಳ ಘರ್ಜನೆಯಲ್ಲಿ
ಅಸಲಿ ಪ್ರಭುವಿನ ದನಿಯೆಲ್ಲಿ.

ಗಾಂಧಿ

ಜನವು ದಿಕ್ಕೆಟ್ಟಿರಲು ಹಾರಿದಿರಿ ಹಕ್ಕಿಯಂತೆ,
ಭಾರತದ ಕಡುನೀಲ ಗಗನದಲ್ಲಿ.
ಜೀವಚೈತನ್ಯವನು ತುಂಬಿದಿರಿ ತಾಯಿಯಂತೆ,
ಬಸವಳಿದ ಜನಮನದ ಭಾವದಲ್ಲಿ.

ಛತ್ರಿಚಾಮರವಿಲ್ಲ, ಬಹುಪರಾಕುಗಳಿಲ್ಲ
ಭಾರತದ ಬೀದಿಯಲಿ ಅರಸನಂತೆ
ನಡೆದು ಬಂದಿರಿ ನೀವು, ನೊಂದ ಜೀವಿಯ ಕಂಡು
ತಬ್ಬಿಕೊಂಡಿರಿ ಬಾಚಿ, ತಂದೆಯಂತೆ

ಆಫ್ರಿಕದ ರೈಲಿನಲಿ ಕರಿಯನೆಂದಬ್ಬರಿಸಿ
ನೆಲಕೆ ದೂಡುತ ಕೇಕೆ ಹಾಕಿದವರ
ಮೃಗಬಲವ ಮೆಟ್ಟಿದಿರಿ, ದೇಶದಿಂದಟ್ಟಿದಿರಿ
ಬಿಳಿಯ ಸೂರ್ಯನ ನೀವು ಮುಳುಗಿಸಿದಿರಿ

ಜಾತಿಮತಗಳ ವಿಷದ ಮಂಜು ಕರಗಲಿ ಎಂದು
ಬಿಸಿಲಿನಲಿ ತಿರುಗಿದಿರಿ ದೇಶವೆಲ್ಲ,
ಹುಲ್ಲುಗರಿಕೆಗು ಕೂಡ ಪ್ರಾಣಮಾನಗಳುಂಟು
ಎಂಬುದನು ಸಾರಿದಿರಿ ಲೋಕಕ್ಕೆಲ್ಲ

ನೀವು ಧನ್ಯರು ಗಾಂಧಿ, ನೀವು ಮಾನ್ಯರು ಗಾಂಧಿ,
ನಾವಿಂದು ಜಡಮತಿಗಳೇಕಾದೆವು
ಅಂತರಂಗದ ಮಾತ ಏಕೆ ಮರೆತವು ನಾವು
ಏಕೆ ಭಾರತವನ್ನು ಬಲಿಕೊಟ್ಟೆವು.

ಕಣ್ಣಾವಲು

ಪ್ರೀತಿಯ ಗಂಗೆ ಹರಿಯುತಲಿರಲಿ
ಅಂತರಂಗದ ಕಣಿವೆಯಲಿ
ಮೈತ್ರಿಯ ಮಲ್ಲಿಗೆ ಪರಿಮಳ ಬೀರಲಿ
ಎದೆಯಾಳದ ಹೂದೋಟದಲಿ.

ದೀಪದ ಹುಳುಗಳು ದಾರಿಯ ತೋರಲಿ
ಕಗ್ಗತ್ತಲ ಈ ಕಾಡಿನಲಿ
ಪಾರವಾಳಗಳು ಪುಳಕದಿ ಹಾರಲಿ
ಭಯದಲಿ ನಲುಗಿದ ಬಾನಿನಲಿ.

ಉರಿಯಿದೆ ವಿಷವಿದೆ ಇರಿಯುವ ಅಲಗಿದೆ
ಎನ್ನುವ ಅಂಜಿಕೆ ಈಗೇಕೆ
ಕನಸು ಕವಿತೆಗಳ ಹುಣ್ಣಿಮೆಯಿರಲು
ಮುಂದಿನ ದುಗುಡದ ಮಾತೇಕೆ.

ಮಣ್ಣಿನ ಋಣದಲಿ ಕಣ್ಣನು ತೆರೆದೆವು
ಬೆಳೆದೆವು ಬೆಳಕಿನ ಕರುಣೆಯಲಿ
ಕಪ್ಪುದೇವತೆಯ ಕಣ್ಣಾವಲಿನಲಿ
ಅರಳಲಿ ಚೇತನ ಬಾಳಿನಲಿ.

ಕನವರಿಕೆ

ಭೂಮಿ ಆಕಾಶಗಳ ಅಂತರ ಅಳಿದು
ನಕ್ಷತ್ರದ ಗೊಂಚಲಿಳಿಯಲೆಂದು
ಅಡವಿಯ ನಿದ್ದೆಯಲ್ಲಿ ನದಿ ಬಳುಕುವುದನ್ನು
ಸದಾ ನೋಡಲೆಂದು
ಅಪರಿಚಿತ ಕಣಿವೆಗಳಲ್ಲಿ ಪ್ರೀತಿಯ ಪ್ರವಾಹ ಉಕ್ಕಿ
ಭೀತಿಯ ಬಂಡೆಗಳು ಕರಗಲೆಂದು
ನನ್ನ ಕವಿತೆ ಕನವರಿಸುತ್ತದೆ.

ನಡುಹಗಲಿನಲ್ಲಿ ಕಲ್ಲು ಹೊತ್ತಿರುವ
ಸುಡುವ ನೆತ್ತಿಗೆ ಸಿಂಬೆಯಾಗಲೆಂದು
ಗುರುತು ಸಿಕ್ಕದ ಮಕ್ಕಳು ಗುನುಗಿ
ಹೆತ್ತವರಿಗೆ ನೆಪ್ಪಾಗಲೆಂದು
ಅಪರಾತ್ರಿಯಲಿ ಕತ್ತು ಹಿಸುಕುವ ಕೈಗಳು
ಬೆಚ್ಚಿ ಕೆಳಗಿಳಿಯಲೆಂದು
ನನ್ನ ಕವಿತೆ ಹಂಬಲಿಸುತ್ತದೆ.

ಕಲ್ಲು ಕಟ್ಟಡದೆದುರು ಕೈಚೆಲ್ಲಿ ಕುಳಿತವರ
ನಿಟ್ಟುಸಿರು ಧಿಕ್ಕಾರವಾಗಲೆಂದು
ಒದೆತ ಹೊಡೆತಕ್ಕೆ ಸಿಕ್ಕಿ ಭೂಗತರಾದವರು
ಒಂದೇ ನೆಗೆತಕ್ಕೆ ಉತ್ತರ ಕೊಡಲೆಂದು
ಅಕ್ಷರಗಳ ಅಗ್ನಿಕುಂಡದಲ್ಲಿ
ಸಿಟ್ಟು ಧಗಧಗಸಿ ಉರಿಯುತ್ತಿರಲೆಂದು
ನನ್ನ ಕವಿತೆ ಹಾರೈಸುತ್ತದೆ.

ಸಭ್ಯ ಕೊಲೆಗಡುಕರನ್ನು
ಕಾನೂನುಬದ್ಧ ದರೋಡೆಕೋರರನ್ನು
ಗೌರವಸ್ಥ ಲಂಚಕೋರರನ್ನು
ಮೆಚ್ಚಿ ಎಲ್ಲರೂ ತಲೆಬಾಗುವಾಗ
ನನ್ನ ಕವಿತೆ ಮರುಗುತ್ತದೆ.

ಸನ್ಮಾನದ ಉನ್ಮಾದಕ್ಕೆ
ಸತ್ಯವಂತಿಕೆಯ ಪೊಳ್ಳು ಜಾಹಿರಾತುಗಳಿಗೆ
ಹಣದ ಥೈಲಿಯ ಸದ್ದುಗಳಿಗೆ
ಎಲ್ಲರೂ ದನಿಗೂಡಿಸುವಾಗ
ನನ್ನ ಕವಿತೆ ನಿಶ್ಯಬ್ಧವಾಗುತ್ತದೆ.

ಪಂಚ ನದಿಗಳ ಹಾಡು

ಕಂಬನಿಯ ಕಾಲುವೆಯು ಹರಿಯುತ್ತಲಿಹುದೇಕೆ
ಪಂಚ ನದಿಗಳು ಹರಿವ ನಾಡಿನಲ್ಲಿ
ಮನೆಮನದ ಒಳಗೆಲ್ಲ ದಟ್ಟಹೊಗೆ ನಿಟ್ಟುಸಿರು
ಕೂಗಿ ಕುಣಿಯುವ ಸಾವು ಕೊನೆಯಾಗದೆ

ಜಾತಿಮತಗಳ ಹುಚ್ಚು ಕಾಳಸರ್ಪಗಳಾಗಿ
ಕಂದಮ್ಮಗಳ ಕಣ್ಣ ಕುಕ್ಕುತಿಹುವು
ಗೋಧಿಯನು ಬೆಳೆವಲ್ಲಿ ಕೋವಿಗಳ ಬೆಳೆಯಾಗಿ
ಮುಗ್ಧರೆದೆಗಳು ಚೂರುಚೂರಾದವು

ಹಕ್ಕಿಗಳು ಚುಕ್ಕೆಗಳು ಮುಗಿಲ ಸಾಲಿನ ಬದಲು
ಕತ್ತು ಹಿಸುಕುವ ಕಯ್ಯಿ ಬಾನಿನಲ್ಲಿ
ಹೂ ಹಣ್ಣು ಹೆಜ್ಜೇನು ಗೆಜ್ಜೆಗಳ ದನಿಯಿಲ್ಲ
ಒಡಲ ಸೀಳುವ ಬೆಂಕಿ ಭೂಮಿಯಲ್ಲಿ

ಬಯಲೊಳಗೆ ಬನದೊಳಗೆ ಸುಡುವ ಬಂಡೆಯ ಮೇಲೆ
ಭೋರೆಂದು ವಿಷಗಾಳಿ ಬೀಸುತಿಹುದು
ನದಿಕೊಳ್ಳ ಹೊಳೆಹಳ್ಳ ಕಡಲ ನೀರುಗಳಲ್ಲಿ
ಅಣ್ಣತಮ್ಮರ ರಕ್ತ ಸೇರುತಿಹುದು

ಪ್ರಾಣಮಿತ್ರರು ಕೂಡ ಗುರುತು ಸಿಕ್ಕದ ಹಾಗೆ
ಕತ್ತಲೆಯು ಬಲೆ ಬೀಸಿ ಕುಣಿಯುತಿಹುದು
ಸಮತೆ ಸೋದರಭಾವ ಮಮತೆ ಪ್ರೀತಿಯ ಬೆಳಗಿ
ತಣಿಸಿದ್ದ ಹೊಂಬೆಳಕು ಏನಾಯಿತೊ

ಹಕ್ಕಿಗಳು

ಬೆಟ್ಟವ ಹತ್ತಿ ಬೆಟ್ಟವ ಇಳಿಯುವ
ಬಾಲಕರಣ್ಣ ನಾವುಗಳು
ಆಳ ಪಾತಾಳದ ಕರಾಳ ನೋವನು
ಕಂಡವರಣ್ಣಾ ನಾವುಗಳು

ಕುರಿಗಳ ಕಾಯ್ದು ದನಗಳ ಮೇಯಿಸಿ
ಹಾಲನು ಕುಡಿಯದೆ ಹೋದವರು
ಓದುವ ಬರೆಯುವ ಭಾಗ್ಯವು ಸಿಗದೆ
ಗಿಡಗಳ ಜೊತೆಯಲಿ ಬೆಳೆದವರು.

ಎಂಜಲು ತೊಳೆದು ಗಂಜಲ ಬಳಿದು
ಗಂಜಿಯ ಕಾಣದೆ ದುಡಿದವರು
ಗುಡಿಗೋಪುರದ ಬಣ್ಣಗಳಾಗಿ
ಚಳಿಯನು ತಡೆಯದೆ ಕುಸಿದವರು

ಉರಿಬಿಸಿಲಲ್ಲಿ ಉರಿಯುವ ಎಲೆಗಳು
ಬೂದಿಯ ಕಣಗಳು ನಾವುಗಳು
ಬಿರಿಯುವ ಮೊದಲೇ ಬಾಡುವ ಹೂಗಳು
ಕಮರುವ ಬಣ್ಣದ ಕನಸುಗಳು

ಹೊತ್ತನು ಅರಿಯದ ದಿಕ್ಕನು ಕಾಣದ
ಸೀಳುದಾರಿಯ ಪಯಣಿಗರು
ನೋವಿನ ಹಾಡಿನ ಕತ್ತಲ ನಾಡಿನ
ಬೆಳಕನು ಅರಸುವ ಹಕ್ಕಿಗಳು.

ಶಬ್ದ

ಕುಣಿವ ಸುಂಟರಗಾಳಿ ಬೇಲಿದಾಟಿದ ಹಾವು
ಅಲೆವ ಹುಂಜನ ಸದ್ದೆ ಕೇಳಿಸಿದ್ದು
ಹೆಬ್ಬಂಡೆ ಮೇಲಿಂದ ಬಾಡಬಕ್ಕದ ಹೂವು
ಬಸವಳಿದು ಬಿದ್ದುದನೆ ಆಲಿಸಿದ್ದು.

ನಡುಮನೆಯ ಗೋಡೆ ತೊಟ್ಟಿಲಿನಲ್ಲಿ ಮಲಗಿರುವ
ಡೋಲುವಾಲಗ ಡೊಳ್ಳ ಮೊರೆತವಿಲ್ಲ
ಕಾಗೆ ಕೋಗಿಲೆ ಹಕ್ಕಿ ಕೊಕ್ಕರೆಯ ಸಂತತಿಗೆ
ನೀರುನೆರಳಿಲ್ಲದೆಯೆ ಸೊಲ್ಲೆ ಇಲ್ಲ

ಅಂಗಡಿಯ ಸಾಲಿನಲಿ ಸಂದಣಿಯ ಸುಳಿವಿಲ್ಲ
ಚೌಕಾಸಿಯೂ ಇಲ್ಲ ಎಂದಿನಂತೆ
ಎಲ್ಲವೂ ಮಾರಾಟವಾಗಿಹುದು ಮುಂದೇನು
ದಳ್ಳಾಳಿ ಕಣ್ಣಲ್ಲಿ ಬೆಳೆದ ಚಿಂತೆ.

ಮೈದುಂಬುವುದು ನಿಂತು ದೇವತೆಯ ಸೊಲ್ಲಡಗಿ
ಗುಡಿಸುತ್ತ ಕತ್ತಾಳೆ ಬೆಳೆಯಿತಲ್ಲ
ಜನಸಾಗರದ ಮುಂದೆ ಮಾತುಗಳು ಮಂಕಾಗಿ
ಮೌನವೇ ಮಡುಗಟ್ಟಿ ನಿಂತಿತಲ್ಲ.

ಕಂಗೆಟ್ಟ ನಟ್ಟಿರುಳ ಭೇದಿಸುತ ಗಡಿದಾಟಿ
ಎದೆಮೀಟಿ ಬಂದದ್ದು ಯಾವ ಸದ್ದು
ಕೊಲೆಗಡುಕರಾಡುತಿಹ ಪಿಸುಮಾತೆ ಈ ದನಿಯು
ಅಂತರಂಗದ ಸಾವೆ ಕೇಳಿಸಿದ್ದು.

ವಿಜಯೋತ್ಸವ

ಧಣಿಗಳ ವಿಜಯೋತ್ಸವದಲ್ಲಿ
ನಮ್ಮಂಥವರಿಗೇನು ಕೆಲಸ

ಹಸು ಮಕ್ಕಳನ್ನು ತುಳಿದ ಗುಜ್ಜಾನೆಗಳ
ಗುಣಗಾನ ಮಾಡೋಣ
ಊರೂರಿಗೆ ಬೆಂಕಿ ಇಟ್ಟು ಲೋಕಕ್ಕೇ ಬೆಳಕಾದೆವೆಂದು
ಬೀಗುವವರನ್ನು ಅಭಿನಂದಿಸೋಣ
ದತ್ತಿ ಬಿಟ್ಟವರನ್ನು ದನಿಯೆತ್ತಿ ಹೊಗಳೋಣ

ಚಾಮುಂಡಿಯಿಂದ ಹತನಾದ ಮಹಿಷನೇ
ನಮ್ಮೂರಿನಲ್ಲಿ ಕದಿರನಾಗಿ ಹುಟ್ಟಿ
ಮಾರಮ್ಮನ ಗಂಡನಾಗಿ ತಲೆದಂಡವ ತೆತ್ತ
ಕದಿರನಾಗಿ ಹುಟ್ಟಿದ್ದು, ಅದನ್ನು ಮುಚ್ಚಿಟ್ಟಿದ್ದು
ಅವನ ಅಪರಾಧ
ಯಾಕೆಂದರೆ ಈ ದೇವತೆಗಳು
ಜಾತಿಜಾತಿಯ ನಡುವೆ ನಿಂತ ಎತ್ತರದ ಗೋಡೆಗಳು

ಬನ್ನಿಯಲ್ಲಿ ಬಚ್ಚಿಟ್ಟ ಆಯುಧಗಳು
ಪ್ರಶ್ನೆ ಕೇಳುವ ಹುಡುಗ
ಬೆಲೆಯ ಕೇಳುವ ರೈತ
ಕೂಲಿ ಕೇಳುವ ಕಾರ್ಮಿಕನ ಮೇಲೆ
ಎರಗದಿರಲಿ

ಜೋಪಡಿಯಲ್ಲಿ ಉರಿಯುವ ಒಲೆಯ ಮೊರೆತದಂತೆ
ಬದುಕು ಸತ್ಯವಾಗಿರಲಿ
ಕಾಂಪೌಂಡು ಗೋಡೆಯ ಮೇಲೆ ಬರೆದ
ಕವಿತೆಯ ಸಾಲಿನಂತೆ ಸರಳವಾಗಿರಲಿ.

ಪುರುಷಾರ್ಥ

ಮನೆಯ ಸೂರಿನ ಮೇಲೆ ಕುಂತಿರುವ ಹಿರಿಯರು
ಪ್ರೇಮದುರಿಯಲಿ ಬೆಂದು ಬಳಲಿದವರು
ತುಂಬು ಎದೆ, ಕೆಂಪು ತುಟಿ, ಕಣ್ಣ ಬೆಳಕಿನ ತುಂಬ
ಬಾಳಿನರ್ಥವ ಕಂಡು ಮಿಂಚಿದವರು

ಎಲ್ಲೆಂದರಲ್ಲಲ್ಲಿ ಬೆಳೆಸಿ ಮಲ್ಲಿಗೆ ಬಳ್ಳಿ
ಕಂಡ ಕಮಲಗಳನ್ನು ಕಾಡಿದವರು
ತುಟಿಯು ಹತ್ತಿರವಾಗಿ ಪ್ರೀತಿ ಎತ್ತರವಾಗಿ
ಮುಗಿಲ ನಾಚಿಸಿ ನೀರ ಹರಿಸಿದವರು

ಹಗಲು ರಾತ್ರಿಯ ಕುಣಿತ ಹರಿವ ನದಿಗಳ ಮೊರೆತ
ಕುದುರೆಗಳ ಕೆನೆತನದಲಿ ಚಂದವಿತ್ತು
ಪುಟ್ಟ ಗುಡಿಸಲಿನಲ್ಲಿ ಮೈಮಾರಿಕೊಳುತಿರುವ
ಹೆಣ್ಣ ಸಂಕಟದಲ್ಲಿ ಆಳವಿತ್ತು.

ದೇವರೆದುರಲಿ ದೇಹ ದಾಹವನು ಇಂಗಿಸಿದ
ದೇವದಾಸಿಯ ಮಕ್ಕಳೇನಾದರು
ದೇವರನು ಧಿಕ್ಕರಿಸಿ ಮಾನವತೆಯನು ನಂಬಿ
ಉಳ್ಳವರ ಎದೆಗವರು ಮುಳ್ಳಾದರು

ಬೆತ್ತಲೆಯ ರಾಜ್ಯದಲಿ ರಾಜರಾಣಿಯರಾಗಿ
ಮಾಡಿದರು ಗಂಧರ್ವ ಕಾರುಬಾರು
ಬಿಸಿಯ ಅಪ್ಪುಗೆಯಲ್ಲಿ ಮಲಗಿರುವ ಕೋಮಲೆಗೆ
ಜಾತಿಮತಗಳ ನೆನಪು ಇಲ್ಲ ಚೂರು.

ಮಂಕಾದ ಜನ

ಮಣ್ಣಲ್ಲಿ ಅರಳಿ ಮುಗಿಲಲ್ಲಿ ಮಿನುಗಿ
        ಬೆಳಕಾಗಿ ಬರುವ ಜನರೇ
ನೂರಾರು ತೇರು ಹರಿಯುವಾ ದಿವಸ
        ಮಂಕಾಗಿ ನಿಂತಿರೇಕೆ.

ಈ ನೆಲದ ತುಂಬ ನಗೆ ಹೊನಲ ಹರಿಸಿ
        ಪೈರು ಪಲ್ಲಕ್ಕಿ ತರುವ ಜನರೇ
ಧರೆ ಹತ್ತಿ ಉರಿದು ಒಣಭೂಮಿ ಸುರಿದು
        ಜಲಬತ್ತಿ ಹೋದುದೇಕೆ

ಇವನೆನ್ನ ಅಣ್ಣ ಅವನೆನ್ನ ತಮ್ಮ
        ಜಗವೆಲ್ಲ ಬಂಧು ಬಳಗ
ಅಂತರಂಗದ ಈ ಹಂಬಲವು
        ಮೈದಾಳಲಾರದೇನು

ನುಚ್ಚಾದ ಕನಸು ತಲೆಯೆತ್ತಿ ಮತ್ತೆ
        ಹಸಿರಾಗಿ ಹೊಳೆಯದೇನು
ಮನವ ಹೊಕ್ಕಿರುವ ಕತ್ತಲೆಯ ಕಳೆದು
        ಹೊಸಲೋಕ ಕಾಣದೇನು

ನೊಂದವಗೆ ನಲಿವು ಹಸಿದವಗೆ ಅನ್ನ
        ಬಸವಳಿದ ತಲೆಗೆ ಸೂರು
ಬಿದ್ದವರ ಮುಖದ ಕಂಬನಿಯ ತೊಳೆದು
        ಕೈಯೆತ್ತಿ ಬರಲಿ ನೂರು.

ಅಗ್ನಿ ಶಾಮಕರು

ಧರೆಹತ್ತಿ ಉರಿದಾಗ ಗಂಗೆಯನು ತಂದವರು
ಕಟ್ಟಡವು ಕುಸಿದಾಗ ಹೆಗಲು ಕೊಟ್ಟವರು
ಕೆರೆಗೆ ಬಿದ್ದವನನ್ನು ಬಿಗಿದಪ್ಪಿ ತಂದವರು
ಅಗ್ನಿಶಾಮಕರು ನಮ್ಮ ಸೋದರರು.

ಹಗಲು ಸುಡುತ್ತಿದ್ದರೂ ನಡುರಾತ್ರಿಯಿದ್ದರೂ
ಕರೆಬಂದ ಕೂಡಲೇ ಮಡದಿ ಮಕ್ಕಳ ಬಿಟ್ಟು
ಓಡೋಡಿ ಬರುವವರು
ತಂಗಳೂಟವನುಂಡು ಹೊಗೆಯ ಕಾಡಿಗೆ ನುಗ್ಗಿ
ಹೋರಾಡುವವರು
ಹಲವು ದಿನಗಳಿಗೊಮ್ಮೆ ಕರುಳ ಕುಡಿಗಳ ಕಂಡು
ನಗೆ ಚೆಲ್ಲುವವರು
ಅಗ್ನಿಶಾಮಕರು ನಮ್ಮ ಸೋದರರು.

ಜಾತಿವೈರದ ಜ್ವರವು ಏರುತಿಹುದಣ್ಣ
ಕೋಮುದ್ವೇಷದ ಬೆಂಕಿ ಉರಿಯುತಿಹುದಣ್ಣ
ಈ ಬೆಂಕಿಯಾರಿಸಲು ಪ್ರೀತಿಗಂಗೆಯು ಬೇಕು.
ಎಲ್ಲರೂ ಅಗ್ನಿಶಾಮಕರಿಂದು ಆಗಬೇಕು.

ಯುಗಾದಿ – ೧

ನೆಲದ ಹೆರಿಗೆಯ ನೋವು ಅಂಗುಲಂಗುಲ ಕರಗಿ
ಹಸಿರು ಚಿಗುರಿನ ಕುಣಿತ ಹೂನಗೆಯ ನೋಟ
ಅವಳಿ ಫಲ ತಂದಿತ್ತು ಆಕಾಶದೊರೆನಂಟು
ಮರಗಿಡದ ಬಳಗಕ್ಕೆ ಉಡುಗೊರೆಯ ಹಬ್ಬ

ಹೂಗೊಂಚಲಿಗೆ ಬಣ್ಣ, ಪುಟ್ಟ ಹಕ್ಕಿಗೆ ಹಾಡು
ಬೆಟ್ಟಕ್ಕೆ ಎದೆಯೆತ್ತಿ ನಿಲ್ಲುವ ಧೈರ್ಯ
ಹೊಳೆಯ ನೀರಿಗೆ ಉಗುರು ಬಿಸಿ
ಗಾಳಿ ನೆರಳಿಗೆ ತಂಪು ತಂದ ಯುಗಾದಿ
ಕುಸಿದು ಕೊರಗುವ ಬಾಳಿಗೇನ ತಂದೆ.

ಬೇವು ಬೆಲ್ಲದ ಅದೇ ಹಳೆಯ ಪಾಠ
ಸ್ವಂತದ್ದೋ ಸಾಲದ್ದೋ ಒಬ್ಬಟ್ಟಿನೂಟ
ಬದುಕೇ ಇಲ್ಲದ ಅನಾದಿಯ ಲೆಕ್ಕಕ್ಕೆ
ನೀನೊಂದು ಶಬ್ದ ಮಾತ್ರ.

ಅರಳದೆ ಕಮರಿ ಹೋಗುವ ಜೀವಗಳು
ನಕ್ಷತ್ರದಂತೆ ನಗಲಾರದ ಬಾಳುಗಳು
ಎದೆಸೆಟೆದು ನಿಲ್ಲಲಾರದ ದೇಹಗಳು
ಕಣ್ಣು ಕುಕ್ಕುವಾಗ ಇದು ಯಾರ ಯುಗಾದಿ ?

ಬೀದಿವಾಸಿಯ ಅಳಲು ಜೋಪಡಿಯ ಕತ್ತಲು
ದಿನದಿನದ ಅನ್ನಕ್ಕೆ ಮಾರಿಕೊಳ್ಳುವ ಮಯ್ಯಿ
ಆಸೆಯಲಿ ಚಾಚಿರುವ ಲಂಚಕೋರನ ಕಯ್ಯಿ
ಯುಗಯುಗವು ಕಳೆದರೂ ಅಳಿಯದೇನು.

ಯುಗಾದಿ – ೨

ಓ ಯುಗಾದಿ ಎಂದಿನಂತೆ
ಹರುಷವನ್ನೆ ತಂದರೂ
ಮಾವಿನೊಡನೆ ನೋವ ತಂದೆ
ಯಾರು ಏನೆ ಅಂದರು.

ಸಂಕಟಗಳು ಮುಗಿಲಿಗೇರಿ
ಹಾರಾಟವ ಮಾಡಿದೆ
ಬಾಳ್ವೆಗಾಗಿ ಜನಜಂಗುಳಿ
ಹೋರಾಟವ ಮಾಡಿದೆ

ಉಳ್ಳವರಿಗೆ ಹಬ್ಬವಾಯ್ತು
ಕವಿಕುಲಕ್ಕೆ ಕಬ್ಬವಾಯ್ತು
ಇಲ್ಲದವರಿಗೇನಾಯಿತು
ಹೇಳೆ ಯುಗಾದಿ.

ಸ್ವರ್ಗವನ್ನೇ ಭುವಿಗೆ ತಂದು
ನಲಿಯುತಿರುವ ಬನಗಳೆ
ಹಸಿರು ತೊಟ್ಟ ಗಿಡಗಳೆ, ಹಳದಿಯುಟ್ಟ ಮರಗಳೆ
ಇದಕುತ್ತರ ಹೇಳಿರಿ

ಬಾಳಿನೆಲ್ಲ ಕೇಡು ಕಳೆದು
ನವಯುಗಾದಿಯಾಗಲಿ
ಎಲ್ಲರೆದೆಯ ನೋವು ಅಳಿದು
ನವಜೀವನ ಮೂಡಲಿ

ಯುಗಾದಿ – ೩

ವನರಾಶಿಗೆ ಚಿರನೂತನ
ಸುಗ್ಗಿ ತರುವ ಯುಗಾದಿ
ಜನಕೋಟಿಯ ಹಂಬಲಗಳ
ಹೂವರಳಿಸಿ ಸಾಗಲಿ

ನವಭಾವದ ನವಬದುಕನು
ಹೊಸ ಯುಗಾದಿ ತೆರೆಯಲಿ
ಪ್ರೀತಿಯ ಬೆಳದಿಂಗಳಲ್ಲಿ
ಭೂಮಿಯು ಮೈ ಮರೆಯಲಿ

ಕೆಡುಕಿನ ಕಡುಕತ್ತಲಿಳಿದು
ಹಕ್ಕಿಹಾಡು ಮೊಳಗಲಿ
ಕಂದನ ಕಣ್ ಬೆಳಕಿನಲ್ಲಿ
ಹೊಸ ಯುಗಾದಿ ಮೂಡಲಿ

ಯುಗ ಯುಗಗಳ ನಗೆಯ ಹೊನಲು
ಬತ್ತದಂತೆ ಹರಿಯಲಿ
ಜಗದ ಹೆಗಲ ನೊಗದ ಭಾರ
ಹಗುರವಾಗುತಿಳಿಯಲಿ.

ಮರಕ್ಕೆ ಬಿದ್ದ ಉರಿಯು ಆರಿ
ಮತ್ತೆ ಬನವು ಚಿಗುರಲಿ
ದೂರವಾದ ಹೃದಯಗಳಲಿ
ಮೈತ್ರಿಭಾವ ಸುಳಿಯಲಿ

ಯುಗಾದಿ – ೪

ಮಂಡೆಲಾ ಬಿಡುಗಡೆಯ ಬೆನ್ನ ಹಿಂದೆ
ಬಂದ ಈ ಯುಗಾದಿ
ಜಾತಿಮತಗಳ ಜೈಲುವಾಸಿಗಳನ್ನು
ಬಿಡಿಸಿ ಕರೆತಂದೀತೆ
ಪ್ರೀತಿ ಮಾನವತೆಗಳ ಬಯಲ ಕಡೆಗೆ.

ಕಂಡ ಕಂಡವರನ್ನು ಗುಂಡಿಟ್ಟು ಕೊಂದ
ಪುರುಷ ಸಿಂಹರ ವಿಚಾರಣೆಯ ದಿನಕ್ಕಾಗಿ
ಕಾದು ಕುಳಿತ ಮುದುಕನಂತೆ
ಯುಗಾದಿ ಭರವಸೆಗಳ ಪ್ರವಾದಿ.

ಈ ಸಲದ ಯುಗಾದಿ
ಮಧ್ಯ ವಯಸ್ಕನ ಉದ್ಯೋಗದ ಕನಸಿನಂತೆ
ಲಂಚಕೋರನ ಮೃದುವಾದ ಮಾತಿನಂತೆ
ಏರುವ ಬೆಲೆ, ಇಳಿಯುವ ಘನತೆಯಂತೆ
ಚಿಂತಾಜನಕವಾಗದಿರಲಿ.

ಜನಸ್ತೋಮದ ಹಸಿರ ನಡುವೆ
ಬಾಂಧವ್ಯದ ಹೂಗಳರಳಿ
ಸಮಾನತೆಯ ಸಂತಸವನು
ಋತುವಸಂತ ಸಾರಲಿ.

ಯುಗ ಯುಗಗಳಿಂದ ಧಗಧಗಿಸುತಿರುವ
ಜನಮನದ ಕಾಡಿನೊಳಗೆ
ಪುಟ್ಟ ಕಂದನ ಕಣ್ಣಲ್ಲಿ ಕಂಡ
ಕನಸಿರಲಿ ಕೊನೆಯವರೆಗೆ.

ಯುಗಾದಿ – ೫

ಮರಗಿಡಕ್ಕೆ ಉಡುಗೆ ತೊಡಿಸಿ
ನೆಲಕೆ ಹಸಿರು ಹೊದಿಕೆ ಹಾಸಿ
ಮೇಲೆ ಮುಗಿಲ ಮಾಲೆಕಟ್ಟಿ
ತೇಲಿಬರುವ ಯುಗಾದಿ

ಪಕ್ಷಿಸಂಕುಲಕ್ಕೆ ಗಾನ
ಗಿರಿ ಸಾಲಿಗೆ ದಿವ್ಯಮೌನ
ಹರಿವನದಿಗೆ ಕಡಲ ಧ್ಯಾನ
ತಂದುಕೊಟ್ಟ ಯುಗಾದಿ

ತಂಪು ತರುವುದೆಂದಿಗೆ
ಉರಿಯುವ ಗುಜರಾತಿಗೆ
ಮಾವಿನ ಹೊಸ ತೋರಣವನು
ಮನೆಮನೆಗೂ ಓರಣವನು
ಬೇವು ಬೆಲ್ಲ ಒಬ್ಬಟ್ಟನು
ಹೊತ್ತು ತರುವ ಯುಗಾದಿ

ಜನಮಾನಸವೊಂದಾಗಿ
ಜಾತಿಮತದ ಬೇಲಿದಾಟಿ
ಸಮಾನತೆಯ ಹಾದಿಯಲ್ಲಿ
ಹೆಜ್ಜೆ ಇಡುವುದೆಂದಿಗೆ

ಸೌಹಾರ್ದದ ಹೊಂಬೆಳಕು
ಮೂಡಿ ಬರುವುದೆಂದಿಗೆ

ಕಾರ್ಲ್‌ಮಾರ್ಕ್ಸ್

ಮರೆಮಾಚಿ ಹೋಗಿದ್ದ ಜಗದ ನಿಜಗಳನೆಲ್ಲ
ಅರಿಯಲೆಂದಡಿಯಿಟ್ಟೆ ಮುಳ್ಳುಗಳ ಮೇಲೆ
ನಿದ್ದೆಮಂಪರುಕವಿದ ಮನುಕುಲವನೆಚ್ಚರಿಸಿ
ದುಡಿವ ಜನತೆಗೆ ನೀನು ಕಣ್ಣಾಗಿ ನಿಂತೆ.

ದಿಕ್ಕೆಟ್ಟ ಹಕ್ಕಿಯೊಂದಲೆವಂತೆ ಕಾಡುಗಳ
ಕಷ್ಟಗಳ ಕತ್ತಲೆಯ ಕಂಡೆ ನೀನು
ಜ್ಞಾನಗೊಂಡಾರಣ್ಯ ಹೊಕ್ಕವನು ಹೊರಬಂದೆ
ಭೂಮಿ ಬೆಳಗಿಸಿದಂಥ ಬೆಳ್ಳಿಚುಕ್ಕೆ.

ಗಿರಣಿಯಂತ್ರದ ಕೆಳಗೆ ಕೈಜಜ್ಜಿ ಹೋದವನು,
ಮೈಮಾರಿಕೊಳುತಿರುವ ಬಡವೆ ಹೆಣ್ಣು,
ಛಾವಣಿಯೆ ಕುಸಿದವನು, ಹಸಿದು ಕಂಗೆಟ್ಟವನು
ಇವರೊಳಗೆ ನಿನ್ನನ್ನು ಕಂಡುಕೊಂಡೆ.

ತೊಟ್ಟಚಿಂದಿಯ ಕಂಡು ತೇಪೆಹಾಕುವ ಬದಲು
ಹೊಸಬಟ್ಟೆಯನು ತರುವ ಕನಸ ಕಂಡೆ
ನೊಂದ ಎದೆಯಲಿ ನಗೆಯ ಹೂವ ಅರಳಿಸಲೆಂದು
ಹೋರಾಟಗಳ ಕಟ್ಟಿ ಕನವರಿಸಿದೆ.

ಬಿಗಿದ ಕೋಳಗಳನ್ನು ಕಡಿದೆಸೆವ ಬಿಡುಗಡೆಯ
ನಿನ್ನ ಕನಸುಗಳಿಂದು ಅರಳುತಿಹವು
ನ್ಯಾಯ ಕೇಳಲು ಹೊರಟ ಜನರ ಮೆರವಣಿಗೆಯಲಿ
ಬಂದು ಮುನ್ನಡೆಸುವುದು ನಿನ್ನ ನೆನಪು.

ಬೆಂಜಮಿನ್ ಮೊಲಾಯಿಸ್

ನೆಲದಾಳದ ಚಿನ್ನದ ಅದಿರು
ತೋಟಗಳ ಹಣ್ಣುಹಂಪಲು ಮಾತ್ರ ಗೊತ್ತಿದ್ದ
ಬಿಳಿಯ ದೊರೆ ಇಂದು ನಿದ್ದೆಗೇಡಿ
ಅವನ ಅರಮನೆಯ ಸುತ್ತ ಬೆಳೆಯುತ್ತಿರುವ
ಧಿಕ್ಕಾರದ ಹೊಸ ಬೆಳೆಯನ್ನು
ಉಣ್ಣಲಾರದ ಉಪವಾಸಿ
ತನ್ನ ಜಾತಿ ನಾಯಿಯೇ ಪರಮಾಪ್ತನೆಂದು ತಿಳಿದ
ಬಿಳಿಯರಸ ಜನಕೋಟಿಯ ಮೆರವಣಿಗೆ ಎದುರಲ್ಲಿ ಒಬ್ಬಂಟಿ.

ಆಫ್ರಿಕಾದ ಕತ್ತಲಲ್ಲಿ ಮಂಕಾಗಿ ಮಿನುಗುತ್ತಿದ್ದ ಕ್ರಾಂತಿಹಣತೆ
ಇದ್ದಕ್ಕಿದ್ದಂತೆ ಹತ್ತೂ ದಿಕ್ಕುಗಳನ್ನು ಬೆಳಗಿತು
ಮಾಯಾವಿ ಮಾಂಡೆಲಾ ಎಣ್ಣೆಯಾಗಿದ್ದ
ಬೆಂಜಮಿನ್ ಮೊಲಾಯಿಸ್ ಬತ್ತಿಯಾಗಿದ್ದ.

ಸಾವಿನ ಕುಣಿಕೆ ಬೆಂಜಮಿನ್ನನ ಕೊರಳ ತಬ್ಬಿತ್ತು
ಸಾವು ಬಿಳಿಯರ ಸಾಮ್ರಾಜ್ಯಕ್ಕೊದಗಿ ಬಂದಿತ್ತು
ಬೂಟುಗಾಲಿನ ಒದೆತಕ್ಕೆ ಹುಚ್ಚುನಾಯಿ ಕಡಿತಕ್ಕೆ
ಬಣ್ಣ ಬಂದೂಕುಗಳ ಕುರುಡು ಆಳ್ವಿಕೆಗೆ
ರಕ್ತದುತ್ತರ ಕೊಟ್ಟವನೆ
ನೇಣುಗಂಬಕ್ಕಂಜದವನೆ
ಬೆಂಜಮಿನ್ ಮೊಲಾಯಿಸ್
ವ್ಯರ್ಥವಲ್ಲ ನಿನ್ನ ಬಲಿದಾನ.

ಹೆಬ್ಬಂಡೆಯಡಿಯಲಿ ಹಸಿರು ಚಿಗುರಿ
ಹುಲ್ಲುಗಾವಲ ರೂಪ ತಾಳುವುದು
ಹೆತ್ತ ಕರುಳಿನ ಅಳಲ ತೊರೆ
ವರ್ಣಭೇದವ ಕೊಚ್ಚಿ ಎಸೆಯುವುದು
ಕಪ್ಪು ಹೃದಯದ ಬೆಳ್ಳಿ ಬೆಳಕು
ಬಿಳಿಯೆದೆಯ ಕತ್ತಲನು ಅಳಿಸಿ ಹಾಕುವುದು.

ರಾಮಚಂದ್ರ ಶರ್ಮ – ೭೦

ಭೋಗಾದಿಯಲ್ಲಿ ಹುಟ್ಟಿದರೂ ಭೋಗಲಾಲಸೆಯಿಲ್ಲ
ಯೋಗಿಯ ಧಿಮಾಕಿಲ್ಲ
ಶರ್ಮರದು ಅಖಂಡ ಜೀವನಪ್ರೀತಿ

ಇವರ ಹುಡುಗಾಟ ಕಂಡು ಹುಡುಗರಿಗೆ ಅಸೂಯೆ
ಹುಡುಗಿಯರಿಗೆ ಆಶ್ಚರ್ಯ

ಮಾತು ಮಾತಿಗೂ ಕೇಕೆ ಹಾಕಿ ನಗುವ ಶರ್ಮರಲ್ಲಿ
ಕೆಳಗೆ ಬಿದ್ದವರಿಗಾಗಿ ಎರಡು ಹನಿ ಕಂಬನಿಯುಂಟು

ಕನ್ನಡ ಕಾವ್ಯದಲ್ಲಿ ಶರ್ಮರ ಸ್ಥಾನವನ್ನು
ವಿಮರ್ಶಕರು ಸದಾ ಚರ್ಚಿಸುತ್ತಿರಲಿ
ಶರ್ಮರು ಕನ್ನಡ ಕಾವ್ಯಪದ್ಮಕ್ಕಂಟಿದ ದುಂಬಿ
ಎಂಬುದಕ್ಕೆ ಯಾರದೂ ಭಿನ್ನಾಭಿಪ್ರಾಯವಿಲ್ಲ

ದೇವರನ್ನು ನಂಬದ ಶರ್ಮರಿಗೆ
ಜನರನ್ನು ಸುಲಭವಾಗಿ ನಂಬುವ ಮೂಢನಂಬಿಕೆ

ಈ ಒಪ್ಪೊತ್ತಿನಲ್ಲಿ ಶರ್ಮರಿಗೆ ಎಪ್ಪತ್ತು
ಅವರ ಅಂತಃಕರಣದ ಉಲ್ಲಾಸ ತುಂಟತನ ಎಲ್ಲರಿಗು ಬರಲಿ.

ಶೂದ್ರ

ಕ್ಷೌರ ಮಾಡಿಕೊಂಡರೆ ಬುದ್ಧನಂತೆ ಕಾಣುವ
ಶೂದ್ರ ಹಲವು ಸಾರಿ
ಬುಲ್ಗಾನಿನ್ ಗಡ್ಡಧಾರಿ.

ಶೂದ್ರ ಬುದ್ಧನಂತೆ ಕಿಲಾಡಿಯಲ್ಲ
ಶೂದ್ರನದು ವೈರಾಗ್ಯದ ಬಾಡಿಯಲ್ಲ.
ಹುಡುಗಿಯರನ್ನು ಮಾತನಾಡಿಸಲು
ಗುಪ್ತಪ್ರೇಮಿಗಳು ಹೆದರುತಿದ್ದ ಕಾಲದಲ್ಲಿ
ಶೂದ್ರ ಮುನ್ನುಗ್ಗಿ ಹೆಂಗೆಳೆಯರಿಗೆ
ಮಾರ್ಕ್ಸಿಸಂ ಬೋಧಿಸಿದನು.
ತಾಯಿ ಮನಸ್ಸಿನ ಶೂದ್ರ ಕುಳಿತಿದ್ದಾನೆ
ಬೋಧಿವೃಕ್ಷದ ಕೆಳಗೆ
ನಾನಾ ಚಿಂತೆಯೊಳಗೆ.

ಆಸೆ

ಭರತ ಮಾತೆಯ ಪ್ರೀತಿ ತುಂಬಿ ಹರಿಯುತ್ತಿರಲು
        ಕಾವೇರಿ ಗಂಗೆಯರ ರೂಪದಲ್ಲಿ
ರಾಷ್ಟ್ರಧ್ವಜವನು ನೋಡಿ ರಾಷ್ಟ್ರಗೀತೆಯ ಹಾಡಿ
ಪುಳಕಗೊಳ್ಳಲಿ ಎಳೆಯ ಬಾಲರೆಲ್ಲ.

ದಾಳಿಗಳ ನೋವಿನಲಿ ಬಂಧನದ ಬವಣೆಯಲಿ
        ಬಸವಳಿದ ಈ ತಾಯ ಮಕ್ಕಳೆಲ್ಲ
ಜಾತಿಮತ ಭಾಷೆಗಳ ಭೇದದಲಿ ಮೈಮರೆತು
        ಗುರುತಿಲ್ಲದವರಂತೆ ಬಾಳಬಹುದೆ.

ಬಿಸಿಲು ಬಿರುಗಾಳಿಯಲಿ ಕಂಗೆಡುವೆ ಧಗೆಯಲ್ಲಿ
        ಅನುಗಾಲ ಜೊತೆಗೂಡಿ ಸಾಗಿದವರು
ಯಾರು ವಿಷ ಹಿಂಡಿದರೊ ಯಾವ ಮಾಟದ ಫಲವೊ
        ದ್ವೇಷ ದಳ್ಳುರಿಯಲ್ಲಿ ಬೀಳಬೇಕೆ.

ಎಚ್ಚೆತ್ತ ಜನಕೋಟಿ ದನಿಯೆತ್ತಿ ಹಾಡಿರಲು
        ಒಡಕುಗಳ ಕತ್ತಲೆಯು ಕಳೆಯಿತೆಂದು
ಜನಮನದ ತೋಟದಲಿ ಐಕ್ಯತೆಯ ಹೂವರಳಿ
        ಜೀವಕಳೆ ಮತ್ತೊಮ್ಮೆ ಮೂಡಿತೆಂದು.

ಈ ದೇವರುಗಳು

ಅರೆ ಡೋಲಿನಬ್ಬರಕೆ ಮುಗಿಲುದ್ದ ನೆಗೆದು
ಕೇಕೆಯನು ಹಾಕುತ್ತ ಕುಣಿದು ಕುಪ್ಪಳಿಸಿ
ಇನ್ನು ಬರಲಿಲ್ಲೆಂದು ತಂಗಿ ಕರಿಯಮ್ಮ
ಕಣ್ಣೀರ ಮಿಡಿಯುವನು ವೀರಾಂಜನೇಯ

ಗಾಳಿ ಮಳೆ ಚಳಿಯಿಂದ ದೇವರುಳಿಯಲಿ ಎಂದು
ಗುಡಿಯ ಕಟ್ಟಲು ಹೋದ ಭಕ್ತರನು ತಡೆದು
ಊರ ಜನರೆಲ್ಲರಿಗು ಸೂರು ಸಿಕ್ಕುವವರೆಗು
ತನಗೆ ಗುಡಿ ಬೇಡೆಂದ ಈ ಕೆಂಚರಾಯ

ಕುಸಿದ ಕಂದನ ಕಣ್ಣ ಬೆಳಕಾರುವುದ ಕಂಡು
ಹಸುಗೂಸನೊಯ್ಯಿರೋ ಆಸ್ಪತ್ರೆಗೆಂದು
ಕಳೆದ ಕಂದನ ಜೀವ ಮರಳಿ ತಂದಾಕೆ
ಎಲ್ಲಮ್ಮ ತಾಯಿ ಅವಳೆಲ್ಲಿಯವಳು.

ಭಕ್ತಾದಿಗಳ ಬವಣೆ ಪರಿಹರಿಸದಿದ್ದರೆ
ಉರಿವ ಮೆಣಸಿನ ಘಾಟು ಸಹಿಸುವುದು ಹೇಗೆಂದು
ಕುದುರೆ ಮೇಲಿದ್ದರೂ ಬೆವರಿ ಕಂಗಾಲಾದ
ಸಗಣಿ ರಂಗನು ಯಾವ ಮೂಲದವನು.

ಸಂಸ್ಕೃತವ ತಿಳಿಯದ ಸ್ವರ್ಗದಲಿ ನೆಲೆಸದ
ಕಪ್ಪು ದೇವತೆಗಳು ಬರಿಗಾಲಿನವರು
ಬೆರಗೆ ಸಿರಿಯಾಗಿದ್ದ ನಮ್ಮ ಹಿರಿಯರ ಕನಸು
ಮೈಯ್ಯಾಗಿ ನಮ್ಮೊಡನೆ ಬಾಳುವವರು.

ಪ್ರೀತಿ ಮತ್ತು ಜ್ಯೋತಿಷ್ಯ

ಊರೂರ ತೇರಿಗೆ ಹಣ್ಣುದವನವ ಎಸೆದು
ಜೀವ ಕೊಟ್ಟರು ಎಲ್ಲ ಜಾತ್ರೆಗಳಿಗೆ
ಹುಣ್ಣಿಮೆಯ ಹಿಡಿದಿಟ್ಟು ಪ್ರೀತಿ ಪದಕವ ಮಾಡಿ
ಬೆಳಕ ತಂದರು ಕತ್ತಲಾಳಗಳಿಗೆ.

ವಧುವ ಕೇಳಲು ಬಂದ ವರನ ಶಾಪವು ತಟ್ಟಿ
ಬಂಡೆಗಲ್ಲಿಗೆ ಹಡಗು ಢಿಕ್ಕಿಯೊಡೆದು
ಕಣ್ಣೀರ ಚೆಲ್ಲುತ್ತ ಜಾತಿಗಳ ಜರೆದರು
ದಿಕ್ಕೆಟ್ಟ ಹಕ್ಕಿಗಳು ಮೊರೆಯುವಂತೆ.

ಆಪತ್ತು ಬಂದವಗೆ ಜ್ಯೋತಿಷಿಯೆ ಕಡುನೆಂಟ
ಅಲೆದು ಕಂಡನು ತರುಣ ಜ್ಯೋತಿಷಿಯನು
'ಒಲಿದ ಹೆಣ್ಣಿನ ಜೊತೆಗೆ ಹೋಗು ಯೋಜನದೂರ
ಅರಗಳಿಗೆ ನಿಲ್ಲದಿರು ಈ ಊರಿನಲ್ಲಿ.'

ಬಿರುಗಾಳಿಯಂತವರು ಬಿರಬಿರನೆ ನಡೆದರು
ಬಿಟ್ಟ ಬಾಣದ ರೀತಿದಿಕ್ಕುಗಳ ಬಗೆದರು
ಏಳು ಬೆಟ್ಟವ ದಾಟಿ ಮೋಡಗಳ ಸೀಳಿ
ತಾರೆಗಳ ಗೊಂಚಲನು ಮಿನುಗಿಸುತ್ತ.

ಇತ್ತ ಹೊತ್ತಾಯಿತೆನುತ ಚಿಲ್ಲರೆ ಸದ್ದಿನಲಿ
ಜ್ಯೋತಿಷಿಯು ಜೋರಾಗಿ ಮನೆಗೆ ಬಂದ
'ಒಲವ ಹಂಬಲಿಸಿ ಹೋದವಳ ಮರೆತುಬಿಡಿ'
ಎಂಬ ಮುದ್ದಿನ ಮಗಳ ಪತ್ರ ಕಂಡ.

ಭೂಮಿ ಗುಂಡಗಿದೆ

ಭೂಮಿ ಗುಂಡಗಿದೆ
ಭೂಮಿ ಗುಂಡಗಿದೆ

ಚಪ್ಪಟೆ ಎಂಬುದು ಅಪ್ಪಟ ಸುಳ್ಳು
ಸೂರ್ಯಚಂದ್ರ ದೇವರು ಅಲ್ಲ
ಕಲ್ಲು ಮಣ್ಣಿನ ಮುದ್ದೆಯು ಅಣ್ಣಾ
ಕಟ್ಟು ಕಥೆಗಳ ನಂಬಿ ಕೆಟ್ಟಿರಿ
ಭೂಮಿ ಗುಂಡಗಿದೆ.

ತನ್ನನೆ ಸುತ್ತುವ ಹೊನ್ನಿನ ಭೂಮಿ
ಕತ್ತಲೆ ಬೆಳಕ ಕಾಣುವುದು
ಸತ್ಯವ ಕಾಣಲು ಪ್ರಾಣ ನೀಡುವ
ಜೀವ ಬೆಳಕ ಪಡೆಯುವುದು

ದೇವರು ಆತ್ಮ ಕಂಡವರಿಲ್ಲ
ಶಾಸ್ತ್ರಪುರಾಣ ಸುಳ್ಳಿನ ಕಂತೆ
ಅರಮನೆ ಗುರುಮನೆ ಮೋಸದ ಜಾಲ
ಮುಗಿಯಲಿ ಶೋಷಣೆ ಮಾಡುವ ಕಾಲ.

ಭೂಮಿ ಗುಂಡಗಿದೆ
ಭೂಮಿ ಗುಂಡಗಿದೆ

ಮಾತಿಗೆ ಮಾತು ಕೊಟ್ಟವನ

ಮಾತಿಗೆ ಮಾತು ಕೊಟ್ಟವನ
ಮತಿಯ ಕೆಡಿಸಿಬಿಟ್ಟರು
ಸತ್ಯ ಸಾರಲು ಹೋದವನ
ಮಿಥ್ಯದ ಮನೆಗೆ ದೂಡಿದರು.

ಭೂಮಿ ಸುತ್ತುವುದೆಂದವನನ್ನು
ತಮ್ಮ ಸುತ್ತ ಸುತ್ತಿಸಿದರು
ಭೂಮಿ ದುಂಡಗಿದೆಂದವನನ್ನ
ಬುದ್ಧಿ ಮೊಂಡ ಮಾಡಿದರು.

ದೇವರು ಇಲ್ಲ ಎಂದವನನ್ನು
ದೇವರು ಮಾಡಿ ಬಿಟ್ಟರು
ಹತ್ತವತಾರ ಸುಳ್ಳೆಂದವನ
ಹನ್ನೊಂದಕ್ಕೆ ಏರಿಸಿದರು.

ಧಣಿಗೆ ಎದುರು ಬಿದ್ದನವನನ್ನ
ಆನೆ ಕಾಲಿಗೆ ಕೊಟ್ಟರು
ದಂಗೆ ಎದ್ದು ನಿಂತವನನ್ನ
ರಥದ ಕಾಲಿಗೆ ಕಟ್ಟಿದರು.

ಚಳಿಯ ಹಾಡು

ಚಳಿಯು ಬಂತಲ್ಲಾ
ಇಳೆಯ ಮೇಲೆ ಚಳಿಯು ಬಂತಲ್ಲ

ಮಂಜಿನ ಕಂಬಳಿ ಹೊದ್ದುಕೊಂಡು
ಮಾತೇ ಇಲ್ಲದ ಕಳ್ಳನ ರೀತಿ
ಬಾಗಿಲ ಕಿಂಡಿ ತೂರಿತ್ತು
ಕಂಡವರನ್ನು ಹಿಡಿದಿತ್ತು.

ಮರಗಳಿಗೆಲ್ಲ ಮಂಜಿನ ಟೋಪಿ
ಬೆಟ್ಟದ ಸಾಲಿಗೆ ಬೆಳ್ಳಿಯ ಬಟ್ಟೆ
ಕಂಡಲ್ಲೆಲ್ಲಾ ಇಬ್ಬನಿ ಹಬ್ಬ
ಬಂದವರಾರೋ ಹೋದವರಾರೋ
ತಿಳಿಯುವುದೇ ಇಲ್ಲ.

ಗಡ ಗಡ ಎಂದು ನಡುಗಿಸುತ್ತಿತ್ತು
ತಬಲ ಬಡಿದವು ಹಲ್ಲುಗಳು
ಕುಣಿದವು ಕಯ್ಯಿ ಕಾಲುಗಳು
ಬಡವರ ಬಿಡಲಿಲ್ಲ
ಹಣವಂತರ ಬಿಡಲಿಲ್ಲ
ಫ್ಯಾಷನ್ ಹುಡುಗಿಯ ಬಿಡಲೇ ಇಲ್ಲ
ಇಳೆಯ ಮೇಲೆ ಚಳಿಯು ಬಂತಲ್ಲ.

ಮಲಗಿದ್ದವರನು ಕೂರಿಸಿತು
ಕುಂತವರನ್ನು ನಿಲ್ಲಿಸಿತು

ನಿಂತವರನ್ನು ಓಡಿಸಿತು
ಚಳಿಯು ಬಂತಲ್ಲ
ಚಳಿಯನ್ನು ಗೆಲ್ಲುವ ವೀರನು ಕಾಫಿ
ಕುಡಿಯಲು ಕಾಸಿಲ್ಲ
ಕಾಫಿ ಕುಡಿಯಲು ಕಾಸಿಲ್ಲ

ಚಳಿಗೆ ಹೆದರಿ ಗಂಡು ಹೆಣ್ಣು
ತಿನ್ನಲು ಹೋಗಿ ಪ್ರೀತಿಯ ಹಣ್ಣು
ಮಕ್ಕಳಾದವಲ್ಲ
ಮನೆಮನೆಯಲ್ಲಿ ಊರಿನ ತುಂಬ
ಕುಣಿದು ನಿಂತವಲ್ಲ.

ಗಯ್ಯಾಳಿ ಹೆಂಡತಿ ಕಾಟದಿಂದ
ತಪ್ಪಿಸಿಕೊಂಡ ಸಂತಸದಿಂದ
ಮುಂಜಾನೆಯಲಿ ಗುಮಾಸ್ತನೊಬ್ಬ ಡ್ಯೂಟಿಗೆ ಹೊರಟಿದ್ದ
ಬಾಗಿಲು ದಾಟಿ ಬಂದದ್ದೇ ತಡ
ಮೂಗಿನ ಮೇಲೆ ಭಾರಿ ಹೊಡೆತ
ಚಳಿಯು ಹಿಡಿದಿತ್ತು
ಹೊಂಚು ಹಾಕಿ ಚಳಿಯು ಹಿಡಿದಿತ್ತು.

ಬೆಳದಿಂಗಳು

ಬೆಳದಿಂಗಳ ರಾತ್ರಿಯಲ್ಲಿ ದೇವರ ಕಾಡಿನಲ್ಲಿ
ಉರಿಬೆಂಕಿ ಬಿದ್ದು ಹೊಗೆಯಾಡಿತ್ತು

ಪ್ರಶಾಂತ ಬೆಳದಿಂಗಳಲ್ಲಿ ಪವಿತ್ರ ಗಂಗೆಯಲ್ಲಿ
ವಿಷ ಜೀವಾಣು ತುಳುಕಿತ್ತು.

ಬೆಳದಿಂಗಳ ರಾತ್ರಿಯಲ್ಲಿ ಬಾಗ್ದಾದಿನ ಬೀದಿಯಲ್ಲಿ
ರಕ್ತದ ಕೋಡಿ ಹರಿದಿತ್ತು

ಬೆಳ್ಳನೆ ಬೆಳದಿಂಗಳಲ್ಲಿ ಬೆಂಗಳೂರು ಗಲ್ಲಿಯಲ್ಲಿ
ಪುಟ್ಟ ಕಂದನ ಚೀತ್ಕಾರ ಕೇಳಿಸಿತು

ಬೆಳದಿಂಗಳ ರಾತ್ರಿಯಲ್ಲಿ ಹೊಂಗಡಲ ತೀರದಲ್ಲಿ
ಮನೆಗೆ ಹಿಂದಿರುಗದ ಮೀನುಗಾರನಿಗಾಗಿ
ಹೆಂಡತಿ ಮಕ್ಕಳು ಕಾಯುತ್ತಿದ್ದರು.

ನಡುರಾತ್ರಿ ಏಕಾಂಗಿ ಹೊರಟಿದ್ದವನಿಗೆ
ಬೆಳದಿಂಗಳು ಜೊತೆಗಾರನಾಯಿತು.

ಬುದ್ಧ ಗುರುವಿಗೆ ಬಾಳ ಸತ್ಯ ಹೊಳೆದದ್ದು
ಗುರು ಮರುಳಸಿದ್ಧರು ತರಳ ಬಾಳೆಂದದ್ದು
ಬೆಳದಿಂಗಳಲ್ಲಿ ಬೆಳದಿಂಗಳು ತತ್ವವಾಗುವುದು

ತಾಜ ಮಹಲಿನ ಮೇಲೆ
ಗೋರಿ ಗುಡಿಸಲ ಮೇಲೆ
ಸಾಗರದ ತೀರಗಳ ಮೇಲೆ ಬಿದ್ದು
ಬೆಳದಿಂಗಳು ಕವಿತೆಯಾಗುವುದು

ಕಿ. ರಂ. ನಾಗರಾಜ

ತಾಪತ್ರಯಗಳ ಬಗ್ಗೆ ಎಂದೂ ಚಿಂತಿಸದ ಕಿ. ರಂ.
ಸಮುದಾಯದ ಹಿತಚಿಂತಕ

ಈ ಜೆನ್ ಮಾಸ್ಟರ್ ಸೂಫಿಯೂ ಹೌದು
ಎಲ್ಲಕ್ಕಿಂತ ಕನ್ನಡದ ಸಂತ

ಕಿ. ರಂ. ಹೋಗದಿದ್ದರೆ, ಬೆಂಗಳೂರಿನ ಪುಸ್ತಕದಂಗಡಿಗಳು
ಭಣಗುಡುತ್ತವೆ

ಕಿ.ರಂ. ದನಿ ಕೇಳಿಸದಿದ್ದರೆ
ಗಾಂಧಿ ಬಜಾರಿನ ಫುಟ್‌ಪಾತ್ ನೀರಸವಾಗುತ್ತದೆ

ಕಿ. ರಂ. ರಜಾ ಹಾಕಿದ್ದು ಗೊತ್ತಾದ ವಿದ್ಯಾರ್ಥಿಗಳು
ಕ್ಯಾಂಟೀನಿನಲ್ಲೇ ಉಳಿದರು.

ಡಿ. ಆರ್. ನೆನಪು

ಕುಸಿದುಬಿದ್ದನೆ ವೀರ ಯೋಧ ಇದ್ದಕ್ಕಿದ್ದಂತೆ
ನುಗ್ಗಿ ಬರುವ ಒಂಟಿ ಸಲಗ ಹಿಂದೆ ಸರಿದಂತೆ
ನೆಲವು ಮಾಡಿದ ಸದ್ದಿನಂತೆ ನದಿಯು ದಿಕ್ಕನು ತಪ್ಪಿದಂತೆ
ಉರಿಯುತ್ತಿದ್ದ ಹಣತೆಯೊಂದು ಉರುಳಿ ಬಿದ್ದಂತೆ

ಧರಣಿಯೊಡಲಿನ ಚಿನ್ನವನ್ನು ಬಿಡದೆ ಅಗೆದು ತೆಗೆದನಣ್ಣ
ಬೆರಗಿನಲ್ಲಿ ಮೆರೆದನಣ್ಣ ಸೋತು ಪ್ರೇಮಕ್ಕೆ
ಕಡಲಿನಾಳವ ಕಂಡನಣ್ಣ ಬೆಂಕಿಯಾಗಿ ಉರಿದನಣ್ಣ
ಮುಗಿಲ ದಾಟಿ ಹೋದನಣ್ಣ ಮೇಲು ಮೇಲಕ್ಕೆ

ಚಂಡಮಾರುತಗಳನು ತಡೆದು ಸ್ತಬ್ದಗೊಳಿಸಿದನು
ಕಂಡ ಕಾಮನಬಿಲ್ಲ ಸೆಳೆದು ಬಾಚಿ ತಬ್ಬಿದನು
ಸಂತರೆಲ್ಲ ಸೇರುವಲ್ಲಿ ಅಂತರಿಕ್ಷದ ವೇದಿಯಲ್ಲಿ
ಹೊಸ ಜಗತ್ತಿನ ಸೃಷ್ಟಿಗಾಗಿ ಯಾಗ ಮಾಡಿದನು.

ಪಂಚಭೂತದ ವಂಚನೆಯನು ಸಹಿಸಲಾಗದೆ ಸಿಡಿದು ನಿಂತು
ಬುದ್ಧಿಭಾವದ ಬಾಣ ಹೂಡಿ ಯುದ್ಧ ಮಾಡಿದನು
ಎದುರು ಸಿಕ್ಕಿದ ಬಂಡೆಗಳನು ನುಚ್ಚು ನೂರು ಮಾಡಿದವನು
ನಡೆದನಣ್ಣ ತಾಯಿಯೊಡನೆ ಕಂದ ಹೋದಂತೆ

ಹಗಲು ಇರುಳಿನ ಪಗಡೆಯಲ್ಲಿ ಕಡಲಿನಲೆಗಳ ಪರಿಷೆಯಲ್ಲಿ
ದಾಳವಾದನು ದೀಪವಾದನು ನೋಡುತ್ತಿದ್ದಂತೆ
ಪ್ರಾಣಮಿತ್ರ ಹೋದನೆಲ್ಲಿಗೆ ಬಂದುದೆಲ್ಲಿಂದ
ಕಾಮಧೇನು ಕಲ್ಪವೃಕ್ಷವ ತಂದುದೆಲ್ಲಿಂದ.

ಹುಳಿಮಾವು

ಕಂಡ ಕಂಡಲ್ಲೆಲ್ಲ ನುಗ್ಗುತಿದೆ ಮದ್ದಾನೆ
ಮಾವುತನ ಅಂಕುಶದ ಭಯವಿಲ್ಲದೆ
ರಾಜ ಬೀದಿಗಳಲ್ಲಿ
ಬುಸುಗುಟ್ಟುತಲೆಯುತಿದೆ
ಇಷ್ಟು ದಿನ ಒಳಗಿದ್ದ ವಿಷನಾಗರ

ಕನ್ನಡದ ಬಾನಿನಲಿ ಕಟ್ಟಿ ಕಾಮನಬಿಲ್ಲು
ನೆಲಕೆ ಪುಳಕವ ತಂದ ಧೀರನಿಲ್ಲ
ಕಾಡು ಹೂವಿಗೆ ವನಪು
ಕಪ್ಪು ಬಣ್ಣಕೆ ಹೊಳಪು
ಜನಕೆ ಗೆಲುವನು ತಂದ ಯೋಧನಿಲ್ಲ

ಜಾಣ ಜಾಣೆಯರೆದೆಯ
ನಂದನವು ಬೆಂಗಾಡು
ಹುಳಿಮಾವು ವರಗಿತ್ತು ಬೂದಿಯಾಗಿ
ಉಪ್ಪರಿಗೆ ಮೇಲಿಂದ ಊಳಿಡುವ ನರಿಹಿಂಡು
ಪಿಂಡಕ್ಕೆ ಕಾದಿತ್ತು ಕಾಗೆಯಾಗಿ

ಕಾಕಿ, ಖಾದಿ, ಕಾವಿ ಕೇಕೆಯನು ಹಾಕುತಿವೆ
ಜಿಗಣೆಗಳಿಗೆಲ್ಲೆಲ್ಲು ಅಭಿನಂದನೆ
ಲಂಚಕೋರನಿಗಿದ್ದ ಸಂಕೋಚ ಈಗಿಲ್ಲ
ಸುಳ್ಳುಗಾರನಿಗಿಲ್ಲ ಸಣ್ಣ ಅಳುಕು
ಬ್ರಹ್ಮರಾಕ್ಷಸನಂತೆ ಕುಣಿದು ಕುಪ್ಪಳಿಸುತ್ತ
ತೇರ ಮೇಲೆರಿದ್ದು ಈಗ ನೆನಪು

ಕವಿಯೊಂದು ಬೇಲಿಮೇಗಳ
ಹೂವು, ಅವನೆಂದು
ತನ್ನಂತರಂಗಕ್ಕೆ ತಾನು ಬದ್ಧ

ಗ್ರಾಮದೇವತೆಗಳು

ಏಳೂರ ಹಬ್ಬ ಎಂದಿಗಾಗುವುದೆಂದು
ಕಾದು ಕುಳಿತಿದ್ದ ಗ್ರಾಮದೇವತೆಗಳು
ಸಾರಿಕ್ಕದೆ ಗಂಗಾ ಪೂಜೆ ದಕ್ಕದೆ
ಸ್ನಾನಾದಿಗಳಿಲ್ಲದೆ ಮಂಕಾದವು

ರಂಗದ ಕುಣಿತಕ್ಕೆ ಹಂಬಲಿಸಿ ಸೋತು
ಕೈಕಾಲಾಡದೆ ಮೂಲೆ ಸೇರಿದವು
ಹದಿನಾಲ್ಕು ಲೋಕಕ್ಕೆ ಅನ್ನ ಕೊಟ್ಟ ದೇವತೆಗಳು
ಎಡೆಮಡೆಯಿಲ್ಲದೆ ಕುಸಿದು ಕಂಗೆಟ್ಟವು

ಹಾಡಿನ ಮೋಡಿಗೆ ಬೀಗುವ ದೇವತೆಗಳು
ಬಾಯಿಬೀಗ ಧರಿಸಿ ಮೌನವಾದವು
ಒಡವೆ ಸೀರೆ ಕಿರೀಟದಾಸೆ ಬಿಟ್ಟು
ಬೇವಿನುಡಿಗೆಯ ತೊಟ್ಟು ನಿಂತವು

ನಡೆಮುಡಿ ಪಲ್ಲಕ್ಕಿ ಮಂಗಳವಾದ್ಯವಿಲ್ಲದೆ
ಉರುಳಿದವು ದೈವಗಳು ಮೈಲು ಮೈಲು
ಉರಿಬಿಸಿಲ ಝಳದಲ್ಲಿ ಅಗ್ನಿ ಕೊಂಡದ ಮೇಲೆ
ಮೆರವಣಿಗೆ ಹೊರಟವು ಸಾಲುಸಾಲು

ಕುಬೇರನ ಸಾಲದ ಶೂಲಕ್ಕೆ ಸಿಕ್ಕಿ ದೇವತೆಗಳು
ಜೀತಗೇದವು
ಏಳೇಳು ಜನ್ಮಕ್ಕು ತೀರದ ಬಡ್ಡಿ, ಸಾಲಕ್ಕಂಜಿ
ಆತ್ಮಹತ್ಯೆಯ ದಾರಿ ಹಿಡಿದವು.

ರಾಮಕೃಷ್ಣ ಹೆಗಡೆಯವರಿಗೆ

ಕೃತ್ತಿಕಾ ನಕ್ಷತ್ರ ಉರಿದುರಿದು ಬಿತ್ತು
ದೇವಲೋಕದ ಪಕ್ಷಿ ಗರಿಗೆದರಿ ಹಾರಿತ್ತು
ರಾಮಕೃಷ್ಣ ಹೆಗಡೆ ಯುಗವು ಮುಗಿದಿತ್ತು.

ಸಂಕಷ್ಟಗಳ ಕತ್ತಲೆಯ ಈನಾಡಿನಲ್ಲಿ
ಮುಗುಳುನಗೆಯ ಬೆಳದಿಂಗಳ ಚೆಲ್ಲಿ ಬೆಳಕಾದಿರಿ
ಮುಗಿಲೆತ್ತರಕ್ಕೇರಿ ಕಡಲಾಳಕ್ಕಿಳಿದು
ಗೊಂಡಾರಣ್ಯವ ನುಗ್ಗಿ ಗುದ್ದಾಡಿದಿರಿ
ಹೆಂಗರುಳನುಳಿಸಿಕೊಂಡು

ನಾಡಜನಮನವನ್ನು ಗೆದ್ದಿರಿ
ಹಳ್ಳಿಗಾಡ ಕಂದಮ್ಮಗಳ ಕಣ್ಣಲ್ಲಿ ಬೆಳಕು
ವಿಧವೆ ಸೋದರಿಯರ ಮುಖದಲ್ಲಿ ಗೆಲವು
ಹಣ್ಣಾದ ಜೀವಗಳಿಗೊಂದು ನೆರಳು ತಂದು

ಸ್ನೇಹ ಸೌಜನ್ಯದ ಅಮೃತದ ನಿಧಿಯನ್ನು
ಹೊತ್ತು ತಂದಿರಿ ನೀವು ಗಂಧರ್ವ ಲೋಕದಿಂದ
ಸಂಗೀತಕ್ಕೆ ಸೋತು ಕುಣಿತಕ್ಕೆ ಮಣಿದು
ಸೂತ್ರಧಾರಿಯಾಗಿದ್ದೂ ಪಾತ್ರಧಾರಿಯಾದಿರಿ

ಜನಕೋಟಿ ನಿಮ್ಮ ನೆನೆಯುವುದು
ನೀವು ತೋಡಿಸಿದ ಬಾವಿ ಮಾಡಿಸಿದ ರಸ್ತೆ
ಬೆಳಗಿಸಿದ ದೀಪಗಳ ಸಾಲು ಕಂಡು
ಬಾಗಿ ಬಳಕುವ ಅಡಿಕೆತೆಂಗುಗಳ
ಎತ್ತರವ ಕಂಡು

ಅರ್ಕಾವತಿ

ಮಹಡಿಮನೆಯಲ್ಲಿ ಅಡುಗೆಮನೆಯಲ್ಲಿ
ವರದಕ್ಷಿಣೆಯ ಉರಿಯಿಂದ ಬೆಂದ
ಹೆಣ್ಣ ಕಣ್ಣೀರ ನದಿಯ ಮುಂದೆ
ನಿಂತಿದ್ದೇನೆ, ನಿರ್ಲಿಪ್ತನಂತೆ.

ಜೋಪಡಿಯಲ್ಲಿ ಕುಸಿದ ಬಡವನ
ಎದೆಯಿಂದ ಹರಿದ ರಕ್ತದ ಮಡುವಿನ
ಎದುರು ಕುಂತಿದ್ದೇನೆ, ಹೇಡಿಯಂತೆ

ಹೋರಾಟಗಾರನ ಹೋಳಾದ
ಅಸ್ಥಿಪಂಜರದ ಬೆಟ್ಟದ ಸಾಲು
ಬೆಟ್ಟದ ಸಾಲಿನಿಂದೇಳುವ ಸಿಟ್ಟಿನ ಹೊಗೆ
ಚಲಿಸದೆ ನಿಂತ ದಿಕ್ಕೆಟ್ಟ ಮುಗಿಲು
ಮರಗಿಡದ ಮೇಲೆಲ್ಲ ಚೆಲ್ಲಿದ ರಕ್ತ

ಗೋಳೋ ಗಾನವೋ ಈ ಗೊರವಂಕನ ದನಿ
ತಪ್ಪಿಸಿಕೊಂಡ ಕುರಿಮರಿಯ ಕೂಗು
ಮೌನ ಧರಿಸಿದ ಹುಣಸೆಯ ಮರ
ಕೊಂಬೆಯಲಿ ಚಿಂತೆಯಲಿ ಕುಂತ ಹಕ್ಕಿ

ಅಧಿಕಾರಸ್ಥನ ಹೃದಯ ಎಂದೂ ಕರಗದ ಈ ಬಂಡೆ
ಕಳೆದ ಪ್ರೀತಿಯಂತೆ ಉರುಳುವ ಭರವಸೆಯಂತೆ
ಮುಳುಗುತ್ತಿದ್ದಾನೆ ಸೂರ್ಯ
ನೀಲಾಕಾಶವನ್ನು ಕವಿಯುತ್ತಿದೆ
ಕೋಮುದ್ವೇಷದ ಕತ್ತಲು.

ಕಾಯುತ್ತೇನೆ,
ಆಸೆಯನ್ನು ಪುಟ್ಟ ಗೂಡಿನಲ್ಲಿ
ಜೋಪಾನವಾಗಿಟ್ಟುಕೊಂಡು
ಮತ್ತೆ ಹೊತ್ತು ಹುಟ್ಟುವತನಕ.

ಸಂತೆ

ದೇವಮಾನವರೆಲ್ಲ ಮಾರಾಟವಾಗುವರು
ಪಡುವಣದ ಏಳೂರ ಸಂತೆಯಲ್ಲಿ
ಒಂದು ಹೊರೆ ಕಟ್ಟಿಗೆಯೆ ಅಂದು ಸಾಕಾಗಿತ್ತು
ಇಂದು ಇದು ಆತ್ಮಗಳ ಮಾರುಕಟ್ಟೆ

ಪ್ರೀತಿ ವಾತ್ಸಲ್ಯಗಳ ನೀತಿಮಮಕಾರಗಳ
ಮಾರಾಟಕಿಟ್ಟವರು ಹಲವು ಜನರು
ಹುಸಿನಗೆಯ ಬೀರುವರು ಕೈಸನ್ನೆ ಮಾಡುವರು
ಪಂಚಭೂತಗಳನ್ನು ಕೊಳ್ಳುವವರು

ಮೌಲ್ಯ ಆದರ್ಶಗಳ ಅಂಗಡಿಯ ಸಾಲಿನಲಿ
ನ್ಯಾಯ ಬೇಕೇ ಎಂಬ ದೊಡ್ಡ ಕೂಗು
ಜಾತಿಜಾಗಟೆಯನ್ನು ಬಾರಿಸುವ ಜಾತ್ರೆಯಲಿ
ದೇಶಭಕ್ತಿಯದೊಂದು ಸಣ್ಣ ಸೋಗು

ಹೆಸರು ಗುರುತುಗಳಿಲ್ಲ ಯಾರಿಗೂ ಮುಖವಿಲ್ಲ
ಎಲ್ಲರೂ ಒಂದೊಂದು ಹಣದ ಥೈಲಿ
ಹಣದ ಪಾವತಿ ಮಾಡಿ ಅಳಬಹುದು ನಗಬಹುದು
ಕನಸು ಬೀಳುವುದಿಲ್ಲ ಬರಿಗೈಯಲಿ

ಹಂಗಿನರಮನೆಯಿಂದ ಪಾರಿವಾಳವು ಹಾರಿ
ತುಂಬೆಹೂವರಳಿ ಫಲ ಕೊಡಲಿ ನಿಂಬೆ
ಮೂಡಿ ಕಾಮನ ಬಿಲ್ಲು ಜನವೆದ್ದು ಕುಣಿದು
ಹಬ್ಬವಾಗಲಿ ನೀಲಿ ಮುಗಿಲಿನಲ್ಲಿ.

ಎರಡು ದಶಕಗಳಿಗೂ ಹಿಂದೆ ಮೊದಲ ಬಾರಿಗೆ ನಾನು ಗೆಳೆಯ ಡಾ. ಸಿದ್ಧಲಿಂಗಯ್ಯನವರ ಕವಿತೆಗಳನ್ನು ಓದಿದಾಗ ಬೆಚ್ಚಿ ಬಿದ್ದಿದ್ದೆ, ಕಾರಣ, ಕವಿಯ ವ್ಯಕ್ತಿತ್ವಕ್ಕೂ, ಕವಿತೆಗಳಿಗೂ ಇರುವ ವ್ಯತ್ಯಾಸ. ಅವರ ಕಾವ್ಯದಲ್ಲಿ ಕುವೆಂಪು ಲಯಗಳು ಪ್ರಧಾನವಾಗಿ ಕಾಣುತ್ತಿತ್ತು. ಆದರೆ ಕುವೆಂಪುಗಿಂತ ತೀರಾ ಭಿನ್ನವಾಗಿಯೂ ಇತ್ತು.

೨೦ನೇ ಶತಮಾನದ ಕನ್ನಡ ಕಾವ್ಯದಲ್ಲಿ ಡಾ. ಸಿದ್ಧಲಿಂಗಯ್ಯನವರಿಗೆ ಸ್ಥಾನವಿರುವುದು ಈ ಶತಮಾನದಲ್ಲಿ ಅವರು ದಲಿತರ ಆದಿಕವಿ ಎಂಬ ಕಾರಣಕ್ಕೆ ಮತ್ತು ಈ ಶತಮಾನದಲ್ಲಿ ದಲಿತರ ಆತ್ಮ–ಪ್ರತಿನಿಧೀಕರಣದ ಎಲ್ಲಾ ಸಮಸ್ಯೆಗಳೂ ಈ ಆದಿಕವಿಯಲ್ಲಿ ಎದ್ದು ಕಾಣುತ್ತವೆ.

೭೦ ಮತ್ತು ೮೦ರ ದಶಕದಲ್ಲಿ ಡಾ. ಸಿದ್ಧಲಿಂಗಯ್ಯನವರ ಕಾವ್ಯ ಮತ್ತು ದಲಿತ ಚಳುವಳಿಗಳು ಪರಸ್ಪರ ರೂಪಿಸಿಕೊಂಡಿದ್ದವು. ದಲಿತ ಹೋರಾಟದ ಎಲ್ಲಾ ಆಶಯಗಳೂ ಕವಿಯ ಕಾವ್ಯದಲ್ಲಿ ಪ್ರತಿಧ್ವನಿಸಿದವು.

೧೯೭೫ ರಿಂದಾಚೆಗೆ ದಲಿತರು ಹೊಸ ಪ್ರಜ್ಞಾವಂತ ಜನಾಂಗವಾಗಿ ಕರ್ನಾಟಕದಲ್ಲಿ ಡಾ. ಸಿದ್ಧಲಿಂಗಯ್ಯನವರ ಕವಿತೆಗಳ ಎರಕದಲ್ಲಿ ರೂಪುಗೊಂಡರು. ಅದಕ್ಕಾಗಿಯೇ ದಲಿತ ಮೆರವಣಿಗೆ ಬೀದರ್‌ನಿಂದ ಕೋಲಾರದ ತನಕ ಯಾವುದೇ ಮೂಲೆಯಲ್ಲಿ ನಡೆದರೂ ಅಲ್ಲಿ ಕವಿಯ ಹಾಡುಗಳು. ಅದಕ್ಕಾಗಿಯೇ ಇದು ಸಾರ್ವಜನಿಕ ಕಾವ್ಯದ ಅಂತಿಮ ಯಶಸ್ಸು. ಸಾರ್ವಜನಿಕ ಕಾವ್ಯ ತನ್ನ ಅತ್ಯುತ್ತಮ ಕ್ಷಣಗಳಲ್ಲಿ ಕವಿ ಮತ್ತು ಸಮಷ್ಟಿಯನ್ನು ಜೋಡಿಸುತ್ತದೆ. ಈ ದೃಷ್ಟಿಯಿಂದ ಬೇಂದ್ರೆಯ ನಂತರ ಅತ್ಯಂತ ಹೆಚ್ಚು ಸಾರ್ವಜನಿಕ ಅಸ್ತಿತ್ವವುಳ್ಳ ಕಾವ್ಯ ಬರೆದ ಕವಿಯೆಂದರೆ ಡಾ. ಸಿದ್ಧಲಿಂಗಯ್ಯನವರೇ ಇರಬೇಕು. ಡಾ. ಸಿದ್ಧಲಿಂಗಯ್ಯ ಈ ತನಕ ಮಹಾಸಾರ್ವಜನಿಕ ಕವಿ.

ಡಾ. ಡಿ.ಆರ್. ನಾಗರಾಜ್